12.42

7226

గిరిజాకల్యాణ నాటకం

వెంకటాచార్య

O,33,2 PUT
G m93
295

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

ಶ್ರೀರಸ್ತು

# GIRIJAKALYANA NATAKUM

# ಗಿರಿಜಾಕಲ್ಯಾಣನಾಟಕಂ.

ಎಂಬ ಈ ಗ್ರಂಥವು

ಶ್ರೀ ಶಂಭುಲಿಂಗ ಕೃಪಾ ಪೋಷಿತ ವೀರಶೈವಮತಸ್ಥರಾದ ಮೈಸೂರು ವೀರನಗೆರೆ ಚಿಟ್ಟದೈಯ್ಯನವರ ಪೌತ್ರರು ಪುಟ್ಟಣ್ಣನವರಿಂದ ರಚಿಸಲ್ಪಟ್ಟು ಈ ಗ್ರಂಥದ ಹಕ್ಕು ಯಾವತ್ತೂ ವೆಂಕಟಾಚಲಂ ಶೆಟ್ರಿಗೆ ಕೊಡಲ್ಪಟ್ಟಿರುತ್ತೆ.

ಮೈಸೂರು ಪುಸ್ತಕ ವ್ಯಾಪಾರಿ

ರಂಗಯ್ಯಶೆಟ್ರಿ

ಕುಮಾರರಾದ

ವೆಂಕಟಾಚಲಂಶೆಟ್ರಿ

ಸ್ವಕೀಯ

...ವಿಲಾಸ ಮುದ್ರಾಕ್ಷರಶಾಲೆಯಲ್ಲಿ ...ಸಿ ಪ್ರಕಟಿಸಲ್ಪಟ್ಟಿತು. ಮೈಸೂರು.

FIRST EDITION

...ಕ್ರಯ ೬ ಆಣೆ ೧೮೯೩ ಸಂ

...D—COPY RIGHT

O, 33, 2 PUT
G M93
295
320

ಸರಸ್ವತೀ ಭಂಡಾರ
ಪರಿಷತ್ತು
ನಾಟಕ. ಪೌ. ...
ಕ್ರ.ಸಂ. ...

Digitized by ROJA MUTHIAH RESEARCH LIBRARY

ಜ.ಗ.೬.

ಕರ್ಣಾಟಕ ಸಾಹಿತ್ಯ ಪರಿಷತ್ತು
ಪುಸ್ತಕ ಭಂಡಾರ
ಕ್ರಮ ಸಂಖ್ಯೆ ~~330~~ 99 ವರ್ಗ ಸಂಖ್ಯೆ ಜ ~~36~~
ತಾರೀಖು 295
ಬೆಲೆ

ಜ ~~36~~ 99

A — 295 ~~330~~

ಕನ್ನಡ ಸಂಶೋಧನ ವಿಭಾಗ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-18
ಕ್ರ. ಸಂಖ್ಯೆ 7226 ವ. ಸಂಖ್ಯೆ
ದಿನಾಂಕ

Digitized by ROJA MUTHIAH RESEARCH LIBRARY

A — 320
295
Q, 33, 2PUT G M93

7226

ಜಯಪರಮೇಶ್ವರಾ

# ಗಿರಿಜಾಕಲ್ಯಾಣ ನಾಟಕಂ

## ಪ್ರಥಮಾಂಕ ಪ್ರಾರಂಭಃ

ಬೆಂಗಳೂರು-೦೪

(ಸೂತ್ರಧಾರ)

ವೃತ್ತ ॥ ಶ್ರೀಮಾವಲ್ಲಭನೀರಜಾಸನಸುರಾಧೀಶಾರ್ಚಿತಾಂಘ್ರಿ
ಯಂ।ಹೈಮಕ್ಷ್ಮಾಧರಜಾಸುಮಂಡಿತಲಸದ್ವಾಮಾಂಕಸಂಶೋಭಿತಂ।ಸೀ
ೀತಶಚರಿತ್ರಮುಂಘ್ರಿವಿನಮನ್ಮಂದಾರಮಿಂದುಜ್ವಲಂ । ಚಾಮೋರ್ವೀ
ೀಗೆಸೌಖ್ಯವಜಗದ್ರಕ್ಷಾಕರಂಶಂಕರಂ । ೧ ॥

ರಾಗ__ಮೋಹನ__ಆದಿತಾಳ.

(ಅಬರೀಕಬರಿ) ಯೆಂಬಂತೆ

ಶಂಕರೀಸಿಖರೀಕುಮಾರೀ । ಶ್ರಿಂಕಿಲಕಾರಿ । ಪಲ್ಲ । ಕಂಕಾಲಧರ
ರ್ಯಂಕಶೋಭಿತೆಹರಿ ।ಣಾಂಕವದನೆಶಬರಿ । ಕಿಂಕರಾವನೆಗೌರೀ । ೧ ।
ಸಿತಾನನೆ । ವರಕುಂದಸಮರದನೆ । ಸರಸಿಜಲೋಚನೆ । ಕರಿವರಸಮ
ನೆ ॥ ೨ ॥ ಶ್ರೀಮತಿಯೆಸುರ । ಸ್ತೋಮವಂದಿತೆಹರ । ಪ್ರೇಮಸತಿಯೆ
ಚಾಮೇಂದ್ರಸುಖಕರೀ ॥ ೩ ।

॥ ಫಾಣಿತಸಮಾನವಾಣಿಯೆ । ಶೋಣಾಧರೆಕಂಬುಕಂಠಿಜಿತಕಲ
ಕಂಠಿ । ಯೇಣಕಿಶೋರವಿಲೋಚನೆ । ಶ್ರೋಣೀಭರಭಾರೆಬಾರೆ
ಭಾವಕಿ ನಟನೀಂ ।

) ಆರ್ಯನೆ ಇಗೋ ಬಂದೆನು ನಾನು ಮಾಡತಕ್ಕ ಕಾರ್ಯವಂನು ಆ
ಜ್ಞಾಪಿಸಬೇಕು.

(ಸೂತ್ರ) ಆರ್ಯೆ ಸಭಾಸದರಿವರು ಸಕಲಕಲಾಕೋವಿದರು ಈಗ
ಸ್ಕಂದ ಪೌರಾಣೋಕ್ತಮಾದ ಗಿರಿಜಾಕಲ್ಯಾಣವೆಂಬ ನಾಟಕವಂನಾ
ಮಿವರುಗಳನ್ನು ಸಂತೋಷಪಡಿಬೇಕು ಆದ್ದರಿಂದ ನಾಟಕಾರಂಭದ
ದನ ನಸುನಗೆಯುಂಬ ಬೆಳದಿಂಗಳಂ ಉಂಟು ಮಾಡಿಗಾನವಂನಾರಂಭಿಸು

(ನಟಿ) ಆರ್ಯನೆ ಲಾಲಿಸು

ಕಂದ ॥ ತಿಂಗಳಬೆಳದಿಂಗಳುಕೆಲ । ರಿಂಗಲಿಸನ್ಮೋದಕಾರಿಕೆಲರಿಗೆ
ನೋಡಲ್ । ಭಂಗವನುರೆಸಂಗೊಳಿಸುವ್ರು । ದಂಗೀಕೃತ
ಮಂಗಳಾಂಗಿಮುರನೆನಪಿಂಗಂ ।

Digitized by ROJA MUTHIAH RESEARCH LIBRARY

ಹಾಗಲ್ಲದಿದ್ದರೆ ಲೋಕದ ಸರ್ವ ಪ್ರಾಣಿಗಳಿಗೂ ಹಿತಕರನಾದ ಮಹೇಂದ್ರನ ವೈಭವಕ್ಕೆ ಅಸೂಯಾಪರರುಂಟಾಗುವರೆ ಅದಂತಿರಲಿ ನಾನು ಯಾವ ಋತುವಂ ಕುರಿತು ಗಾನವಂ ಮಾಡಲಿ ಅಜ್ಞಾಪಿಸಬೇಕು.

( ಸೂತ್ರ ) ಪ್ರಿಯೆ ಸರ್ವಜನಾನಂದಕರವಾದ ವಸಂತ ಋತುವಲ್ಲದೆ ಬೇರೆಯಾವದಿರುವದು.

( ನಟಿ ) ಅಪ್ಪಣೆಯಂದು ) ರಾಗ__ಜಂಗಲ್__ಆದಿತಾಳ.

( ದರುಶನಕೆಲೋಭಿನ್ನೆ ) ಯೆಂಬಂತೆ

ಸುರುಚಿರವಾಗಿತೋರ್ಪುದು । ನೆರೆವಸಂತಋತುವಿದು ॥ ಪಲ್ಲ ॥ ಶುಕಕೋಕಿಲಂಗಳ । ಸುಖಕರನಾದದಿಂ । ವಿಕಸಿತಚಾಂಪೇಯದಿಂ ॥ ೧ ॥ ಪರಿಮಳಪೂರಿತ । ತರುಣಸಮೀರನಿಂ । ದುರಿತಳಿರಂದಂಗಳಿಂ ॥ ೨ ॥ ಭ್ರಮರಝೇಂಕಾರದಿಂ। ಸುಮಶರಾಟೋಪದಿಂ। ಯುವಿಜನಸ್ತೋತ್ರಂಗಳಿಂ ॥ ೩ ॥ ಉರುಬೆಳದಿಂಗಳಿಂ । ಚರಿಸುವಪೆಣ್ಗಳಿಂ ॥ ವರವಿಟರಾಲಾಪದಿಂ ॥ ೪ ॥ ಸುರಿಯುವಪುಷ್ಪದಿಂ । ಚರಿಪಹಂಸಾಳಿಯಿಂ । ಧರೆಗತಿಮೋದಾಸ್ಪದಂ ॥ ೫ ॥

( ಸೂತ್ರ ) ಯಲೆ ಮಂಗಳಾಂಗಿಯೆ ನಿಂನ ಮನೋಹರವಾದ ಗಾನಾಮೃತದಿಂದ ಪೂರಿತರಾದ ಸಭಾಸದರನೇತ್ರಾನಂದವಾಗಲು ಮುಂದಿನ ಪಾತ್ರಗಳನ್ನು ಸಿದ್ಧಗೊಳಿಸುವನಡೆ.

( ನಟಿ ) ಅಪ್ಪಣೆ [ ಯಂದು ಹೋಗುವರು. ]

( ಗಿರಿರಾಜ ಪತ್ನಿ ಸಮೇತ ಸಭೆಯಲ್ಲಿ ಕುಳಿತಿರುವನು. )

( ಭಟ್ಟರು ) ಗಿರಿರಾಜನೆರಾಜಶವಾನನನೆ । ಸುರರಾಜಸಮಾಜಸಭಾಸ್ತುತನೆ। ಕರುಣಾಕರಶಂಕರಕಿಂಕರನೆ। ಶರಣಾಗತಪಾಲನಕೌತುಕನೆ ॥ ೧ ॥ ಘನವೈರಿಬಲಾಹಕಮಾರುತನೆ । ದಿನಪಾಲಕಭಾಸಮವಿಗ್ರಹನೆ । ವಿನತಾವನಭಾವನೆಭಾಗ್ಯದನೆ। ಜನನಾಥಸುಮಾನಿತಸದ್ಗುಣನೇ ॥ ೨ ॥

( ಗಿರಿರಾಜ ) ರಾಗ__ಜಂಜೂಟಿ__ರೂಪಕತಾಳ.

( ಯಿಂದುವದನೆ ಕುಂದರದನೆ ) ಎಂಬಂತೆ

ವಂದಯಾನೆಕೇಳುಮೇನೆ । ಚಂದದಿಂಪ್ರಿಯೆ ॥ ಪಲ್ಲ ॥ ಯಿಂದುಧರನೆ ತ್ರೈರತ್ನನಾವು । ಸುಂದರಾಂಗಿಯೆ ॥ ಅ ॥ ವನಿತೆತನಯರಿಲ್ಲವೆಂದು । ನೆನೆಸುತಿರ್ದೆವು ॥ ವಿನುತಶಂಕರನದಯದಿ । ಸಫಲರಾದೆವು ॥ ೧ ॥ ನಂದನೆಯಳ ಹೃದಯಕಾ । ನಂದನೆಯಳನು ॥ ಕುಂದರರದನೆಪಡೆಯುತಾ । ನಂದಪಾಂತೆವು ॥ ೨ ॥



ಪ್ರಿಯೆ ಕಳೆದ ರಾತ್ರಿಯೊಳು ನಮ್ಮ ಬಾಲಕಿಯು ನನ್ನ ಸ್ವಪ್ನದಲ್ಲಿ ಸಕಲ ಭುವನವನ್ನು ಪಾಲಿಸುವ ವಿಚಾರದಲ್ಲಿ ಯಿದ್ದಂತೆಯೂ ಶರಣಾಗತರಿಗೆ ಮೋಕ್ಷವನ್ನಿತ್ತು ಪಾಲಿಸುತ್ತಿದ್ದಂತೆಯೂ ಕಂಡೆನು ಈ ಬಾಲಕಿಯ ನಡತೆಗಳೆಲ್ಲ ಪರಮೋತ್ಕೃಷ್ಟವಾಗಿಯೆ ಕಾಣುವದಲ್ಲ ಯಿದೇನು.

( ಮೇನಕಿ ) ವಿಜ್ಞಾಪಿಸುವೆನು

( ಯೆಂದಿಗೆ ಕಾಂಬುವೆನೊ ) ಯೆಂಬಂತೆ.

ಲಾಲಿಸಿಕೇಳುಪ್ರಿಯ । ಯಿನಾನುಡಿಯ ॥ ಪಲ್ಲ ॥ ಬಾಲೆಯಚಿತ್ತವ । ಪೇಳುವದೇಂಶಶಿ । ಮೌಳಿಯಧ್ಯಾನದೊಳು । ತಾನಿಹಳೂ ॥ ೧ ॥ ಆಟಪಾಟವದಿಲ್ಲ । ನೋಟದೊಳಾಸೆಯಿಲ್ಲ । ಚಾಟೂಕ್ತಿಗಳನಾಡಳು । ಕೇಳವಳು ॥ ೨ ॥ ಶಿವಪೂಜೆಯೊಳುಮನ । ಮಹಳೀಗೆನಿರತವು । ತವೆವ್ಯಾಪಿಸಿರುವದರಿಂ । ನವೆಯುವಳು ॥ ೩ ॥

( ಗಿರಿರಾಜ ) ಪ್ರಿಯೆ ಕೇಳು

ಕಂದ ॥ ಅತಿಶಯಮಾವುದುರಮಣಿ । ಕ್ಷಿತಿಯೊಳ್‌ಶಿವಪೂಜೆಗಿತರಕಾರ್ಯ
ಮದರಸಲ್ । ಸುತೆಯಿಂತಿಹಳಲ್ಲವೆಜನಿ । ಸುತೆ ನುತಿಗತಿಪಾತ್ರಳಾಗಿ
ಮೆರೆದಪಳಲ್ತೇ ॥

ರಾಣಿಯೆ ನಮ್ಮ ಪುಣ್ಯತರುವು ಫಲಿಸಿತು.

( ಮೇನಕಿ ) ಪ್ರಿಯನೆ ಸಂದೇಹವೇನು ವಯಸ್ಸಿಗೆ ತಕ್ಕ ಆಟಪಾಟಗಳಿಲ್ಲದೆ ಶ್ಲಾಘ್ಯವಾದ ನಡತೆಯಿಂದಲಿರುವದೇ ಸೂಚಿಸುವದು.

( ನಾರದ ) ರಾಗ__ಅಠಾಣ__ಆದಿತಾಳ.

( ಭಜನಕಾಯರಾದ ) ಯೆಂಬಂತೆ.

ಪಾಹಿಲಕ್ಷ್ಮಿಲೋಲ । ಪಾಹಿಸುಗುಣಸೀಲ ॥ ಪಲ್ಲ ॥ ಶ್ರೀಹಿತನುತ । ದಾನವಜಿತ । ಮೋಹಾದಿವಿವರ್ಜಿತಶ್ರಿತ । ವ್ಯೂಹಾಮರಕುಜಸುಚರಿತ । ಪಾಹಿಪಾಹಿಪಾಪರಹಿತ ॥ ೧ ॥ ಖಗವಾಹನ । ನಿಗಮಾವನ । ನಗವೈರಿವಿಪೋಷಣಚಣ। ಅಘನಾಶನ । ಅತುಲಿತಗುಣ। ನಗಧರಮಾಂಪಾಹಿಪಾಹಿ ॥ ೨ ॥ ಶಂಕರಸಖ । ಕಿಂಕರಸುಖ । ಪಂಕಜಭವಪಿತಸನ್ಮುಖ ॥ ಶಂಕರೀಸಹಜ ದೀನ । ಸಂಕಟಹರಪಾಹಿಪಾಹಿ ॥ ೩ ॥

( ಸೇವಕ ) ಮಹಾರಾಜನೆ ದೇವ ಮುನಿಗಳಾದ ನಾರದರು ದಯಮಾಡುವರು.

( ಗಿರಿರಾಜ ) ( ಪೀಠದಿಂದಿಳಿದು ಬಂದು ) ಪೂಜ್ಯರಿಗೆ ವಂದಿಸುವೆನು.

Digitized by ROJA MUTHIAH RESEARCH LIBRARY

( ನಾರದ ) ಪರ್ವತೇಂದ್ರನೆ ನಿನಗೆ ಜಯವಾಗಲಿ.

( ಮೇನಕಿ ) ತಪೋಧನರಿಗೆ ವಂದಿಸುವೆನು.

( ನಾರದ ) ಜನನಿ ನೀನು ಸುಮಂಗಲಿಯಾಗು.

( ಗಿರಿರಾಜ ) ಈ ಪೀಠವನ್ನು ಅಲಂಕರಿಸಬೇಕು.

( ನಾರದ ) ಯಲೈ ಪುಣ್ಯಶಾಲಿ ನಿಂನಿಷ್ಟ್ಯಯಂತಾಗಲಿ (ಯಂದು ಪೀಠದಲ್ಲಿ ಕುಳಿತುಕೊಂಡಿರುವರು. )

( ಗಿರಿರಾಜ ) ಕಂದ ॥ ಮುನಿಮುಖ್ಯಧನ್ಯನಲೆನಾಂ । ಘನವಹತವಪಾದಪದ್ಮದರ್ಶನದಿಂದಂ । ವಿನುತನೆಬಿಜಯಂಗೈದುದ । ನನುವಿಂದುಸುರುವುದುಬೇಡಿಕೊಳ್ಳುವೆನಿದೆನಾಂ ॥

ನಾರದ ॥ ಯಲೈ ಪುಣ್ಯಶಾಲಿಯಾದ ಗಿರಿರಾಜನೆ ನಿಂನ ದಿಗಂತ ವಿಶ್ರಾಂತವಾದ ಕೀರ್ತಿಯನ್ನು ಕೇಳಿ ನಿಂನ ನೋಡಲುದ್ದಿಶ್ಯವೆ ಬಂದಿರುವೆನು ನೀನು ಕ್ಷೇಮವೆ.

[ ಗಿರಿರಾಜ ] ತಂಮಂಥ ಮಹಿಮರ ಕೃಪೆಗೆ ಪಾತ್ರನಾದ ನನಗೆ ಕುಶಲವಿಲ್ಲದೆ ಮತ್ತೆ ಬೇರುಂಟೆ.

[ ನಾರದ ] ಗಿರಿರಾಜನೆ ದೀನರಲ್ಲಿ ದಯೆಯು ಕುಜನರಲ್ಲಿ ದಂಡನೆಯು ದೇವತಾ ವಿಷಯದಲ್ಲಿ ಭಕ್ತಿಯು ವೈರಿಗಳಲ್ಲಿ ಧೀರತ್ವವು ತಪೋಧನರಲ್ಲಿ ಶಮೆಯೂ, ಸತ್ಪಾತ್ರದಲ್ಲಿ ದಾನವು ಐಶ್ವರ್ಯದಲ್ಲಿ ವಿನಯವು ಯುದ್ಧದಲ್ಲಿ ಧೈರ್ಯವು ರಾಜನಿಗೆ ಬೇಕಾದದ್ದೇಸರಿ ಯಿದಕ್ಕೆಲ್ಲಾ ನೀನು ಪಾತ್ರನಾಗಿಯೇ ಯಿರುವೆ ನನಗೆ ಸಂತೋಷವಾಗಿರುವದು.

[ ಗಿರಿಜೆ ] [ ಬಂದು ] ಯಲೈ ಜನಕನೆ ವಂದಿಸುವೆನು.

[ ಗಿರಿರಾಜ ] ಯಲೌ ಬಾಲಕಿಯೇ ದೇವ ಮುನಿಗಳಾದ ನಾರದರು ಬಿಜಯಂಗೈದಿರುವರಲ್ಲ ನಮಸ್ಕರಿಸು.

[ ನಾರದ ] [ ಗಿರಿಜೆಯನ್ನು ನೋಡಿ ನಮಸ್ಕರಿಸಿ ]

ರಾಗ—ಖರಹರಪ್ರಿಯ—ರೂಪಕತಾಳ.

[ ಮುಟ್ಟಬ್ಯಾಡವೊ ] ಯೆಂಬಂತೆ

ಪಾಹಿಗಿರಿಸುತೆ । ಪಾಹಿಪಾಹಿನತಹಿತೆ ॥ ಪಾಹಿಸಾಂಬದಯಿತೆಪಾಹಿ । ಪಾಹಿಪ್ರೂತಲೋಕಮಾತೆ ॥ ೧ ॥ ಆಗಮಾರ್ಚಿತೆ । ದೇವಿ । ಯೋಗಿಸನ್ನುತೆ ॥ ನಾಗಗಮನೆಕಾಯ್ಯುವೆನ್ನ । ರಾಗದೂರೆಕೃತಿವಿಚಾರೆ ॥ ೨ ॥ ನಿಂನಪಾದವ । ಕಂಡುಧನ್ಯನೆನಿಸುವ ॥ ಯನ್ನಶಮನದಾರುತಾಯೆ । ಸನ್ನುತಾಂ



ಗಿಸಗುಣರೂಪೆ ॥ ೩ ॥

ಯಲೌ ಜಗಜ್ಜನನಿ ಹಿಂದೆ ದಕ್ಷನ ಯಾಗದೊಳು ನಿಂನ ಚರಣಕಮಲ ದರ್ಶನವಿತ್ತು ಯಿದುವರಿಗೂ ಈ ಬಾಲಲೀಲೆಯಿಂದ ಗುಪ್ತವಾಗಿದ್ದೆಯ ನಿನ್ನ ಸ್ತೋತ್ರವಂಮಾಡಲು ಆದಿಶೇಷನಲ್ಲದ ಕಿಂಚಿದ್ ಜ್ಞಾತ್ಮನಾದ ಈ ನಾರದ ಮುನಿಯಂನು ವುದ್ಧರಿಸು ವಂದಿಸುವೆನು.

[ ಗಿರಿರಾಜ ] [ ನಿಟ್ಟಿಸಿ ನೋಡಿ ಆಶ್ಚರ್ಯಪಟ್ಟು ]

ರಾಗ—ರೂಪಕ.

ಯೇನಿದುಪೂಜ್ಯರೆ । ಈನಡತೆಯುನಿಮಗೆ ॥ ಪಲ್ಲ ॥ ಮಾನಸಕಿಂದುತಾನಲಿಕುಂದು ॥ ಅ ॥ ನಂದನೆಯಳಿಗೆ । ವಂದಿಸೆನಿಮಗೆ ॥ ಚಂದವೆಪೇಳಿಂದುಬಲು । ಸಂದೇಹವುಪೊಂದಿಹುದು ॥ ೧ ॥ ಶಿವನಿಗೆಸತಿಯೆ । ಕುವರಿಯು ಯುತಿಯೆ।ತವನುತಿಗವಮತಿ।ಯವತರಿಸಿಹುದತಿ ॥ ೨ ॥ನಾವಲೆನಿಮಗೆ । ಸೇವಕರುವಿಗೆ ॥ ಪಾವನನತಾವನಪೇ।ಳೀವಿಧವದೇವಮುನಿ ॥ ೩ ॥

ಆಶ್ಚರ್ಯ ಆಶ್ಚರ್ಯ ಆಶೀರ್ವಾದಕ್ಕೆ ಪಾತ್ರಳಾದ ನಂನಕುಮಾರಿಯು ಮಹಾತ್ಮರಾದ ನಿಮ್ಮ ನಯನಕ್ಕೆ ಹ್ಯಾಗೆತೋರಿರುವಳುಅಲ್ಲದೆ ದೂರದರ್ಶಿಗಳಾದ ತಮಗೆ ಪ್ರಕೃತಿವಿಕೃತಿಯಾಗಿ ಕಾಣುವದಕ್ಕೆಕಾರಣವೇನು ದಯದಿಂದ ಅಪ್ಪಣೆ ಕೊಡಿರಿ.

[ ನಾರದ ] ಆತ್ಮಗತ. [ಆಹಾ ಈ ಮಹಾರಾಜನು ಈ ಜಗಜ್ಜನನಿಯಾದ ದಾಕ್ಷಾಯಣಿಯು ಈತನ ಪತ್ನಿಯಾದ ಮೇನಕಿಯ ತಪಸ್ಸಿಗೆ ಪಲಿದು ಜನಿಸಿರುವದನ್ನು ತಿಳಿಯದೆ ತನ್ನ ಮಗಳೆಂಬ ಭ್ರಾಂತಿಯಿಂದಲಿ ಹೀಗೆ ಹೇಳುವನು ವಳ್ಳೇದು ] ಯಲೈ ಗಿರಿರಾಜನೆ ಕೇಳು.

ಕಂದ ॥ ಭಾವಾಂತರ್ಗತಮಾಗಿಹ। ಜೀವವ ಜೀವಿಗಳುಕಾಣದಂದದಿನೀನುಂ।ಪಾವನಮೋಕ್ಷಪ್ರದಳಹ । ದೇವಿಯನಿಜಸುತೆಯಳೆಂದುಬಗೆವರೆಮನದೋಳ್ ॥

ತ್ರಿಲೋಕ ಜನನಿಗೆ ಜನಕನೆನಿಸುವರಾರು ಭುವನಪಾಲನಶೀಲೆಗೆ ಪಾಲಿಸುವರಾರು ವೇದಾಗಮಗಳರಸಿಕಾಣದ ಮಹಿಮಳಿಗೆ ಸ್ತುತಿಸಿ ತೃಪ್ತಿಗೊಳಿಸುವರಾರು ಈ ಆದಿಶಕ್ತಿಯು ನಿಂನ ಮಗಳಲ್ಲ ಪೂರ್ವದೊಳು ಪರಮೇಶನ ವಿಪಕ್ಷನಾದ ದಕ್ಷನ ಯಾಗದಲ್ಲಿ ದಹಿಸಿ ರುದ್ರನಿಂದ ವುಜ್ಜೀವಿತಳಾಗಿ ತಂನ ಪತಿಯನು ಮತಿಯಿಂದ ನಿಂನ ಪತ್ನಿಯಾದ ಮೇನಕಿಯ ತಪಸ್ಸಿಗೆ ಫಲಪ್ರದಳಾಗಿ ನಿಂನಲ್ಲಿ ಜನಿಸಿದೋರ್ಡಂಜನಿದೂರೆಯಾದ ಜಗಜ್ಜ

Digitized by ROJA MUTHIAH RESEARCH LIBRARY

ನನಿಯೆಂದು ತಿಳಿ.

[ ಗಿರಿರಾಜ ] ಅಹಾ ಮುನಿವರ್ಯರೇ ಮಗಳೆಂಬ ಮೋಹಾಂಧಕಾರದಲ್ಲಿ ಕಣ್ಗಾಣದಿರ್ದ ನನಿಗೆ ತಮ್ಮ ಜ್ಞಾನೋಪದೇಶವೆಂಬ ಸೂರ್ಯ ಪ್ರಭೆಯು ಚನ್ನಾಗಿ ಆವರಿಸಿ ಮೋಹವೆಂಬ ಅಂಧಕಾರವನ್ನು ಹೋಗಲಾಡಿಸಿತು

ರಾಗ—ಚಾಪು—

[ ಅಂಗನರೂಕಾಂತುಚು ] ಯೆಂಬಂತೆ.

ಸನ್ನುತಮುಂನಿಪ । ಪೆಂನಪರಾಧವ । ಮುಂನಿಸಿದುಚಿತ್ತದೊ । ಳರಿಯದಜ್ಞಾನವ॥ ಪಲ್ಲ । ಧನ್ಯನಮಾಡಿದೆ । ಮಾನ್ಯನೆಮೋದದೆ । ಮನ್ನ್ಯವತಾಳದೆ । ಮಂನಿಸುದಯದೆ । ಮುಂನನಗೈವುದೆ । ನಿಂನದಮಾಜದೆ । ಯನ್ನದಯಾನಿಧೆ । ಯೆಂನೊಳುಜವದೆ ॥ ೧ ॥ ಪಾಲಕಿಯನುಮುನಿ । ಪಾಲನೆಯಂನಯ । ಬಾಲಕಿಯನ್ನುತೆ । ಕಾಲವಕಳಿದೆ ॥ ಪೇಳುಯಂನಂದದ।ಕೀಳನಭೂಮಿಯ । ಮೇಲೆನೀಬಲ್ಲೆಯ । ತಾಳದೆಜೀಯ । ೨ । ಶಿವನನೆನೆಯುತ । ಶಿವಕಥೆಕೇಳುತ । ಶಿವೆತಾಕಾಲವಕಳದಳ್ಳೈದೇವ ॥ ವಿವರವತಿಳಿಯದೆ । ಶಿವಶಿವಬರಿದೆ । ಯುವಮತಿಹೊಂದಿದೆ । ಭುವನದಿಬಿಡದೆ । ೩ ॥

ಸರ್ವಾಪರಾಧವನ್ನು ಕ್ಷಮಿಸಿ ಕರುಣಿಸು ವಂದಿಸುವೆನು.

[ ನಾರದ ] ಯಲೈ ಶೈಲಾಧಿಪನೆ ಈ ಕಾರಣರೂಪಳಾದ ಜನನಿಯು ಬೆಳೆಯುವ ಪತಿಗೂ ಪರಮೇಶನು ಹೇಮ ಕೂಟದಲ್ಲಿ ಪರಿಪೂರ್ಣ ಪರಂಜ್ಯೋತಿಸ್ವರೂಪ ನಿಜಯೋಗಭೋಗರಾಗದೊಳಿರುವನು ಆದ್ದರಿಂದಈಜಗಜ್ಜನನಿಯು ತನ್ನ ಪತಿಯ ಧ್ಯಾನದೊಳೆ ಯಿರುವಂತೆ ತಪಸ್ಸಿಗೆ ಕಳುಹಿಸು.

ಕಂದ । ಸಲೆಕತಿಪಯದಿವಸಂಗಳಿ । ಗೊಲವಿಂಗೂಡುವರನಾದಿದಂಪತಿಗಳು
ನೀ । ನಿಳೆಯೋಳ್ಧನ್ಯನುಮಾನ್ಯನು । ಬಲುಕೀರ್ತಿಯಘಳಿಸಿಸುಖಿ
ಪಿಲಾಲಿಸುನುಡಿಯಂ ॥

ನಾನುಹೋಗಿ ಬರುವೆನು

ಪೂಜ್ಯರೇ ವಂದಿಸುವೆನು.

ನಿನಗೆ ಕಲ್ಯಾಣಮಸ್ತು [ಯೆಂದು ಹೋಗುವರು. ]

[ ಗಿರಿರಾಜ ] [ಗಿರಿಜೆ ಕಡೆಗೆ ತಿರುಗಿ ]

ಕಂದ । ಬಾರೆಂನಭವ್ಯದಾಯಿನಿ । ದೂರೀಕೃತಜನನಮರಣೆನತಜನಶ
ರಣೆ।ಬಾರೌಭವಾನಿಪಾವನೆ।ಘೋರಾಸುರವಾರದೂರೆತತ್ವವಿಚಾರೆ

[ ಗಿರಿಜೆ ] ಜನಕನೆ ಬಾಲಕಿಗೆ ಯಿಷ್ಟುವಿನಯಾಲಾಪವೇಕೆಮತ್ತೀ

Digitized by ROJA MUTHIAH RESEARCH LIBRARY



ನು ಅಪ್ಪಣೆ ಕೊಡು

[ ಗಿರಿರಾಜ ] ಲೋಕ ಮಾತೆಯೆ ನಿನ್ನ ಪತಿಯಾದ ಪರಮೇಶನ ಕುರಿತು ತಪವನ್ನಾಚರಿಸಿ ಫಲವಂನು ಹೊಂದಿ ನಂಬಿದ ನಂಮನ್ನು ವುದ್ಧರಿಸು.

[ ಗಿರಿಜೆ ] ತಂದೆಯೆ ಸಿದ್ಧಳಾಗಿರುವೆನು ಕಳುಹಿಸು.

[ ಮೇನಕಿ ] ಆರ್ಯಪುತ್ರನೆ ನನ್ನ ತಪಸ್ಸಿಗೆ ಫಲಪ್ರದಳಾದ ಲೋಕದ ಪುಣ್ಯಪುಂಜರೂಪಿಗೂ ಬೇರೆ ತಪವುಂಟೆ.

( ಗಿರಿರಾಜ ] ರಾಣಿಯೆ ಅದಕ್ಕನುಸಾರವಾದ ಫಲಪ್ರದನು ಯಿದ್ದೇಯಿರುವನಲ್ಲ [ಯೆಂದು ಗಿರಿಜೆಕಡೆಗೆತಿರಿಗಿ]ಯಲೌ ಮಾತೆಯೆ ನಿನಗೆ ಸಖಿಯರಾದಜಯೆವಿಜಯರನ್ನುಕಳುಹಿಸುವೆನು ಯಲೌ ಸಖಿಯರೆ ಈಗ ತಪಸ್ಸಿಗೆ ಬಿಜಯಂಗೈಯುವ ನಮ್ಮ ಜನನಿಯಳಿಗೆ ಸಹಾಯವಾಗಿ ನೀವು ಸಕಲವಸ್ತುಸಮೇತ ಹೋಗಬೇಕು ಸಖಿಯರು ಅಪ್ಪಣೆ [ ಯೆಂದು ಹೋಗುವರು ]

[ ಮೇನಕಿ ] ರಾಗ—ಚಾಪು—

[ ನ್ಯಾಯವೇನೆನೀಲಾಯತಾನಯನೆ ] ಯೆಂಬಂತೆ.

ಪೋಗಿಬರ್ಪೆಯೇನು।ನಾಗವೇಣಿಯಿನ್ನು । ಭೋಗಿಭೂಷಗನು । ರಾಗಪ್ರಿಯೆನೀನು॥ ೧ ॥ಘೋರವಾದಮೃಗ।ವಾರವನ್ನುಬೇಗ । ನೀರೆನೋಡಿಭಯ । ದೋರದಿರ್ಪುದಮ್ಮ । ೨ । ನೀಲವೇಣಿಗುಣ । ಸೀಲೆಯಂನಪ್ರಾಣ । ಕಾಲಯವುನೀನು । ಪೇಳುವದಿಂನ್ನೇನು ॥ ೩ ।

ಕಂದ ॥ ಶುಭಮಕ್ಕೆ ಜನನಿನಿನಗಾ । ತ್ರಿಭುವನಪರಿಪಾಲನೀಲಲೋಹಿತನ
ನುನೀ । ಸಿಭಗಮನೆಕೂಡಿನತರಂ । ಗಭಯಪ್ರದಳಾಗಿಬೇಗ
ಪಾಲಿಸುಜಗಮಂ ॥

[ ಗಿರಿಜೆ ] ಜನನಿಯೆ ಯಿದಕ್ಕೆಲ್ಲ ಮಾತಾಪಿತೃಗಳಾದ ನಿಮ್ಮ ಕೃಪೆಯೇ ಪಾತ್ರವಾಗಿರುವದು ॥ಯಲೈ ತಂದೆಯೇ ನಾನು ಪೋಗಿಬರುವೆನು

[ ಗಿರಿರಾಜ ] ಕಂದ॥ ಜನನಿಯೆಶುಭಮಾಗಲಿನಿಂ।ನನಘೌತಪಕ್ಕಿಂದು
ಜೂಟವ್ಯೈದೊರಲಿಮೋ । ಣನುಮಾನವಕಡೆಗಾಣುತ । ಜನನಾವು
ಯಹರನಹರನನೊಲಿಪ್ಪುದುಜವದಿಂ ॥

ನಿನಗೆ ಕಲ್ಯಾಣವಾಗಲಿ ಬಿಜಯಂಗೈ.

[ ಗಿರಿಜೆ ಸಖಿಯರಿಂದ ಸಮೇತಳಾಗಿ ಹೋಗುವದು ]

ಯಲೌ ಸಖಿಯರೆ ಈ ಪರ್ವತವನ್ನು ಆರೋಹಣ ಗೈಯುವದಕ್ಕೆ ನೀವು ಆಯಾಸಪಟ್ಟಿರಬಹುದು.

[ ಸಖಿ ] ಮಾತೆಯೆ ಆಯಾಸದಿಂದ ತಾಮಸವಾಗಲಿಲ್ಲ. ಯಿಲ್ಲಿನ ಮನೋಹರತೆಯನ್ನು ನೋಡು.

[ ಗಿರಿಜೆ ] ರಾಗ__ರೂಪಕ__

[ ಚೈತ್ರಮಾಸಂಚೆತ್ರದಿಮರೆಯೆ ] ಯೆಂಬಂತೆ.

ಹರುಷವಾಯಿತ್ತು । ಸರಸಿಯುಮನಕೆ ॥ ಪ ॥ ಪೊಳೆಯುವವಿಾನ್ಗಳು।
ಲಲನಾಜನಗಳ । ಸಲೆನೇತ್ರಗಳಜೈಸು । ತಲೆರಾಜಿಸುವವು॥ ೧ ॥ ಕಮಲಮ
ರಂದವ । ಭ್ರಮರವುಸೇವಿಸು । ತಮಮರ್ಝೇಂಕರಿಸಿಸಂಭ್ರಮಗೊಳುತಿ
ಹವೂ ॥ ೨ ॥ ಸುಲಲಿತವಾಗಿಹ । ಸಲಿಲಸೋಪಾನದಿ । ಬಲುಶೈವಾಲದಿಂ।
ದೊಲುವಬೀರುತಲಿ ॥ ೩ ॥

[ ಸಖಿ ] ಮಡತಿಯೇ ವಿಜ್ಞಾಪಿಸುವೆವು.

ರಾಗ__ಹಿಂದುಸ್ತಾನಿದಾದರ__ಆದಿತಾಳ.

[ ಮೋಹಿರೆಕಣ್ಣಯ್ಯಮನ ] ಯೆಂಬಂತೆ.

ಪರಿಕಿಸುಜನನಿಯೆಚೋದ್ಯವ ॥ ಪಲ್ಲ॥ಹರಿಮರಿಮೃಗಗಳು।ಗಿರಿನದಿತರು
ಗಳು।ಮೆರೆವುತಲಿರ್ಪುದತೋಷದೀ ॥ ೧॥ ಅಳಿಗಿಳಿಗಳುಕಲ । ಕಲನಾದಗೈ
ವವು । ತಳತಲತಾಳಿಗಳಿರ್ಪುದ ॥ ೨ ॥ವೈರವಿಲ್ಲದೆಮೃಗ। ಮಾರವೆಲ್ಲವುಕೂಡಿ
।ಮಿಾರಿಸಂತಸದೊಳಗಿರ್ಪುದ ॥೩॥

[ ಗಿರಿಜೆ ] ಯಲೌ ಸಖಿಯರೆ ಯಿಲ್ಲಿ ಸರ್ವ ಪ್ರಾಣಿಗಳು ಬಿಡಲ್ಪಟ್ಟ ವೈರದಿಂದ ಸುಖಿಸುವವು ಈ ಪರ್ವತದ ಮನೋಹರತೆಯಂನು ನೋಡಿ ನಾನು ಸಂತೋಷಭರಿತಳಾಗಿರುವೆನು.

[ ಸಖಿ ] ಯಲೌ ಮಂಗಳಾಂಗಿಯೇ ಈ ವಾನರಗಳನೊಡು ಪುತ್ರ ಮೋಹದಿಂದ ಮರಿಗಳನ್ನು ತಬ್ಬಿಕೊಂಡು ಚರಿಸುವವಲ್ಲ.

[ ವಿಜಯೆ ] ಯಲೌ ಜನನಿಯೆ ಗಜಗಳ ಸಮೂಹದಲ್ಲಿ ಸಿಹ್ಮದ ಮರಿಯು ಅದರಂತೆಯೇ ಸಿಹ್ಮದ ಪಕ್ಕೆಯಲ್ಲಿ ಗಜದಮರಿಯು ವಾಸಿಸುವದ ನೋಡು.

[ ಗಿರಿಜೆ ] ಯಲೌ ಸಖಿಯರೆ ಪುಷ್ಪಗಳನ್ನು ಕೊಯ್ಯೋಣ ಬನ್ನಿರಿ.

[ಮಾವಿನತಳಿರಿದುನೋಡಲ್ಕೆ] ಯೆಂಬತೆ.

[ ಸಖಿ ] ನೋಟ್ ॥ । ನವನೀರಜವಿಾದೆನಲಿಯುತಲೆ । ಯುವತಿಯೆ
ಕುಂದದಸುಮವಿದಲೆ ತವೆನರುಗಂಪಿನಜಾಜಿಯಲೆ । ಶಿವೆಕೊಯ್ಯುವನಾವಿ
ದನುನಲೆ॥೧ ॥ಕಂಪೆಸೆಯುತ್ತಿದೆಪಾದರಿಯು।ಸೊಂಪಿನಿಂದಲಿದೆಕೇತಕಿಯು ॥



ಚಾಂಪೇಯಮನೋದಾಕಡೆಯು । ಸಂಪದಕರನೆಲೆಯಲೆಗಿರಿಯು॥೨॥ ಬಿಲ್ವ
ಶಮಿಾಕಿಸಲಯಗಳನು । ಚೆಲ್ವಶೋಕೆತಳಿರುಗಳನ್ನು ॥ ಚೆಲ್ವೆಯರಿದಕೊ
ಯ್ಯುವೆನಾನು । ಸಾಲ್ವೈರದಿಹಮಾಂದಳಿರನ್ನು॥ ೩ ॥

( ಗಿರಿಜೆ ) ಈ ಪ್ರದೇಶವು ಮನೋಹರವಾಗಿರುವದರಿಂದ ನಾನು ತಪಕ್ಕೆ ಮಂಡಿಸುವೆನು.

( ಸಖಿ ) ಮಾತೆಯೆ ಆಗಬಹುದು ಹುವ್ವಿನಿಂದಲ್ಲದೆ ನಾರಿಗೆ ಮತ್ತ್ಯಾವದರಿಂದ ಯೋಗ್ಯತೆ ಉಂಟಾಗುವದು ಅದರಂತೆ ನಿನ್ನ ಚರಣ ಸೇವೆಯಿಂದ ಕಿಂಕರರಾದ ನಾವು ಧನ್ಯರಾಗಿರುವೆವು.

( ಗಿರಿಜೆ ) [ತಪಸ್ಸಿಗೆ ಕುಳಿತುಕೊಂಡು ]

ರಾಗ__ಧನಾಸರಿ__ಆದಿತಾಳ.

( ಯೇನಮಾಡುವೆ ಮುಂದಕೆ ) ಯೆಂಬಂತೆ,

ಪಾಹಿಮಾಂದೇವಶಂಕರ । ನತಜನೋದ್ಧಾರ ॥ ಪ ॥ ಮೋಹಾದಿವ
ರ್ಜಿತ । ಭೂಷಿತಸುಚರಿತ । ಶ್ರೀಹಿತವಂದಿತ । ಪಾಹಿಮಾಂಪ್ರೂತ ॥ ೧ ॥
ಶರಣಸಂಜೀವನೆ । ಸುರುಚಿರಭಾವನೆ । ಕರುಣಾಳುದೇವನೆ । ಪೊರೆಯೊ
ನೀನೆಂನನೆ ॥೨ ॥ ನಂಬಿದೆನಿಂನಪಾ । ದಾಂಬುಜವನುಕೃಪಾ । ಲಂಬಯಂನ
ನುಕಾಪಾ । ಡಂಬೆನುಜಿತಕೋಪ ॥ ೩ ॥

[ಯೆಂದು ಯೇಕ ಧ್ಯಾನದೊಳು ಕುಳಿತಿರುವಳು ಸಖಿಯರು ಯಡ ಬಲದಲ್ಲಿ ನಿಂತಿರುವರು. ]

( ದ್ವಿತಿಯಾಂಕ ಪ್ರಾರಂಭಃ )

---

( ಇಂದ್ರಸಭಾ ) ( ನರ್ತಕಿಯರು ) ರಾಗ__ರೂಪಕತಾಳ.

( ತರುಣೀಮಣಿ ವಸಂತ ) ಯೆಂಬಂತೆ.

ಸುರಪಾಲಪಾಲಿತಾರ್ತಜಾಲಲೋಲಪಾಲಿಸ್ಯೈ । ಕರುಣಾಲವಾಲಧೀ
ರಸುಗುಣಜಾಲಪಾಲಿಸ್ಯೈ ॥ ೧ ॥ ಸುರುಚಿರಸುಹಾರಧೀರಶಚಿಪ್ರಮನೆವಿಜಯಿ
ಸ್ಯೈ । ಪಲ।ವೈರಿಶೌರಿಸಹಜದೇವತಿಲಕವಿಜಯಿಸ್ಯೈ ॥ ೨ ॥ ಸ್ಮರಸುಂದರಾಂಗ
ರೂಪವಿಜಿತಕೋಪವಿಜಯಿಸ್ಯೈ।ವರಗಾನನರ್ತನಾತಿಲೋಲನಿರತಶೋಭಿಸ್ಯೈ

( ಇಂದ್ರ ) ರಾಗ__ಕಾಹಾನ__ರೂಪಕತಾಳ.

( ಆಡದಿಜನ್ಮಮಾಯಿತ್ತೇನಫಲಮೋವಿಾ ) ಯೆಂಬಂತೆ.

ಹೃದಯಮೋನಿದುಬಲು। ಕದಲುತಲಿರ್ಪುದು ।ಹದನವ್ರುತಿಳಿಯದೆ ಹಾ

Digitized by ROJA MUTHIAH RESEARCH LIBRARY

॥ ಪ ॥ ವಿಧಿಯಿಂದಮುಂದೇನು । ವಿಧಮಪ್ಪುದೊಕಾಣೆ । ಮದನಜನಕ ನೆಮ್ಮ ।ಮುದದಿಕಾಯಲಿಬೇಕು ॥ ೦ ॥ ನಾನಾವಿನೋದಕ್ಕೆ।ಮಾನಸಬಾರದು । ನ್ಯೂನತೆಘನವೆನಗೆ॥ಯೇನೊಂದುತೋರದೆ।ಜ್ಞಾನ ಚಂಚಲವಾಗಿ। ಸಾನುರಾಗವಬಿಡು।ತಾನುಬಳಲುವೆನು॥ ೧ ॥ಕಾಲವಕಳಿಯಲಿ।ಕಾಲಸ್ಯವೆನಗೀಗ॥ಮೇಲಾಗಿತೋರುವುದು॥ಆಲೋಚನೆಯೇನು।ಪೇಳಲುತೋರದು। ನಾಲಿಗೆಪಣಗುತ್ತಿ ।ಲಿರುವದೀದಿನದೊಳು॥ ೨ ॥ ಆರಿಂದಲೇನಪ।ಕಾರಮಪ್ಪುದೊಕಾಣೆ ।ಸಾರಿಯೋಚಿಸಿದರಿಂದು । ಘೋರನಿಶಾಚರ।ವಾರವುಯಮ್ಮೊಳು । ವೈರವಬೇಗದಿಹಾರೈಸುತಿರುವರು ॥ ೩ ॥

ಎಲೈ ಅಗ್ನಿಯೆ ತಾರಕಶೂರ ಪದ್ಮಸಿಂಹಾಸ್ಯರೆಂಬ ದೈತ್ಯರು ವರದಿಂದಲು ಬಲದಿಂದಲು ಸೈನ್ಯದಿಂದಲೂ ಅಧಿಕವಾಗಿ ನಮ್ಮ ವೈಭವಕ್ಕೆ ಹಾನಿಯನ್ನು ವುಂಟುಮಾಡುವದರಲ್ಲೀ ಯೋಚಿಸುತ್ತಿರುವರಲ್ಲ ಮುಂದೆ ಯೇನು ಮಾಡುವದು.

(ಅಗ್ನಿ) ಮಹೇಂದ್ರನೆ ಯಿದು ನಿಜವು ಯಲ್ಲಿ ನೋಡಿದರೂ ತಾರಕನ ಪ್ರತಾಪವೇ ಅಧಿಕವಾಗಿರುವದು ಹ್ಯಾಗೆ ಪರಿಹಾರವಾಗಬೇಕೋ ತಿಳಿಯದು.

(ಯಮ) ಸುರನಾಥನೆ ಅವರಿಗೆ ವರದ ಮಹಿಮೆ ಯಿಲ್ಲದಿದ್ದರೆ ಯಿಷ್ಟು ಅಧಿಕರಾದ ಬಲರೆನಿಸುವರೆ.

(ಇಂದ್ರ) ಆದ್ದರಿಂದಲೇ ಇಷ್ಟು ಹೆಚ್ಚಿರುವರಲ್ಲದೆ । ಮತ್ಯಾವಬಲವು ಸಹಾಯವನ್ನು ಅಧಿಕವಾಗಿ ಮಾಡುವದಿಲ್ಲ ಹಿಂದೆ ಇದ್ದ ರಾಕ್ಷಸರಲ್ಲಿ ಯಾರು ಯಿವರಿಗೆ ಸರಿಬಾರರು.

(ವನಪಾಲಕ ಘಾಬರಿಯಿಂದ ಓಡಿಬಂದು)

ರಾಗ__ಶಂಕರಾಭರಣ__ಆದಿತಾಳ.

(ಗುಂಗುಂಗುಂಮನಿತೊ) ಯೆಂಬಂತೆ.

ಅಬ್ಬಬ್ಬಕೆಡುತಿದೆ। ಒಬ್ಬನೆಸಿಕ್ಕುತ । ತಬ್ಬಿಬ್ಬಿಯಾದೆನು। ಮಬ್ಬೀಗರಿಂದಲಿ॥ ೧ ॥ ಒಟ್ಟಿಗೆಬಂದಾರು ।ಕೆಟ್ಟಆದೈತ್ಯರು । ತಟ್ಟುತಕೆಂನೆಗೆ ಅಟ್ಟೀದರೆಂನನು ॥ ೨ ॥ ನಂದನಾರಾಮವು।ಯಿಂದುಪಾಳಾಯಿತು । ವಂದಿಸಿನಿಂದಿಸಿಬಂದೇನುನೊಂದೆನು ॥ ೩ ॥

ಈಗ ಬಂದಿರುವ ತಾರಕನ ಸೈನ್ಯದವರು ಸುರಪುರವನ್ನು ಸೂರೆಮಾಡದೆ ಯಂದಿಗೂ ಯಿರಲಾರರು. [ಯೆಂದು ಮರೆಯಾಗುವನು]



7226

(ದೇವತೆಗಳು) ರಾಗ__ಮಧ್ಯಮಾವತಿ__ಆದಿತಾಳ.

[ಬಂನಿಬಂನಿಪೋಗುವ] ಯೆಂಬಂತೆ.

ಅಕಟವೋಸವಾಯಿತು। ಸಕಲಸಿರಿಯುಹೋಯಿತು ॥ ಪ ॥ ಯಕುತಿಯೇನುಮುಂದಕೆ । ಸುಖವಕಾಣೆಚಿತ್ತಕೆ ॥ ೧ ॥ ಮನೆಮನೆಗಳನುಗ್ಗುತ । ವನಿತೆಯರನುಪಿಡಿಯುತ । ಬಿನುಗರೆಲ್ಲನಲಿವರು । ಘನತೆಮಾನಕಳದರು ॥ ೨ ॥ ಬಿಡರುಬೇಡಿಕೊಂಡರು । ಘುಡುಘುಡಿಸುತಮೊರೆವರು ।ಹೊಡೆದುಬಡಿಯುತಟ್ಟುತ । ಕಿಡಿಯನುಗುಳುತಿರುವರು ॥ ೩ ॥ ಸೂರೆಯಾಯ್ತುಸುರಪುರ । ಯಾರನರಿಯೆಕಾಯ್ವರ । ವಿಾರಿಬಾಯಾರ್ವೆವು। ಯಾರಿಗಿನ್ನು ದೂರ್ವೆವೂ ॥ ೪ ॥

[ವನಪಾಲಕ] [ಬೇಗನೆ ಬಂದು]

ಯಲೈ ಇಂದ್ರ ಮಹಾರಾಜನೆ ದಾನವರ ಸೈನ್ಯವು ನಂದನ ವನವನ್ನು ಪಾಳುಮಾಡಿರುವರು.

[ಇಂದ್ರಾದಿ ದೇವತೆಗಳು ಥಟ್ಟನೆಯದ್ದು]

ಯೇನು ! ಯೇನು ! ರಾಕ್ಷಸರ ಸೈನ್ಯವು ನಂದನವನದ ಬಳಿಗೆ ಬಂದಿರುವದೆ

[ವನಪಾಲಕ] ಮಹಾರಾಜನೆ ಸಮುದ್ರವು ಮೇರೆ ದಪ್ಪಿದಂತೆ ಬರುತ್ತಲೆ ಯಿತ್ತು. ನಾನು ಜೀವಸಹಿತ ಬಿಡಿಸಿಕೊಂಡು ಓಡಿ ಬಂದಿರುವೆನು

[ಯಿಂದ್ರ] ಯಲೈ ದಿಗುಪತಿಗಳೆ ಮುಂದೇನು ಮಾಡಬೇಕು ಬೇಗನೆ ಹೇಳಿರಿ.

[ಯಮ] ಯಲೈ ಪುರುಹೂತನೆ ಗುರುಗಳಾದ ಬೃಹಸ್ಪತಿಗಳು ಇದಕ್ಕೆ ತಕ್ಕ ಆಲೋಚನೆ ಹೇಳುತಿದ್ದರು ಈಗೆಲ್ಲಿರುವರೊ ಕಾಣೆನಲ್ಲ.

[ಅಗ್ನಿ] ಗುರುಗಳಾಡುವ ಸಂಧಿಗೆ ಅವರು ಯಂದಿಗೂ ಒಪ್ಪರು. ಚನ್ನಾಗಿ ತಿಳಿಯುವದು.

[ತಾರಕನಸೇನೆ] [ತೆರೆಯೊಳಗೆ] ರಾಗ__ಜಂಜೂಟಿ__ಏಕತಾಳ.

[ನೋಡಿರಂಣಓಡುತಿರುವಕಾಡುಹಂದಿಯು] ಯೆಂಬಂತೆ.

ಅಲಲೆಬಿಡದೆಪಿಡಿದುಸುರರ । ತೆಲೆಯುಕೊಯ್ಯುವ । ಛಲದಿಬಿರಿದಕಟ್ಟಿನಾವು । ನಿಲದೆಮೆರೆಯುವ ॥ ೧ ॥

[ಇಂದ್ರ] ಯಿದೇನು ಬಂದೇ ಬಿಟ್ಟರಲ್ಲ ಗತಿಯೇನು ಐಯ್ಯಾ ದೇವತೆಗಳೇ ಬೇಗನೆ ಹೋಗುವ ಬನ್ನಿರಿ ನಮ್ಮ ಕಂಡರೆ ನೀಚರು ಸುಮ್ಮನೆ ಬಿಡುವದಿಲ್ಲ [ಯಂದು ಯಲ್ಲರು ದಿಗ್ಭ್ರಾಂತಿಯಿಂದ ಓಡಿಹೋಗುವರು]

Digitized by ROJA MUTHIAH RESEARCH LIBRARY

[ಸೇನೆ] ಮೀರಿದವರಸಿರಿಯನೆಲ್ಲ । ಸೂರೆಗೊಳ್ಳುವ । ಮಾರಿಯುಳಿಗೆ ಹಬ್ಬವನ್ನು।ಸಾರಿಮಾಡುವ॥ ೧ ॥ ಕೊಲ್ಲಬೇಡಿಸುರಪನನುಮೆಲ್ಲನೆಪಿಡಿದು। ನಿಲ್ಲಗೊಡದೆಶೆರೆಯೊಳಿರಿಸಿ। ಹಲ್ಲಮುರಿಯುವ ॥ ೨ ॥

[ಸೇನೆ ಹಿಂದುಗಡೆಯಲ್ಲಿ ಬಂದು]

[ತಾರಕ] ಎಲೈ ಸೈನಿಕರೆ ಶೀಘ್ರದಿಂದ ನೀಚರಾದ ದೇವತೆಗಳನ್ನು ಶೆರೆಹಿಡಿಯಿರಿ. (ಅಪ್ಪಣೆಯಂದು ಗಡಬಡಿಮಾಡಿ ಹುಡಿಕಿನೋಡಿಬಂದು)

ಯಲೈ ದಾನವೇಶನೆ ಯಲ್ಲಿ ನೋಡಿದರು ಈ ಸುರಪುರವು ಪುರುಷರಹಿತವಾಗಿರುವದು.

[ತಾರಕ) ಅಹಾ ಈ ವಿಷಯವನ್ನು ತಿಳಿದು ಮೊದಲೇ ಬಲಹೀನನಾದ ಮಹೇಂದ್ರನು ದೇವಪರಿವಾರವೆಲ್ಲ ಕೂಡಿಕೊಂಡು ಹೋದನಲ್ಲ ಒಳ್ಳೇದು ಅವರ ಸ್ತ್ರೀಯರನ್ನೆಲ್ಲಾ ಹಿಡಿದುಕೊಂಡು ಬನ್ನಿರಿ.

[ಯಂದು ಮಿಂದ್ರನ ಸಿಂಹಾಸನದಲ್ಲಿ ಕುಳ್ಳಿರುವನು]

[ಸೇನೆ] [ಅಪ್ಪಣೆಯಂದು ದೇವತಾಸ್ತ್ರೀಯರನ್ನು ಹಿಡಿದುಕೊಂಡು ಬಂದು ತಾರಕನ ಮುಂದೆ ನಿಲಿಸಿ]

ಎಲೈ ದನುಜೇಂದ್ರನೆ ಅಮರಾಂಗನೆಯರು ಸಿದ್ಧರಾಗಿರುವರು.

[ದೇವತಾಸ್ತ್ರೀರು) ರಾಗ—ಪರಾಳಿ—ರೂಪಕತಾಳ.

(ಪರಿಪಾಲಿಸುಮಹಿಮ ಅನಾಥರ] ಯೆಂಬಂತೆ,

ಪರಿಪಾಲಿಸುದಾನವಾ।ಗ್ರಣಿಯೆನೀನು । ಮಿರದೀಗಮ್ಮ ಯಮಾನವ। ಪರರುಪಲಾಯನ । ಪರರಾಗಿಬಳಲುತ । ಕರಗಿಕೊರಗಿನಾವು । ಮೊರೆಯಿಡುವದಕೇಳಿ ॥ ೧ ॥ ತಪ್ಪೇನುನಂಮಿಂದ । ಲಪ್ಪಿತುಕೋವಿದ । ನಪ್ಪನಿನಗೆಯಿಂತಪ್ಪುದೆಕೋಪವು ॥೨॥ ವಿಧಿಯಿಂತುನಮ್ಮನೀ।ವಿಧವಮಾಟದುದಹ। ಸದಮಲಕೀರ್ತಿಗಾ । ಸ್ಪದನಾಗಿಬಿಡದೆಮ್ಮ ॥೩॥

[ತಾರಕ] ಒಳ್ಳೇದು ಯಿಂನುಮೇಲೆ ನೀಚನಾದ ಸುರಪಾಲನ ಸ್ಮರಿಸದೆ ನಿಮ್ಮ ಪಾಲನೆಗೆಲ್ಲ ತಾರಕಾಸುರನೆಯನ್ನು ಪದಾಗಿ ತಿಳಿದುಕೊಂಡಿರುವದು.

ಎಲೈ ಸೇನಾಧಿಪತಿಯೇ ಯಿವರುಗಳನ್ನು ಕರದುಕೊಂಡು ಹೋಗಿ ಯಥೋಚಿತವಾದ ಪೋಷಣೆಯಿಂದಿರುವಂತೆ ನೇಮಿಸು

[ಸೇನಾಧಿಪ] [ಅಪ್ಪಣಿಯಂದು ಕರದುಕೊಂಡುಹೋಗುವನು]

ಶೂರಪದ್ಮ ಎಲೈ ಸಹೋದರನೆ ಇಂದ್ರಾದಿಗಳು ದೇವಲೋಕವೆಲ್ಲ ಅರಸಿ ನೋಡಿದರೂ ದೊರೆಯದೆಹೋದರಲ್ಲ



ಸಿಂಹಾಸ್ಯ ಛೀ ಛೀ ರಣಹೇಡಿಗಳಂತೆ ಕಣ್ಣಿಗೆಕಾಣದೆ ಓಡಿಹೋಗಿರುವವರಿಂದ ಪ್ರಯೋಜನವೇನು ಪ್ರಸ್ತುತದಲ್ಲಿ ಆಗಬೇಕಾದ ಕೆಲಸವೇನು

(ತಾರಕ) ಎಲೈ ಅನುಜಾತನೆ ಈ ಸುರಪುರದ ಸಕಲ ಭಾಗ್ಯವೆಲ್ಲ ನಮ್ಮದೆಂತಲು ಮತ್ತು ಆ ದೇವತೆಗಳು ಯಿಲ್ಲಿಗೆ ಪ್ರವೇಶ ಮಾಡಿದಲ್ಲಿ ಹಿಡಿದು ಶೆರೆಮನೆಯಲ್ಲಿರಿಸುವಂತೆಯೂ ಡಂಗುರವನ್ನು ಹಾಕಿಸು.

[ಸೇನಾಧಿಪತಿ ಅಪ್ಪಣೆಯಂದು ನೇಮಿಸುವನು]

(ದಂಡಿ] [ಯಾರೀಹಳುಭಲಯಂತೀಹಳು] ಯೆಂಬಂತೆ

ಭಲಚನ್ನಾಯಿತು । ಬಹುಚನ್ನಾಯಿತು ॥ಪ॥ಖಿಂನರಾಮಾಡುತ್ತ। ಲೋಡಿಸಿದುದು ॥ ಅನು ॥ ಬೆರದಿರ್ದಬೇಗ । ಸುರನಾಥನೀಗ । ಕೆಟ್ಟನು ಭ್ರಷ್ಟನು । ದುಷ್ಟನವನು ॥ ಆಹಾ ॥ ೧.॥ ದಿಗುಪಾಲರೆಲ್ಲ । ಮಿಗೆಕೆಟ್ಟರಲ್ಲ ॥ ಜಗದೊಳುದೈತ್ಯರ । ಪೋಲ್ವರಿಲ್ಲ ॥ ಬಹು ॥ ೨ ॥ ಮೀರಿದಬಲನ ।ತಾರಕಸುರನ ॥ ವೈರದಿಬಾಳ್ವರೇಂ । ಧಾರುಣಿಯಲಿ ॥ಭಲಚನ್ನಾ ॥ ೩ ॥

ಕ್ಯಾರ್ ಹೆಶಾಯಿಬಾಕಾಂವಾಸನಗ್ಯಾರಯಿಸಾತ್ಯರನಾಮುಮುಮುಲ್‌ಬಜರಕರೋತೀನ್ಕೋರ್‌ಬಾಲ್ಕರಿಂಗೆ ಸಿಪಾಯಿನಿಗಾರಖೊ ॥

ಸಮಸ್ತರಿಗೂ ತಿಳಿಯಪಡಿಸುವದೇನಂದರೆ ಈ ದಿವಸ ಮೊದಲು ಯಿನ್ನುಮೇಲೆ ಈ ಸುರಪುರಕ್ಕೆ ದಾನವಾಗ್ರಣಿಯಾದ ತಾರಕಾಸುರನೇ ಶಿಕ್ಷೆ ರಕ್ಷೆಗೆ ಕಾರಣಪ್ರಭುವಾಗಿಯಿರುವನೆಂದು ತಿಳಿಯಬೇಕು. ದೇವತೆಗಳು ಅರಿದಾಗಲಿ ಮರದಾಗಲಿ ಯಿಲ್ಲಿಗೆ ಪ್ರವೇಶ ಮಾಡಿದರೆ ಅವರನ್ನು ಹಿಡಿದು ಶೆರೆಮನೆಯಲ್ಲಿರಿಸಿ ದಾನವೇಶನಿಗೆ ತಿಳಿಸುವದು.

ದಂಡಿಹಾಡು ॥ ರಾಗ—ಸುರಟಿ—ಆದಿತಾಳ.

[ಸಾರಾಯಿ ಕುಡಿಯುವ ಬಾರೆಲೆ] ಯೆಂಬಂತೆ.

ಯನ್ನಂಥದಂಡಿಯರಿಲ್ಲ । ಬಹುಚಂನಾಗಿಕೇಳಿರಿಸುಳ್ಳ ॥ ಪ ॥ ಯಿಚ್ಚೆಯಿಂಕುಡಿದೆನು । ಹೆಚ್ಚಾಗಿಸಾರಾಯ । ಲೊಚ್ಚೆಯಹಾಕುತಸೊರೆಗ್ರಂದು। ಸೀಸೆ।ಬಾಯನ್ನು। ಬಿಚ್ಚಿ।ಸೀಯನ್ನು ।ಮೆಚ್ಚಿ।ನೊಯ್ಯುದೆನಲಿದೆನುನಾನು ॥ ಕೈಮುಕಬಾಬನು । ಕೋಳಿಯಮೊಟ್ಟೆಯ ।ಭೂಮಿಯೊಳಿಲ್ಲದಪಡೆಯನ್ನು॥ ನೋಡಿತಿನ್ನೂಪೆ । ಯಿಂನೆನೆಂನುಪೆ । ರುಚಿಯನ್ನು ನಾನೇನೆನಲಿನ್ನು ॥ ೨ ॥ ಭಂಗಿಯುಭಂಗವು । ಹೆಂಡವುಭಂಡಾಟ । ಹೆಂಗಿದ್ದರೂನಾನೊಲ್ಲಪ್ಪ ॥ ಮೆಚ್ಚಿ।ಸಾರಾಯ । ಹೋದೆ।ಮಹಾರಾಯ ।ಕೊಟ್ಟ।ದಾರೂಪಹೀರಿದೆನಪ್ಪ ॥ ಯಂನಂಥದಂಡಿಯರಿಲ್ಲ ॥ ೩ ॥ [ಯಂದು ಹೋಗುವನು]

[ ಇಂದ್ರಾದಿಗಳು ] [ ಹೇಮಾಚಲದಗುಹೆಯಲ್ಲಿ ಸೇರಿಕೊಂಡು ]
ರಾಗ—ನೀಲಾಂಬರಿ—ಚಾಪು.
[ ಹಾಸಾರಸಾಕ್ಷಿ ಆಯಾಸಂ ] ಯೆಂಬಂತೆ.

ಯೆಂತುನಾಸೈಸುವೆನು । ಚಿಂತೆಯನುಹಾ ॥ ಪಲ್ಲ ॥ ಮುಂತೇನುತೋರದೆ । ಯಿಂತೀಗಗುಹೆಯೊಳು । ಕುಂತಿರ್ಪೆನೊಹಾಹಾ! ಸಂತಸವಡಗಿ ॥ ೧ ।
ಧರೆಯೊಳಿಂದ್ರಭೋಗ । ಕೆರಕವಿಲ್ಲೆಂನುತ । ಲೊರೆಯುವನುಡಿಯಿಂದು । ಬರಿದಾದುದೆಹಾ ॥ ೨ ॥ ತರುಣಿಯರನುನಾನು । ಪರರಕೈವಶಗೈದು ॥ ಹರಹರಜೀವಿಸಿನ್ನಿರಬಾರದುಹಾ ॥ ೩ ॥ ವರಕಾಮಧೇನುವು । ನೆರೆಕಲ್ಪತರುಮದ ॥ ಕರಿಯುತಾಮೊದಲಾಗಿ । ಪರರಿಗಸೇರಿತು ॥ ೪ ॥ ಹಾಹಾಪ್ರಿಯೆಶಚಿ । ಮೋಹನಾಂಗಿಯೆನಿಂನ । ನೀಹದನವಗೈದೆ । ಸಾಹಸಹೀನಂ ॥ ೫ ॥

ಮುಂದೆ ಯೇನುತಾನೆ ಮಾಡುವೆನು ಯಿಂಥಾ ಪ್ರಮಾದಕ್ಕೆ ಕಾರಣಮಾಡಿದ ನನ್ನ ವಿಧಿಯಂನು ಯೆಷ್ಟು ನಿಂದಿಸಿದರೂ ಸಾಲದಂತಿರುವದು.

( ಅಗ್ನಿ ) ರಾಗ—ಆದಿತಾಳ.
[ ಮನವೇ ಮರೆಯಬೇಡ ] ಯೆಂಬಂತೆ,

ಸೈರಿಪುದೈಸುರಪ । ನಿರ್ಜಿತಕೋಪ ॥ ಪ ॥ ವಿಾರಲಪ್ಪುದೆವಿಧಿಯಾರಿಗೆಬಿಡುವುದು । ನಾಶಿಯೋಚಿಸಿಮಿತಿ । ವಿಾರಿಚಿಂತಿಸುವದ ॥ ೧ ॥ ಯೆಡರಿನೊಳಗೆನೋಡೆ । ಕಡುಧೈರ್ಯವಾನುತ ॥ ನಡೆವುದೆನೀತಿಯು । ಪಡದೆಚಿಂತೆಯನೀಗ ॥ ೨ ॥ ಪಾಲಕರಿಲ್ಲವೆಪೇಳುನಮಗೆಸುರ । ಪಾಲಕಯೋಚನ। ಸೀಲನಲ್ಲವೆನೀನೂ ॥ ೩ ॥

ದಿವಿಜೇಂದ್ರನೆ ನಮ್ಮಗಳ ಕಷ್ಟಕಾಲದಲ್ಲಿ ಸಂಜೀವನ ಪ್ರಾಯರಾದ ಗುರುಗಳಲ್ಲದೆ ಅಲೋಚನೆ ಪೇಳಲು ಮತ್ತೆ ಬೇರಿಲ್ಲ.

[ ಯಮ ] ರಾಗ—ಬ್ಯಾಗಡೆ ತಾಳ.
[ ಕೇಳಂಮಾತಂಗಿ ] ಯೆಂಬಂತೆ,

ಸೈರಿವುದೆಂತೈಧೀರಸುರಾಧಿಪ ॥ ಪಲ್ಲ ॥ ಬಲ್ಲಿದರವರ್ಗಳುಗೆಲ್ಲಲಸಾಧ್ಯವು । ಯಿಲ್ಲದಿರಲುಮನ । ನಿಲ್ಲದೈಸುಮನ ॥ ೧ ॥ ಬಳಲುವರೆಂತೆಂತೊ । ಲಲನಾಜನರೆಮ್ಮ । ನಿಲದೆಸ್ಮರಿಸಿಹಾಹಾ । ಪಲವೈರಿವಿಾರಿ ॥ ೨ ॥ ವರಬೃಹಸ್ಪತಿಗಳು। ಬರದೇಕೆತಡವಮಾ। ಡಿರುವರೊಕಾಣೆನಾ । ಹರಹರಜಗದೀ ॥ ೩ ॥

ಈ ವಿಷಯವನ್ನು ತಿಳಿದ ಆ ಬೃಹಸ್ಪತಿಗಳುಯಾಕೆತಾಮಸ ಮಾಡಿರುವರೊತಿಳಿಯೆನು.

Digitized by ROJA MUTHIAH RESEARCH LIBRARY



[ ಇಂದ್ರ ] ಅವರ ಆಗಮನವನ್ನೇ ನಾನು ಕೋರಿರುವೆನಲ್ಲ ಹಿಂದೆ ನಮಗೆ ಪ್ರಾಪ್ತವಾಗಿದ್ದ ವಿಪತ್ತಿಗೆಲ್ಲ ನಂಮ ಗುರುಗಳ ವಚನಾಂಮೃತವೆ ಪಾಲನೆಯಾಗಿರುವದಲ್ಲವೆ?

[ ಬೃಹಸ್ಪತಿ ಬಂದು ] ( ಆತ್ಮಗತ ] ಆಹಾ ಈ ಮಹೇಂದ್ರನಿಗೆ ಪ್ರಾಪ್ತಿಸಿರುವ ಕಷ್ಟವನ್ನುಯೆಷ್ಟೆಂದು ಹೇಳಿದರೂ ಕೊಂಚವಾಗಿಯೇ ಇರುವದು ಅಮರಾವತಿಯಲ್ಲಿ ರತ್ನ ಸಿಂಹಾಸನಾಸೀನನಾಗಿ ಭೋಗದೊಳಾಡುತ್ತಿದ್ದು ಈಗ ಈ ಗಿರಿಗುಹೆಯೊಳು ಬೇಡರೊಡಯನಂತೆ ದೇವತೆಗಳಿಂದಾವೃತನಾಗಿ ಮಂಡಿಸಿರುವನು. ಲೋಕದಲ್ಲಿ,

ಕಂದ ॥ ಸಿರಿವಂತನತಿರಿದುಣಿಸುತ । ತಿರಿದುಂಬವನಸಿರಿಗೆಪತಿಯಮಾಡುತೊತ್ತ
ಲವಿಂ । ಹರಹರಕನಸಿನತೆರದೋಳ್ । ಅರಿಯಲ್ವಿಧಿಮಾಡಿನೋಡಿ
ನೀಡುಂನಲಿಗುಂ ॥

ಈಗ ಇವನನ್ನು ಸಂತೈಸುವೆನು. [ ಯೆಂದು ಇಂದ್ರಾದಿಗಳಬಳಿಗೆ ಬರುವನು ]

( ಇಂದ್ರ ) ಪೂಜ್ಯರಿಗೆ ವಂದಿಸುವೆನು.
( ಗುರು ) ಇಂದ್ರ ಮಹಾರಾಜನೆ ನಿನಗೆ ಶುಭಮಾಗಲಿ.
( ಯಮ ) ಪೂಜ್ಯರಿಗೆ ವಂದಿಸುವೆನು.
( ಗುರು ) ನಿಮಗೆ ಕ್ಷೇಮವುಂಟಾಗಲಿ.

ಮಹೇಂದ್ರನೆ ಹಾನಿ ವೃದ್ಧಿಗಳುಯಾರಿಗೂ ಬಿಡುವದಿಲ್ಲ. ಇದನ್ನು ನಿಜವಾಗಿ ತಿಳಿಯುವದು.

[ ಇಂದ್ರ ] ರಾಗ—ನಾದನಾಮಕ್ರಿಯ—ಆದಿತಾಳ.
( ಹಾಪಾಪಿದೈವವೆ ಯೇಪರಿಪೋಗುವೆ ) ಯೆಂಬಂತೆ.

ನೋಡಿದಿರೇಯಂನ । ಕೇಡನಿದನುಮುಂನ ॥ ಪಲ್ಲ ॥ ಆಡಲೇನೀಪರಿಮಾಡಿತು ವಿಧಿಯುಹಾ ॥ ಅ ॥ ದುರುಳರಬಾಧೆಯಿಂ । ಧರೆಯೊಳು ಜೀವಿಸಿ। ನ್ನಿರವನೆಕಷ್ಟಹಾ । ಮರೆಯುಪದೇನಿಂನು ॥ ೨ ॥ ಮುಂದೇನಗೈವುದು । ಇಂದೇನುತೋರದು । ವಂದಿಪೆನುಸುಪರ್ವದು । ವಂದನೀಯರೆವಲಿದು ॥ ೩ ॥

ಕಷ್ಟಕಷ್ಟ ಈ ಭೂಭಾರಕರಾದ ತಾರಕಶೂರಪದ್ಮಸಿಂಹಾಸ್ಯರೆಂಬ ದೈತ್ಯರಿಗೆ ಯಾರನ್ನು ಸಮಾನರಾಗಿ ಯೆಣಿಸಲಾರೆನು ಮುಂದೆನಮಗೆ ಕ್ಷೇಮವನ್ನು ಉಂಟುಮಾಡಲು ಮಹಾತ್ಮರಾದ ತಾವಲ್ಲದೆ ಮತ್ತೆ ಬೇರಿಲ್ಲ.

( ಗುರು ) ಎಲೈ ಪುರಹೂತನೆ ಲಾಲಿಸು,

ಕಂದ ॥ ಬಲದೋಳ್ಬಲದೋಳ್ನೋಡಲ್ । ನೆಲದೋಳ್ಸವುನಿಲ್ಲಖುಲ್ಲ ತಾರಕಗದರಿಂ । ನಿಲದೆಲ್ಲರುಪೋಗುತಲಾ । ಜಲಜಾಸನಗರುಹೆಕಾಯ್ವನೇಳಿರಿನೀವ್ಗಳ್ ॥

( ಇಂದ್ರ ) ಪೂಜ್ಯರೇ ತಂವು ಅಪ್ಪಣೆಯುಂತಾಗಲಿ.

[ ಯಂದು ಯಲ್ಲರು ಸತ್ಯಲೋಕಕ್ಕೆ ಹೋಗುವರು. ]

[ ದೇವತೆಗಳು ] ರಾಗ__ಜಂಜೂಟಿ__ಆದಿತಾಳ.

[ ಶಂಭೋಗಿರಿಜಾಪತೇಸುರಸೇವ್ಯ ] ಯೆಂಬಂತೆ,

ಜಯವಾಣೀಪತೇಪರಿಪಾಹಿ ॥ ಪಲ್ಲ ॥ ನುತಲೋಕೇಶ । ಹತಭವಪಾಶ । ಪತಿತಾವನಪರಿಪಾಲಿಸೈ ॥ ೧ ॥ ಕಾಮಿತದಾತ।ಕಮಲಸಂಜಾತ। ವಿಮಲಗುಣಾಕರಪಾಲಿಸೈ ॥ ೨ ॥ ಜಗತೀಮೂಲಾ । ನಗಧರಬಾಲ । ನಗರಿಪುಮುಖ್ಯಸುರಾರ್ಚಿತ ॥ ೩ ।

( ಬ್ರಹ್ಮ ) ಕಂದ । ಯೇನಿದುವಾಕ್ಪತಿಸುರಸಂ । ತಾನವುಕೂಡಿಂತುವೊರೆಯುನಿಕ್ಕುತವಿಗೆದುಂ । ಮಾನವುನಾನುತನಿಂದನಿ । ಧಾನವುದೇದಹಹಬೇಗಮಾಜದೆನುಡಿಯೈ ।

( ಗುರು ) ಸೃಷ್ಟಿಕರ್ತನೆ ಕ್ರೂರಾತ್ಮರಾದ ತಾರಕಶೂರಪದ್ಮ ಸಿಂಹಾಸ್ಯರೆಂಬ ದೈತ್ಯರು ಸುರಲೋಕದ ಸಿರಿಯನೆಲ್ಲಸೂರೆತೆಗದುಕೊಂಡು ಯಿವರುಗಳ ಸ್ತ್ರೀಯರುಗಳನ್ನು ಸಹ ಶರೆಯೊಳಗಿಟ್ಟುಕೊಂಡುಯಿರುವದರಿಂ ಮಕರಂದವಂ ಪಾನಮಾಡುತ್ತಲಿರ್ದ ಅಳಿಗಳು ಮರೀಚಿಕಾಜಲಕ್ಕಾಸೆಪಡುವಂತೆ ಈ ದುರಾವಸ್ಥೆಯಲ್ಲಿ ಬಳಲಿಬಾಯಾರುತ್ತಲಿರುವರು

[ ಬ್ರಹ್ಮ ] ಮಹೇಂದ್ರನೆ ನೀನು ಬಹಳವಾಗಿ ಬಳಲಿರುವೆ ಸಮಾಧಾನವನ್ನುಹೊಂದು.

[ ಇಂದ್ರ ] ರಾಗ__ತೋಡಿ__ರೂಪಕತಾಳ.

( ಜನನೀಜನಕಾಯನಗಾರಿಂನು ) ಯೆಂಬಂತೆ,

ಕರುಣಾನಿಧಿಯೆ । ಪೊರೆಯೈವಿಧಿಯೇ ।ಪಲ್ಲ। ಧರೆಯೊಳ್ತಾರಕ ।ಗೆರಕವನರಿಯೆ ॥ ಅನು । ಅಮರಾವತಿಯಾ । ಕ್ರಮಿಸುತಲೆಂವು । ಪ್ರಮದಾಜನರ । ಶರೆಗೈದರಯ್ಯೋ ।೧। ಸುರರಂಕೊಪಿ । ಮರುಗುತಲೋಡಿ । ಗಿರಿಯುಗುಹೆಯೊ । ಳಿರುತಿರ್ದನುನಾಂ । ೨ । ಐರಾವತವಂಸಾರಥೇನುವನಂ ಕ್ರೂರಾತ್ಮರುಕೈ । ವಿಾರಿಸಿದರುಹಾ । ಕರುಣಾನಿಧಿಯೆ । ೩ ।

(ಯಮ] ಎಲೈ ಲೋಕೇಶನೆ ಪ್ರಾಣಿಗಳ ಸುಕೃತದುಷ್ಕೃತ ವಿಚಾರ



ಪರನಾದ ನನಗು ಯಿಂಥಾ ವಿಧಿಯು ಪ್ರಾಪ್ತವಾದಮೇಲೆ ಕೊರತೆಯಾರಿಗೆಂದು ಭಾವಿಸು.

( ಅಗ್ನಿ ) ಸಂದೇಹವೇನು ನಮ್ಮ ಹಾನಿ ವೃದ್ಧಿಗಳೆಲ್ಲ ತ್ರಿಮೂರ್ತಿಗಳಿಗೆ ಕಾರಣವಾದದ್ದೇಸರಿ

( ಬ್ರಹ್ಮ ) ರಾಗ__ಶಂಕರಾಭರಣ__ರೂಪಕತಾಳ.

( ಬಿದರಬೇಡಮದನಸುಂದರಾ ) ಯೆಂಬಂತೆ.

ಬಿದರಬೇಡಿಕೇಳಿರೆಲ್ಲರು । ನೀವಿನ್ನುಮನದಿ ॥ ಪ ॥ ಮಂದಮತಿಗಳಾದಖಳರು । ಹಿಂದೆತಪದಿಮೆಚ್ಚಿಸುತ್ತ ॥ ಲಿಂದುಮೌಳಿಯಿಂದಲೊರವ।ಚಂದದಿಂದಪಡೆಯುತವರು ॥ ೧ ॥ ಲೇಸಿನಿಂದಜಾಂಡವನ್ನು । ಸಾಸದಿಂದಲಾಳುತಿಹರು ॥ ಭಾಸುರಾಂಗಿಮಾಯೆಯಿಂದ । ಲೈಸೆಜನಿಸಿದವರುಖಳರು ।೨। ಕೇಳಿಬಲ್ಲಿನವರದುಷ್ಟ । ಕೇಳಿಗಳನುಮಾದರೀಗ ॥ ಕಾಲಕಳಿಯೆಸಲ್ಲದೇಳಿ। ರೇಳಿರೈಯ್ಯಪೇಳ್ವೆಕೇಳಿ ॥ ೩ ॥

ಕಂದ ॥ ಕರುಣಾಳುಗಳರಸಂಶ್ರೀ ॥ ವರನಲ್ಲದೆಬೇರೆಕಾಣೆದನುಜರಕುಲಮಂ । ತರಿಯುಲುಶರಣಾಗತರ।ಪೊರೆಯಲ್ಕವನೆಡೆಗೆಬೇಗತೆರಳುವದೆಲ್ಲರ್ ॥

( ಗುರು ) ಸಹಜವೇಸರಿ ದನುಜಾರಿಯಂದು ಮೊದಲೆ ನಾಮವನ್ನು ಧರಿಸಿರುವ ಲಕ್ಷ್ಮೀವರನಿಗೆ ಈ ವಿಷಯು ದೊಡ್ಡದಲ್ಲ.

[ ಯಂದು ಯಲ್ಲರು ವೈಕುಂಠಕ್ಕೆ ಹೋಗುವರು. ]

( ಬ್ರಹ್ಮ ) ಎಲೈ ಮಹೇಂದ್ರನೆ ನೀವೆಲ್ಲರು ಸಂತೋಷ ವಾರಿಧಿಯೊಳು ಆಳುವಂತೆ ಪರಮಾತ್ಮನನ್ನು ತೋರಿಸುವೆನು

( ದೇವತೆಗಳು ) ರಾಗ__ಪಂತುವರಾಳಿ__ಆದಿತಾಳ.

[ ಯೇನಿದುಚೋದ್ಯವು ] ಯೆಂಬಂತೆ.

ಪೊರೆಯೈಯ್ಯಶ್ರೀಹರಿ। ಕರುಣದಿಸಾರಿ ॥ ಪ ॥ ಮೊರೆಯಿಡುವೆವ್ಮನು । ಭರದಲಿಸೀನು ॥ ೧ ॥ ದೀನಜನಾವನ । ಭೂನುತಪಾವನ ॥ ಮೌನಿಹೃದಂಬುಜ । ಭಾನುಸುತೇಜ ॥ ೨ ॥ ಕಾಮಿತದಾಯಕ । ಸಾಮಜಪಾಲಕ ॥ ಶ್ರೀಮನೋನಾಯಕ । ತಾಮರಸಾಂಬಕ ॥ ೩ ॥

( ವಿಷ್ಣು ) ಎಲೈ ಲೋಕೇಶನೆ ಈ ಸುರಗುರು ಸುರೇಂದ್ರಾದಿ ದೇವತೆಗಳಿಗೆ ಬಂದ ಕಷ್ಟವೇನು ಈ ಖಿನ್ನತೆಯಾಂತ ಮುಖದಿಂದ ಬಂದಿರುವದೇತಕ್ಕೆ ಹೇಳಿರಿ ಯಾರಿಂದಲೇನು ಬಾಧಕವಾಗಿರುವದು.

Digitized by ROJA MUTHIAH RESEARCH LIBRARY

(ಬ್ರಹ್ಮ) ಸರ್ವಜ್ಞನಾದ ಭಗವಂತನೇ ತಾರಕಶೂರ ಪದ್ಮ ಸಿಂಹಾಸ್ಯರೆಂಬ ಘೋರವಾದ ದೈತ್ಯರು ಹೆಚ್ಚಿರುವದೆ ಕಾರಣವಲ್ಲವೆ.

(ಇಂದ್ರ) ರಾಗ—ಬೇಹಾಗ್—ಆದಿತಾಳ.

(ನಾಸೈಸಲಾರೆನು) ಯೆಂಬಂತೆ.

ಪೊರೆವುದೈಶ್ರೀವರ । ಪರಮಕೃಪಾಕರ ॥ ಪ ॥ ತರಿಯುತದುರುಳರ । ಮರೆಯೊಕ್ಕದೀನರ ॥ ಅ ॥ ಸೈರಿಸಲಾರೆವು । ಯಾರಿಗೆದೂರ್ವೆವು । ಧೀರನೀನಲ್ಲದಿಂ । ನಾರುದಯಾಳುವೆ ॥ ೧ ॥ ಸುರಯುವತಿಯರನು । ಶರೆಯೊಳಗಿಟ್ಟನು ॥ ಹರಹರಸಿರಿಯನು । ಕಠವಶಗೈದನು ॥ ೨ ॥ ಮೂಜಗಪಾಲನೆ । ರಾಜಿತರೂಪನೆ ॥ ಪೂಜಿತಪಾದನೆ । ಶ್ರೀಜಗಧೀಶನೆ ॥ ೩ ॥

(ಬ್ರಹ್ಮ) ಕಂದ ॥ ಕೆಟ್ಟವರಟ್ಟುಳಿಗಾರದೆ । ನಿಟ್ಟುಸುರಂಬಿಟ್ಟುಬಿಟ್ಟುಕೈವಿಡಿದವರಂ । ಮುಟ್ಟಿಳಿದಶೋಕದಿಂಪೊರ । ಮುಟ್ಟಲ್ಲಿಗೆವಟ್ಟುಗೂಡಿಬಂದೆವುತಂದೆ ।

(ವಿಷ್ಣು) ರಾಗ—ಕಾಂಭೋದಿ—ರೂಪಕತಾಳ.

(ಸಾಮಿನಿರಂಮಾನವೆ ಓಚೆಲಿಯಾ) ಯೆಂಬಂತೆ.

ಲಾಲಿಸಿಕೇಳಿರೆಲ್ಲ । ಈನುಡಿಯ ॥ ಪ ॥ ದುರುಳರಕ್ಕಸರಿಗೆ। ಧರೆಯೊಳುಸಮರಿಲ್ಲ ॥ ಅರಿದಿರ್ಪನವರೊಳು । ಧುರವೆಸಗುತನಾನು ॥ ೧ ॥ ಹರನಿಂದಲ್ಲದೆ । ಮರಣವು ಹೊಂದುವ। ತೆರನಿಲ್ಲವದರಿಂದ। ಭರದೊಳ್ಳೈದುತನಾವು ॥ ೨ ॥ ತಡವಮಾಡದೊಲೀಗ । ಮೃಡನಿಗೆದೂರಲು ॥ ನಡೆಯಿರೆಲ್ಲರುಕೆಂ । ಜಡೆಯನಲ್ಲಿಗೆಬೇಗ ॥ ೩ ॥

ಎಲೈ ಶಾರದಾವರನೆ ಹಿಂದೆ ಈ ದೇವತೆಗಳನ್ನು ರಕ್ಕಸರು ಬಾಧಿಸಲು ಇವರು ಮಹೇಶನಿಗೆ ಮೊರೆಯಿಟ್ಟದ್ದಕ್ಕಾಗಿ ಮೇರು ಶಿಖರದಲ್ಲಿ ವಾಸಿಸುವದೆಂತಲೂ ದೈತ್ಯರಿಗೆ ಅದು ಅದೃಶ್ಯವಾಗಲೆನ್ನುತ್ತಲು ಶಾಪಾನುಗ್ರಹವಿತ್ತಿರುವನಾದುದರಿಂ ದೈತ್ಯರಿಗೆ ಕಾಣದಂತೆ ನಾನು ಸಹ ಮೇರು ಶಿಖರದಲ್ಲಿ ವಾಸಿಸುವೆನು ಈಗ,

ಕಂದ ॥ ಈವಿವರವನರುಹಾಲ್ಕ । ದೇವಂನಿಜಚರಣಭಜಕಜನಸಂಜೀವಂ॥
ಕಾವಂಬೇಗಂನಿರ್ಮಲ । ಭಾವಂಮೇಣುಳಿದುನಮ್ಮಕಾವನದಾವಂ॥

[ ಯಿಂದು ಯೆಲ್ಲರು ಸಮೇತ ಮಹೇಶನಲ್ಲಿಗೆ ಹೋಗಿ ]

ರಾಗ—ಶಂಕರಾಭರಣ—ಆದಿತಾಳ.

(ದೇವತೆಗಳು) ನೋಟ್ ॥ ಶ್ರೀಕರಾ । ಭೂಧರಜಾದಾರ । ಧೀ



ರಾ । ದಾತಾರ । ತ್ರಿಪುರಹರ । ಸದುದಾರ ॥ ಪಲ್ಲ ॥ ಯತಿವಿನುತಾ । ಮರೇಂದ್ರಾ । ವಂದಿತ । ಪಾದಮಹಿತಪೂತಾ ॥ ಕಾಲಜಿತ । ಮಹೋಂನತ॥ ಅಭಯಕರಾ । ಫಣೀಂದ್ರ । ಭೂಷಿತ। ಮಾಧವಸಖವರದ ॥ ದುರಿತಹರ ಕೃಪಾಕರ ॥ ೨ ॥ ವನಜಭವಸುರೇಂದ್ರಪೂಜಿತ । ನೀಲಸುಗುಳಶಂಭೋ । ಭುವನವಿಭೋ । ಮಹಾಪ್ರಭೋ ॥ ೩ ॥

(ಪರಮೇಶ) ವೃತ್ತ ॥ ಯೇನೀಯದ್ಭುತಮೇತಕಿಂತುಭಯಮೈ। ದೇವಾಳಿಯಂಕೂಡುತಂ। ನೀನೈದೀ ಪರಿಯಿಂದಲೆಂನನುತಿಸಲ್। ಕಾರಿಂದಲೇನಾದುದೈ। ಶ್ರೀನಾಥಾಂಬುಜಸೂನುಪೇಳನಿಮಗೀ । ದುಂಮಾನಮೇಕಾದುದೈ । ಮಾನೋಪೇತಸುರೇಂದ್ರಗೇನುದುಗುಡಂ। ನಾಕೇಳಿಕಾಪಾಡುವೇಂ ।

(ವಿಷ್ಣು) ಮಹೇಶನೆ ಧರಾಭಾರಕರಾದ ತಾರಕ ಸಿಂಹಾಸ್ಯ ಶೂರ ಪದ್ಮರೆಂಬ ದೈತ್ಯರು ಹೆಚ್ಚಿ ಈ ದೇವತೆಗಳ ಸಕಲ ಸಿರಿಯನ್ನು ಸೂರೆಮಾಡಿರುವದರಿಂದ ಯಿವರು ಸೈಸಲಾರದೆ ಈ ಕಮಲಾಸನನಿಗೆ ದೂರಿದರಿಂದ ಈತನು ನಂನ ಸಮೀಪಕ್ಕೆ ಕರದುಕೊಂಡು ಬಂದನು ನಾನು ಆ ದೈತ್ಯರ ಕೂಡೆ ಯುದ್ಧವನ್ನು ಪೂರ್ವದಲ್ಲೇ ಮಾಡಿ ಜಯವರಿಯದಾಗಿರುವೆನು ಈಗ ಕೃಪಾಳುವಾದ ನೀನು ಲೋಕಕಂಟಕರನ್ನು ಸಂಹರಿಸಿ ನಂಬಿದ ಈ ದೇವತೆಗಳನ್ನು ಉದ್ಧರಿಸಬೇಕು.

(ಇಂದ್ರ) ಕಂದ ॥ ಕ್ಷಣಯುಗವಾಗಿದೆಕಳಿಯಲ್। ಫಣೆಗಂಣನೆ ಖಳರಭಯದಿಮರುಗುತಮನೆದೋಳ್ ॥ ರಣದೊಳ್ತರಿಯುತಲವರಂ ।
ನಣಿಯರದಿಂನಂಬಿದೆಮ್ಮಕಾವುದುಮೇಶ ।

(ಪರಮೇಶ) ರಾಗ—ಜಂಜೂಟಿ—ಆದಿ.(ಅರಳಿದಸಂಪಿಗೆ) ಯೆಂಬಂತೆ.

ಕಮಲಾಂಬಕಕಮಲಾಸನಸುರಪತಿ । ಯಮರರೆದಿಗುವರರೇ । ಕುಮತಿಗಳಿಂದಲಿನೊಂದಿರಬಿಡಿನಾ । ಮಮತೆಯಿಂದಲೊರವೇ ॥ ೧ ॥ ಗಿರಿಜಾತೆಯಳನುಪರಿಣಯವಾಗಲು । ತರಳನೊಗೆವನವನಿಂ ॥ ದುರುಳರರಣದೊಳು । ತರಿಯಿಸಿಕ್ಷಣದೊಳು । ಪರಿತೋಷವಮಾಳ್ಪೇಂ ॥ ೨ ॥ ಅದುವರಿಗೆಲ್ಲರುಹೃದಯದಿಬೆಚ್ಚದೆ । ಮುದದಿಂದಿರುತಿಹುದು ॥ ಯಿದಕಾಂತಪ್ಪೆನುಹಂಬಲವನುಬಿಡಿ । ಹದನವಿದನುತಿಳಿದು ॥ ೩ ॥

(ದೇವತೆಗಳು) ರಾಗ—ನೋಟು—ತಾಳ.

(ಓಹೋಹೊಸಂದಿಯುಓಡುತ್ತಲಿರ್ಪುದು) ಯೆಂಬಂತೆ.

ಜಯಮಹೇಶ್ವರ । ಜಯತುಶಂಕರ। ಭಯವಿದೂರವಿಜಯಿಸೈಸ । ದಾ

Digitized by ROJA MUTHIAH RESEARCH LIBRARY

ಕೃಪಾಕರ ॥ ೧ ॥ ಧನ್ಯರಾದೆವು। ಮಾನ್ಯಬಾಳ್ದೆವು । ಪನ್ನಗೇಶಭೂಷ ಣಾವ್ಯಗ್ರ। ನಿನ್ನಬಿಡೆವು ॥ ೨ ॥ ಕಾಲಕಾಲನೇ । ಕರುಣಾಲಪಾಲನೆ । ಪಾಲಿತಾರ್ತಜಾಲರವಾ । ಲೋಲಮಿತ್ರನೆ ॥೩॥ ಯಿಂದುಶೇಖರ । ವಂದಿತಾಮರ ॥ ವೃಂದಚಿದಾನಂದದಯಾ । ಸಿಂಧುಶುಭಕರ ॥೪॥

(ತೃತೀಯಾಂಕ ಪ್ರಾರಂಭಃ)

---

( ಇಂದ್ರ ) ರಾಗ—ಧನಾಸರಿ—ಆದಿತಾಳ.

( ತಾಳಲಾರೆಸಖಿ ಮಾರನೇಳ್ಗೆಯ ) ಯೆಂಬಂತೆ.

ಸಲಹೈಯ್ಯಶ್ರೀವರ । ದೀನಜನಾದರ । ಪಲ್ಲ ॥ ಖಳರಬಾಧೆಯನೆಂದು । ಕಳೆಯುತಸೌಖ್ಯವ । ಗೊಳುವೆವೊನಾವುಹಾ । ನಳಿನದಳೇಕ್ಷಣ॥ಅ॥ ಗಿರಿಜಾತೆಯಳನೆಂದು । ಬೆರೆಯುತಲೀಶನು ॥ ತರಳನಿಂದೈತ್ಯರ । ನಿರದೆಸಂಹರಿಪನೊ ॥ ೧ ॥ ಯಾರಕಂಡರುನಮ್ಮ। ಪ್ರಾರಾಬ್ಧತೀರದು ॥ ಈ ರೀತಿಯಿಂದಬಾ । ಯಾರುವ್ರೊಲಾಯಿತು ॥ ೨ ॥ ಅನುಮಾನವಾಗಿದೆ । ಮನಕೇನುತೋರದೆ ॥ ಚಿನುಮಯಾತ್ಮಕಮುಂದೇ। ನನುವಮಾಡುವದುಹಾ ॥ ೩ ॥

[ಅಗ್ನಿ]ಲಕ್ಷ್ಮೀವರನೆ ಮಹೇಶನು ಗಿರಿಜಾ ಕಲ್ಯಾಣವಂಕೈಕೊಂಡು ಕುಮಾರನಿಂದ ದನುಜರನ್ನು ನಾಶಗೊಳಿಸುವೆನೆಂದುಅಭಯವಿತ್ತು ಬಿಜಯಂಗೈದನಲ್ಲ ಆದರೆ ಗಿರಿಜಾಕಲ್ಯಾಣ ಯಂದಿಗಾಗುವದು ಕುಮಾರೋತ್ಪತ್ತಿಯಿಂದ ಖಳರ ನಾಶವೆಂದಿಗಾಗಬೇಕು ನಾಶವಾದ ನಮ್ಮ ಐಶ್ವರ್ಯವು ಯಂದಿಗೆ ನಮ್ಮ ಕೈಸೇರಬೇಕು ಈ ವಿಷಯದಲ್ಲಿ ಯೋಚಿಸಿ ಕೊರಗುತ್ತಿರುವ ನಂಮನ್ನು ಉದ್ಧರಿಸು

[ಇಂದ್ರ] ಕಂದ । ಯಂತೆಂತಳುವರೊನಮ್ಮಯ । ಕಾಂತಾಜನ ಹೃ
ದಯದೊಳಗೆ ಕುದಿಯುವಮರುಕಿಂ । ಯಿಂತವರೊಶವಾಗಲಿಕೇಂ ।
ನೋಂತರೊಹಾಬಂದುದೇತಕೀಪರಿಬಿದಿತಾಂ ॥

( ವಿಷ್ಣು ) ರಾಗ—ಜಂಜೂಟಿ—ರೂಪಕತಾಳ.

( ಯಿಂದುವದನೆ ಕುಂದರದನೆ ) ಯೆಂಬಂತೆ.

ಲಾಲಿಸಿಂದ್ರಸುಗುಣಸಾಂದ್ರ ಶೂಲಪಾಣಿಯ । ಲೀಲೆಯನ್ನುಪೇಳ್ವೆನಿಂನು। ತಾಳದೆಸಭಯಾ ॥ ೧ । ಸನಕಮುಖ್ಯಮುನಿಗಳೆಲ್ಲ। ವಿನುತಶಿವನನೂ । ಅನುವಿನಿಂದಬೇಡಿಕೊಳಲು । ಚಿನುಮಯಾತ್ಮನು । ೨ ॥ ತಪಕೆ



ಮಂಡಿಸಿರ್ದನಿತ್ತು । ಗುಪಿತರೂಪಿನೊಳ್। ಜಪಿಸುತಿರ್ದಳವನಗಿರಿಜೆ । ವಿಫುಲಮಹಿಮೆಯಾ ॥ ೩ ॥

( ಬ್ರಹ್ಮನಕಡೆ ತಿರುಗಿ )

ಎಲೈ ಸೃಷ್ಟಿಕರ್ತನೆ ಶಂಕರನು ಹೀಗೆ ಜಗತ್ತಿನ ಶಿಕ್ಷೆ ರಕ್ಷೆಗೆ ಮುಖ್ಯನಾಗಿ ಈಗ ತಪಕ್ಕೆ ಕುಳಿತಿರುವನಲ್ಲದೆ ವಿಷಯವಿಮುಖನಾಗಿರುವದರಿಂದ ಸರ್ವಲೋಕವು ಅವನಂತೆಯೇ ಸ್ತ್ರೀಪುರುಷಭಾವವಿಲ್ಲದಂತಾಗಿರುವದಲ್ಲ ಮುಂದೆಯೇನು ತಾನೆ ಮಾಡಬೇಕು.

[ ಬ್ರಹ್ಮ ] ಪರಮಾತ್ಮನೆ ಯಿದು ಸಹಜವೇಸರಿ ಧರಾಮೂಲಸ್ತಂಭನಾಗಿ ಅಣುರೇಣು ತೃಣಕಾಷ್ಟದಲ್ಲಿ ವ್ಯಾಪಿಸಿರುವ ಚೈತನ್ಯಾತ್ಮಕನಂತೆಯೇ ಸಕಲ ಪ್ರಾಣಿಗಳು ಶಮೆಯಲ್ಲಿ ಮಗ್ನರಾಗಿರುವರು ಯಿದಕ್ಕೆ ಯೇನುಯೋಚನೆ.

[ ವಿಷ್ಣು ] ಈಗ ಮಹೇಶನ ಚಿತ್ತವನ್ನು ಚಾಂಚಲ್ಯವಂ ಮಾಡಿ ಗಿರಿಜಾತೆಯನ್ನು ಕೂಡುವಂತೆ ಬೇಗದಿಂ ಪ್ರಯತ್ನಿಸಬೇಕಾದರೆ ಈ ವಿಷಯಗಳಿಗೆ ಅದಿದೇವನಾದ ನಮ್ಮ ಮನ್ಮಥನೇ ಸರಿ.

[ ಬ್ರಹ್ಮ ]ಆಹ ಸಂದೇಹವಿಲ್ಲ ಈ ಕಾರ್ಯವನ್ನು ಆತನು ನೆರವೇರಿಸಬಲ್ಲನು.

[ ಇಂದ್ರ ] ಪರಮಾತ್ಮನೆ ಪ್ರಕೃತ ಕಾಲಕ್ಕೆ ತಕ್ಕ ಅಲೋಚನೆಯನ್ನು ಮಾಡಿರುವ ನಿನಗೆ ವಂದಿಸುವೆನು.

[ ವಿಷ್ಣು ] ಎಲೈ ಸೇವಕನೆ ಬೇಗಹೋಗಿ ನಮ್ಮ ಮನ್ಮಥನನ್ನು ಕರದುಕೊಂಡು ಬಾ,

[ ಸೇವಕ ] ಪರಮಾತ್ಮನೆ ಅಪ್ಪಣೆ, [ ಯಂದು ಕರತರುವನು ]

( ಮನ್ಮಥ ] ಜನಕನೆ ವಂದಿಸುವೆನು.

[ ವಿಷ್ಣು ] ಬಾಲಕನೆ ನಿನಗೆ ಕಲ್ಯಾಣಮಸ್ತು.

[ ಮನ್ಮಥ ] ಲೋಕೇಶನೆ ನಿನಗೆ ವಂದಿಸುವೆನು.

( ಬ್ರಹ್ಮ ) ನೀನು ಮಹೋನ್ನತನಾಗು.

[ ಮನ್ಮಥ ] ಪರಮಾತ್ಮನೆ ನಂನ ಕರಸಿರುವ ಕಾರಣವಲ್ಲದೆ ನೀನು ಮುಖವನ್ನು ಬಾಡಿಸಿಕೊಂಡು ಮಾತನಾಡುವದೇತಕ್ಕೆ

[ ವಿಷ್ಣು ] ಕಂದ ॥ ಕಂದನೆಹೃದಯಾನಂದನೆ । ಕಂದರ್ಪಕರಾಂ
ಬುಜಾತ್ತಸುಮಕಾರ್ಮುಕನೆ । ಕುಂದುತಕಂದುತನಿಂದಿರು। ವಿಂದಿರ
ನಂದವನುಚಂದದಿಂದೀಕ್ಷಿಸುನೀ ॥

Digitized by ROJA MUTHIAH RESEARCH LIBRARY

[ ಮನ್ಮಥ ] ಜನಕನೆ ಈ ದೇವೇಂದ್ರನಿಗೆ ಕುಂದಕ ಬರುವದಕ್ಕು ಭುವನಾವನಶೀಲನಾದ ನೀನು ಈ ವಿಷಯವನ್ನು ನನಗೆತೋರಿಸುವದಕ್ಕು ಕಾರಣವೇನು ಅಪ್ಪಣೆ ಕೊಡು.

[ ವಿಷ್ಣು ] ರಾಗ__ಜಂಗಲ್__ಆದಿತಾಳ.

[ ಪಾರಿತುಪಾರಿತು ಫಡಮೃಗಪ್ರೋತ ] ಯೆಂಬಂತೆ.

ಬಾಲಕೆಗುಣಮಣಿ। ಮಾಲಿಕಲಾಲಿಸು । ಖೂಳತಾರಕದೈತ್ಯ। ಕಾಳು ಮಾಡಿಹನು ॥ ಪ ॥ ನಾಕವಬಿಡಿಸುತ । ಶೋಕವಗೊಳಿಸುತ । ಪಾಕಶಾಸನ ಗಿಂತು । ವ್ಯಾಕುಲಗೈದ ॥ ೧ ॥ ಸುರಯುವತಿಯರನು । ಶರೆಯೊಳಿರಿಸಿತಾನು। ಹರಹರಮೆರೆವನು । ವರೆಯಲೇನದನು ॥ ೨ ॥ ನೆರೆನಂಬಿದಮಿಾ। ಸುರರನುಕಾಯ್ವುದು ॥ ಬಿರಿದಲಿನಮಗೆಂದು । ಧರೆಯೊಳುಕೇಳೂ ॥ ೩ ॥

[ ಮನ್ಮಥ ] ತಾತನೆ ಒಬ್ಬನಾದ ತಾರಕದೈತ್ಯನು ಯಿಷ್ಟು ಸಾಹಸವಂ ಮಾಡಿದನೆ.

[ ವಿಷ್ಣು ] ಬಾಲಕನೆ ಬೆಂಕಿಗೆ ಘಾಳಿ ಸಹಾಯವಾದಂತೆ ಈ ತಾರಕನಿಗೆ ಅಣ್ಣ ತಂಮಂದರಾದ ಶೂರಪದ್ಮ ಸಿಂಹಾಸ್ಯರೆ ಮೊದಲಾಗಿ ಲಕ್ಷಾಂತರ ರಾಕ್ಷಸಬಳಗವಿರುವದಲ್ಲ.

[ ಮನ್ಮಥ ] ಒಳ್ಳೇದುಇದಕ್ಕೆ ಈಗ ನೀವು ಯೇನುಯೋಚಿಸಿರುವಿರಿ.

[ ವಿಷ್ಣು ] ಸುಕುಮಾರನೆ ಆ ದೈತ್ಯರನ್ನು ಯಾರೂ ಕೊಲ್ಲುವದಕ್ಕೆ ಸಾಧ್ಯರಲ್ಲ. ಆದ್ದರಿಂದ ಮಹೇಶನಿಗೆ ಈ ವಿಷಯವನ್ನು ದೂರಿದೆವು ಆತನು ಗಿರಿಜಾಕಲ್ಯಾಣವನ್ನು ಕೈಕೊಂಡು ಕುಮಾರೋತ್ಪತ್ತಿಯಿಂದ ದನುಜರ ನಾಶಗೊಳಿಸುವೆನೆಂದು ಅಭಯವಿತ್ತು ಈ ಕಾರ್ಯಕ್ಕೆಮುಂಚೆಯೇ ಮುನಿಗಳಭಿಲಾಷೆಯು ಫಲಿಸುವಂತೆ ಯೋಗಾರೂಢನಾಗಿ ಕುಳಿತಿರುವನು.

[ ಮನ್ಮಥ ] ಆದರೆ ಯಿದಕ್ಕೆ ನಾನು ಯೇನುಮಾಡಬೇಕು.

[ ವಿಷ್ಣು ] ಕಂದ ॥ ಸಾಂಬಗೆನಿಂನಂಬುಜಶರ । ವಂಬಿಡದೆಸೆದಂಬಿ
ಕೆಯಳಗಿರಿಜೆಯನೆರೆವ್ರೋಲ್ । ಮುಂಬರಿದುಮಾಡಿಕೀರ್ತಿನಿತಂಬಿನಿ
ಯಂ ಶಂಬರಾರಿಕೊಡುತನಲಿಯೈ ॥

[ ಮನ್ಮಥ ] [ಮೂರ್ಛಿತನಾಗಿ ಚೇತರಿಸಿಕೊಂಡು ]

ಎಲೈ ಭಗವಂತನೆ ಯೇನೆಂದು ನುಡಿದೆ ಯೋಗಾರೂಢನಾದ ಮಹೇಶನಿಗೆ ಬಾಣ ಪ್ರಯೋಗ ಮಾಡಬೇಕೆ ಆಹಾ,



ರಾಗ__ಭೈರವಿ__ರೂಪಕತಾಳ.

[ ವರಗುರು ಉಪದೇಶ] ಯೆಂಬಂತೆ.

ಆಹಾಯಿದೇನಿಂತುನುಡಿಯೆಮಾನಸಬಂತು । ಪಾಹಿಕೇಶವಾ । ಪ್ರೋಹಿಸೆಪರಗತಿ । ಬಾಹಿರನಾಗುವೇ । ಪಾಲಿಸೆಂನುವ ॥ ೧ ॥ ಮೂರುಲೋಕಾಧಿಪ । ಧೀರಶಂಕರನೊಳು । ಕಾಯಾಲಾಪರೇ । ಈರೀತಿಯರಿಯದೆ । ಸಾರಿಪ್ರೋಗೆಂಬರೆ । ಮನ್ನೀಸೆಂನನೂ ॥ ೨ ॥ ಮರುಳನಾಗುತಶುಮಶರವೆಸೆಯಲುನಾನು । ಬಾಳ್ವೆನೆಂತುಹಾ॥ ಹರಿಹರಿದನುಜಾರಿಪ್ರೊರೆಯುವದೆಂನನು । ಶ್ರೀನಾರಾಯಣಾ ॥ ೩ ॥

ಕಂದ ॥ ಲೋಕದವ್ಯಾಪಾರವನವ । ಲೋಕಿಸದಾಸನವಬಲಿದುತಾನೇತಾ
ನಾ । ಗೇಕಾನಂದದೊಳಿರುವಪಿ । ನಾಕಿಯನಾವವನುಕಣಕಿಬಾಳು
ವನಿಳೆಯೊಳ್ ।

ಜನಕನೆ ಹರನ ಬಲದಿಂದ ತ್ರಿಲೋಕವರನೆಂಬ ನಾಮಾಂಕಿತವನ್ನು ಧರಿಸಿದ ನಿನ್ನ ಕುಮಾರನಾದ ನಾನು ಕೊರಳ ಬಲುಹನ್ನು ಅರಿಯದೆಗಿರಿಯನ್ನು ಹೊರುವೆವೆಂಬುವರಂತೆ ಉದ್ಧರಿಸಿದ ದೇವನಲ್ಲಿ ದ್ರೋಹಾಲೋಚನೆಯಂ ಮಾಡಿದರೆ ಈಗಿರುವ ನರಕಗಳು ಸಾಲದೆ ಬೇರೆ ರೌರವಾದಿ ನರಕಗಳನ್ನು ನಿರ್ಮಿಸುವರಲ್ಲ ಮತ್ತು ಆ ಶರಣಾಗತ ಪಾಲನಾದ ಜಗಜ್ಜನಕನಿಗೆ ನಂನ ಅಲ್ಪವಾದ ಕುಸುಮಬಾಣವಂ ಪ್ರಯೋಗಿಸಿದಲ್ಲಿ,

ಕಂದ। ಬಾರದೆದುರ್ಗತಿಪರಗತಿ। ದೂರಾಗದೆಸೂರ್ಯಚಂದ್ರರಿರುವನ್ನೆಗುತಾಂ।
ಕ್ರೂರನುಪರಗತಿದೂರನು । ಮಾರನುಯನುತರರೆಜಗದಿಜರಿವರುಮಿದುಡಲ್।

[ ಬ್ರಹ್ಮ ] ಎಲೈಮನಸಿಜನೆ ಲೋಕದಲ್ಲಿ ಅನೇಕರು ಪರಿಪರಿಯಾದ ಪುಷ್ಪದಿಂದ ಮಹೇಶನ ಅರ್ಚಿಸಿ ಭಾಗ್ಯವಂತರಾಗುವಂತೆನಿನ್ನ ಕುಸುಮಬಾಣವನ್ನು ಅರ್ಚಿಸಿದಲ್ಲಿ ಕೋಪಿಸುವನೇ ಬಿಡುಬಿಡು.

[ ಮನ್ಮಥ ] ಎಲೈ ಕಮಲಾಸನನೇ ಮಹೇಶನು ಕರಣತ್ರಯಂಗಳನ್ನು ಜೈಸಿರುವನಾದ್ದರಿಂದ ಈಗ ಯಾವದರಲ್ಲು ಕೆಣಕುವದು ಅಸಾಧ್ಯವೆಂದು ನನಿಗೆತಿಳಿಯುವದು.

[ ಬ್ರಹ್ಮ ] ಛೀ ಛೀ ಯಿದೇನು ಬೇರಬಲ್ಲವರಿಗೆ ಯಲೆಯನ್ನು ತೋರಿಸಿದಂತೆ ಮಾತನಾಡುವೆ ತ್ರಿಲೋಕದಲ್ಲೂ ನಿನಗೆ ನೇಮಿಸಿರುವ ಕಾರ್ಯದಂತೆ ನೀನು ಮಾಡಿದರೆ ಸರ್ವಜ್ಞನು ಸರ್ವವ್ಯಾಪಕನು ಕೋಪಿಸುವನೆ ಬಿಡುಬಿಡು.

Digitized by ROJA MUTHIAH RESEARCH LIBRARY

[ಮನ್ಮಥ] ಹಾಗಾದರೆ ಹಿಂದೆ ಪತ್ನಿಯರು ಬೇಡಿಕೊಂಡಂತೆ ಪರುಣನಲ್ಲಿ ಗೋವುಗಳನ್ನು ಯಾಚಿಸಿಕೊಂಡು ಅಭ್ರಮಾರ್ಗವಾಗಿ ಬರುತಿರ್ದ ಕಶ್ಯಪ ನಾಣತಿಯ ಗೋವುಗಳ ಕ್ಷೀರವು ಮಂದರಾದ್ರಿಯಲ್ಲಿ ಸೋಮನಾಥನಮಂಡೆಮೇಲೆ ಬೀಳಲು ಕಂಣ್ದೆರೆದು ನೋಡಿದಮಹೇಶನ ದೃಷ್ಟಿಯಲ್ಲಿ ಸಕಲವು ದಹಿಸಿರುವವಲ್ಲ ಅದರಂತೆ ಭಕ್ತಿಯಿಂದ ಬಾಣಪ್ರಯೋಗಮಾಡಿದಲ್ಲಿ ನಿಮ್ಮ ಕಾರ್ಯವಾಗುವದಿಲ್ಲ ಕೋಪದಿಂದ ಮಾಡಿದಲ್ಲಿ ನಾನು ಉಳಿಯುವದಿಲ್ಲ.

[ಬ್ರಹ್ಮ] ಎಲೈ ಸ್ಮರನೆ ನೀನು ಮಾಡಬೇಕಾದ ಕಾರ್ಯವನ್ನು ಮಾಡಿದರೆ,

ರಾಗ—ಮಧ್ಯಮಾವತಿ—ಆದಿತಾಳ.

[ಬೇಸರಸೇಬನರಹಿ] ಯೆಂಬಂತೆ.

ಕೋಪಿಸುವನೇನೆಲೊ । ಪಲ್ಲ । ಆಪರಶಿವನುಮಚಾಪವೆಸೆಯೆ । ಅ ॥ ನೋಡುಸುರರಬಲು । ಪಾಡನುಬೇಡುತ । ಬಾಡಿಮೊಗವುಭಯ।ಗೂಡಿರುವರು ।೧। ದೀನರಕಂಡರೆ । ಮಾನಸಮರುಗದ । ಮಾನವನೇಕೆಲೊ । ಸೂನವಿಸಿಖ । ೨ । ಬಿಡುಸಂದೇಹವ। ತೊಡುಧೃತಿಕವಚವ । ಕುಡುವಿಲ್ವಿಡಿಪೂರಮಡುತಡವೇಂ ॥ ಕೋಪಿಸುವನೇನೆಲೋ ।೩।

[ಮನ್ಮಥ] [ಆತ್ಮಗತ] ಆಹಾ ಯಿದೇನು ಮಹಾ ಪ್ರಮಾದ ಬಂತಲ್ಲ ನಾನು ಮಾಡತಕ್ಕ ಕಾರ್ಯವನ್ನು ಮಾಡಲಾರದವನೆಂದು ಈ ವಿಧಿಯು ಛಲವನ್ನು ಮಾಡುವನು ಒಳ್ಳೇದು [ಪ್ರಕಾಶ] ಯಲೈ ಶಾರದಾವರನೆ ಭಾರತಿಯಲ್ಲಿ ನಿಂನ ಮನವು, ವೃಂದೆಯಲ್ಲಿ ಪರಮಾತ್ಮನ ಮನವು, ಗುರುಪತ್ನಿಯಲ್ಲಿ ಚಂದ್ರನು, ಮೇನಕೆಯಲ್ಲಿ ಗಾಧಿಜನು ಯೋಜನಗಂಧಿಯಲ್ಲಿ ಪರಾಶರನು, ಹರಿಣಿಯಲ್ಲಿ ಸುಕಮುನಿಯ ಮನವು ಮೋಹಾಪಾಶದಲ್ಲಿ ಸಿಕ್ಕಿರುವಂತೆ ಮಾಡಿರುವದು ನಂನ ಬಾಣದ ಆಧಿಕ್ಯವಲ್ಲವೆ ಆದರೂ ಯಿವರಲ್ಲದೆ ।

ಕಂದ । ವುಳಿದೀಲೋಕತ್ರಯಗಳ ।ನಳಲಿಸಿ ಬಳಲಿಸುತಸುಖಿಸಿನಲಿಯಿಸುತಿ
ರ್ಪೆಂ । ಪ್ರಳಯದಧೂರ್ಜಟಿಯಂಕೆಣ।ಕುಳಿವೆನೆದುರ್ಗತಿಯಗಳಿಸಿ
ಬಾಳೆನುತಿಹರೇಂ ।

[ಬ್ರಹ್ಮ] ಪರಮಾತ್ಮನೆ ಈ ಬಾಲ ಭಾಷಿಯಾದ ಮನ್ಮಥನಿಗೆ ಹೇಳಿದ ನೀತಿಯುಲ್ಲ ಬೇಸಿಗೆಯೊಲ್ಲಿ ಬಿತ್ತಿದ ಬೀಜದಂತಾಯಿತಲ್ಲ.


7226

ರಾಗ—ದೇಸಿತೋಡಿ—ರೂಪಕತಾಳ.

[ಬಿಡಬೇಡಡಯಂನಜಾಣ ತಡವೇತಕೆಪ್ರವೀಣ] ಯೆಂಬಂತೆ.

ಸುಕುಮಾರಯೇತಕಿಂತು । ವಿಕಳತ್ವವಾಂತೆಕಂತು ॥ ಪ ॥ ಅಕಳಂಕನಲ್ಲಿಭಯವೇ । ಭಕುತಿಯಲಿಜೈಸುಮಗುವೇ । ೧ ॥ ಗಿರಿಜಾತೆಗೂಡಿನಿನ್ನ । ಪೊರೆಯುಪನುಮೇಶಮುನ್ನ । ಧರೆಯೊಳಗೆಕೀರ್ತಿದೊರೆದು । ಮೆರೆಯುತ್ತಲಿರ್ಪನಲಿದೂ । ೨ । ಸುರರಿಂಗೆತೋಷಮಹುದು। ಸ್ಮರನಿಂನಸ್ಮರಿಪರೊಲಿದು । ನೆರೆಲೋಕದವರುನಿರತ । ಮೆರೆಯೈಯ್ಯಬಳಿಕಜಾತ ॥ ೩ ॥

ಕಂದ । ಯಿಾಸರಕಾರ್ಯಕೆಬೇಸರ । ಪೂಸರನಿನಗೇಕೆಮಾಣುಕೊಲ್ಲುವನೇ
ನೈ । ಯಿಾಸರಬಲ್ಲಹನಲ್ಲವೆ।ಸಾಸಿಯೆನೀಂವಾಸಿಯಿಂದಲೀಶನಜೈಸೈ ।

(ಮನ್ಮಥ) ಎಲೈ ಜನಕನೆ ನೀವು ಯಷ್ಟು ಹೇಳಿದರು ಆ ಪರಬ್ರಹ್ಮನಲ್ಲಿ ನನ್ನ ಮನವು ಜಯವನ್ನು ಕೋರುವದಿಲ್ಲ ಆದ್ದರಿಂದ ಈಗ ನಿಮಗೆ ಬಾಧೆಯಂನುಂಟುಮಾಡುತ್ತಲಿರುವ ದನುಜರನ್ನು ನನ್ನ ಶರಪಂಜರದಿಂದ ಬಂಧಿಸಿ ಸರ್ವದಾ ಅವರವರ ಪತ್ನಿಯರ ಚರಣ ಸೇವೆಯಲ್ಲಿ ನಿರತರಾಗಿರುವಂತೆ ಮಾಡುವೆನು ಈಗಲಾದರೂ ಸಂಮತಿಸುವಿರೊ?

(ಬ್ರಹ್ಮ) ಎಲೈ ಕಟುಕಭಾಷಿಯಾದ ಸ್ಮರನೆ ಯಿದು ನಮಗೆ ಸಮ್ಮತವಿಲ್ಲ ಕೇಳು,

ಕಂದ । ಖ್ಯಾತನುಶಿಭಿನೃಪತನ್ನಯ । ಪೂತಾಂಗವನಿತ್ತಪಾರಿವಾಳದಖಗ
ಕಂ । ನೀತಂದಧೀಚಿಮುನಿಪುರು । ಹೂತಂಗೆಲುವಿತ್ತಕೊರೆದುಪರ
ರುಪಕೃತಿಗಂ ॥

ಹೀಗಿರುವಲ್ಲಿ ಅನ್ಯೋಪ ಕಾರ್ಯಾರ್ಥವಾಗಿ ನಿನಗೆ ಯಷ್ಟು ವಿಧದಿಂದ ಹೇಳಿದರು ಪ್ರತಿ ವಚನವನ್ನೀಯುವೆ ಆದರೆ ಹಿಂದೆ ಮುಂದೆಯಾದರು ನಿಂನಂತ ಕೃಪಣಾಗ್ರಗಣ್ಯನನ್ನು ಕೇಳಿಯು ನೋಡಿಯು ನಾನರಿಯೆನು ಛೀ ನಿಂನ ವಿನಯಾಲಾಪವನ್ನು ಬಿಡು.

(ಯಿಂದ್ರ) ಯಲೈ ಮನಸಿಜ ಮಹಾರಾಜನೆ ನಿನ್ನ ಬೇಡಿಕೊಳ್ಳುವ ನಮ್ಮ ಐಶ್ವರ್ಯವೆಂಬ ಲಕ್ಷ್ಮಿಯಳ ಮಾಂಗಲ್ಯವನ್ನು ಸೀಘ್ರವಾಗಿ ಕಟ್ಟಿ ಕೀರ್ತಿಯನ್ನು ಹೊಂದು.

(ಮನ್ಮಥ) ಎಲೈ ಮಹೇಂದ್ರನೆ ನನಗೆ ಯಿಷ್ಟು ಪ್ರಮಾದವಂನು ಉಂಟುಮಾಡಿರುವ ನಿಂನ ಕಷ್ಟವು ನಂನದಾಗೆ ಯಿರುವದಲ್ಲ ಆದರೆ ಯಿಂಥಾ ಪ್ರತಿಬಂಧಕದಲ್ಲಿ ಸಿಕ್ಕಿ ಕೊರಗುವಂತೆ ಮಾಡಿದ ನನ್ನ ವಿಧಿಯನ್ನು

Digitized by ROJA MUTHIAH RESEARCH LIBRARY

ಯಷ್ಟೆಂದು ನಿಂದಿಸಿದರೂ ಸಾಲದಿರುವದು.

( ಬ್ರಹ್ಮ ) ಎಲೈ ಕುಸುಮಶರನೆ ಈಗ ನಿಂನ ಆಲೋಚನೆಯೇನು ?

( ಮನ್ಮಥ ) ಕೃಪಾಳುವಾದ ಕಮಲಜನೆ ನನಗೆ ಯಂದಿಗೂ ಸಮ್ಮತವಿಲ್ಲ ಕ್ಷಮಿಸು.

( ಬ್ರಹ್ಮ ) ಶ್ರೀರಾಗ—ಅಟ್ಟತಾಳ.

( ಯೇನನಾಡಿದೆನೀನದೇನನಾಡಿದೆ ) ಯೆಂಬಂತೆ.

ಯೇನನೆಂದೆಯೋ । ಛೀಛೀಯೇನನೆಂದೆಯೊ ॥ ಪ । ಮಾನಹೀನ ಸೂನವಿಶಿಖ ॥ ಅ । ಪರಮನೀತಿಯೊರೆಯೆಪ್ರೀತಿ ।ಕರವೆಕೋತಿಗರರೆಭೀತಿ ॥ ಪೆರದುಮಾತಿಗೆರಡಕುಮತಿ । ಸ್ಮರಿಪರಾತಿಘುರದಷಂಡ । ೧ ॥ ಅಳಲಿಬಳಲಿತೊಳಲುತಿರುವ । ಪಲವಿರೋಧಿಮುಖ್ಯರನ್ನು॥ ಸಲೆನಿರೀಕ್ಷಿಸುತ್ತಹೃದಯದೊಳಗೆದಯವತೊರೆದುನಲಿಯು ॥ ತೇನನೆಂ । ೨ । ಕೃಪಣನಿಂನವಿಪುಲಗರ್ವ । ವಪಹರಿಸುವೆಕಪಿಕುತೀಗ । ಕೃಪೆಯುನಳಿದೆನಲ್ತೆನಾನು । ಲಪನವೆತ್ತಿನೋಡುನೀನ । ದೇನನೆಂಪೆಯೊ ।೩।

ಕಂದ ॥ ಕೊಡುಕೊಡುನೀನಾಜ್ಞೆಯನೆಲೆ।ಜಡಜಾಂಬಕಬಿಡದೆಕಪಿಸಿಸುಡುತಿರ್ಪೆನುನಾಂ । ಕೆಡುಗನಕುಡಿವಿಲ್ವಿಡಿದನ । ಫಡಫಡಕಡುಧೂರ್ತನಾಗಿನುಡಿಗೊಡುತಿಹನಂ ।

( ವಿಷ್ಣು ) ಎಲೈ ಪದ್ಮಾಸನನೆ ಸೈರಿಸು ಸೈರಿಸು ದುಡುಕಬೇಡ.

( ಬ್ರಹ್ಮ ) ಯಲವೆಲವೊ ಕ್ರೂರಾತ್ಮನಾದ ದಯಾರಸ ವಿಹೀನ ಮನ್ಮಥನೆ ನೀನು ನಮ್ಮ ಆಜ್ಞೆಯನ್ನು ಅನುಸರಿಸಿ ಈಗಲಾದರು ನಡೆಯುವೆಯೊ ಯಿಲ್ಲವೊ ಬೇಗನೆ ಹೇಳು ನಿಂನ ವಿಶೇಷ ಬ್ರಹ್ಮ ಬೋಧೆಯೀಗ ನಮಗೆ ಪ್ರಯೋಜನವಿಲ್ಲ.

( ಮನ್ಮಥ ) ಲೋಕೇಶನೆ ನಿನಗೆ ವಿಜ್ಞಾಪಿಸುವದೇನಿರುವದು ಆದರೆ ನಿಮ್ಮ ಕೋರಿಕೆಯಂತೆ ನನಗೆ ಅಪ್ಪಣೆ ಕೊಡಿಸುವದೆಂದು ಬೇಡುವೆನು.

( ಬ್ರಹ್ಮ ) ನಮ್ಮ ಕೋರಿಕೆಯನ್ನು ಕೇಳು ನಿನಗೆನೇಮಿಸಿದಂತೆ ಮಹೇಶನಲ್ಲಿ ಜಯಪ್ರದವನ್ನು ಮಾಡಿ ಬರುವದಕ್ಕೆ ಹೋಗಬೇಕು ಇಲ್ಲವಾದರೆ ಈಕ್ಷಣದಲ್ಲೀ ನಿನಗೆ ಶಾಪವನ್ನೀಯುವೆ ಅನುಭವಿಸು.

( ಮನ್ಮಥ ) ( ಆತ್ಮಗತ ) ಮುಂಬೆಯೇನು ಮಾಡುವದು ಈತನ ಶಾಪದಿಂದ ಹತನಾಪರೆ ಪರೋಪಕಾರವಂ ಮಾಡಲಾರದೆ ಮನ್ಮಥನು ನಾಶವಾದನೆಂನುವರು ಮಹೇಶನಲ್ಲಿವೈರವಂ ಮಾಡಿದರೆ ಶಿವದ್ರೋಹಬರುವದಲ್ಲ.



ರಾಗ—ನಾದನಾಮಕ್ರಿಯ—ರೂಪಕತಾಳ.

( ಹಾರಮಣೀ ಸೈರಿಸುವೆನೆಂತಿದನು ) ಯೆಂಬಂತೆ.

ವಿಧಿಯೇಈವಿಧಸ್ಯೆದೆಯುಹಾಹಾ ॥ ಪ । ಹಿಂದುಮುಂದೇನೇನು । ಪಂದನುತೋರದ। ತೆರದೀ ಭರದಿ । ಕರದೀ ಯುಳಲಿತ್ತ ।೧ ॥ ಶಾಪಕ್ಕೆಬೆದರುತಾ । ಲಾಪರಮೇಶಗೆ । ಶರವಾ ನೆಸೆವಾ। ತೆರವಾ ದುದೆಭಾಪು॥ ೨ ॥ ಆರಿಗಿನ್ನಿದನಾನು।ದೂರಲುಫಲವಿಲ್ಲ।ದಿಹುದುಬಹುದು।ಶಿವದ್ರೋಹವ್ರುವಿಂದು॥

ಆದರೆ ಈ ಶಾಪದಿಂದ ಬಳಲುವದಕ್ಕಿಂತಲು ಪರೋಪಕಾರಾರ್ಥವಾಗಿ ಮಹೇಶನಲ್ಲಿ ನನ್ನ ತನುವಂನು ನೀಡಾಡುವೆನು ನಂನಿಂದ ಬೇರೆ ಇವರಿಗೆ ವುಪಕಾರ ತಕ್ಷಣದಲ್ಲಿ ಕೈಗೂಡುವಂತೆ ಕಾಣುವದಿಲ್ಲ ಒಳ್ಳೇದು ( ಬ್ರಹ್ಮನ ಕಡೆಗೆ ತಿರುಗಿ ) ಎಲೈ ವಾಣೀಶನೆ ಅನಾಥ ಬಾಂಧವನಾದ ಜನಕನೆ ನಿಮ್ಮ ಆಜ್ಞಾನುಸಾರವಾಗಿ ನಾನು ಮಹೇಶನಲ್ಲಿಗೆ ಹೋಗುವೆನು ಅಪ್ಪಣೆಯಂ ಕೊಡಿರಿ.

( ವಿಷ್ಣು ) ಬಾಲಕನೆ ನಿನಗೆ ಜಯವಾಗಲಿ ಹೋಗಿಬಾ

( ಬ್ರಹ್ಮ ) ಎಲೈ ಮಕರಾಂಕನೆ ಈಗ ನಾನು ಸಂತೋಷಗೊಂಡೆನು ನೆಂನ ಕೊರಳಿನಲ್ಲಿರುವ ಮಾಲಿಕೆಯನ್ನು ನಿನಗೆ ಕೊಟ್ಟಿರುವೆನು ಸೀಘ್ರದಿಂದ ಹೋಗಿ ಜಯಪ್ರದವನ್ನು ಹೊಂದಿಬಾ.

[ ಇಂದ್ರ ] ಎಲೈ ಪಂಚಬಾಣನೆ ನಮ್ಮ ಪುಣ್ಯತರು ಫಲಿಸಿದಂತಾಯಿತು ನಿನಗೆ ಜಯವಾಗಲಿ ಬಿಜಯಂಗೈ.

[ ಯಂದು ಹರಸಿ ಯಲ್ಲರು ಮರೆಯಾಗುವರು ]

[ ಮನ್ಮಥ ] [ ಆತ್ಮಗತ ] ನಂನ ಪ್ರಾಣಪ್ರಿಯಳಾದ ರತಿಯೊಡನೆ ಈ ವೃತ್ತಾಂತವಂ ತಿಳಿಸಿ ಆಕೆಯನ್ನು ಪಡಗೊಂಡು ಪ್ರಯಾಣವಂ ಮಾಡುವೆನು. [ ಯಂದು ರತಿ ಬಳಿಗೆ ಬರುವನು ]

[ ರತಿ ) ಎಲೈ ಮಂಜುವಾಣಿಯೆ ನನ್ನ ಪ್ರಾಣಪ್ರಿಯನನ್ನು ಪರಮಾತ್ಮನು ನೆನಸಿದನಂತ ಅಲ್ಲಿಗೆ ಹೋಗಿ ಬಹಳ ಹೊತ್ತಾದರು ಯಾಕೆ ಬರಲಿಲ್ಲ.

ಸಖಿ ಕಮಲಾಕ್ಷಿಯೆ ಈ ವಿಷಯದಲ್ಲಿ ನನಗೂ ನಿನ್ನಂತೆಯೇ ಆಶ್ಚರ್ಯವಾಗಿ ತೋರುವದೆಂದು ತಿಳಿ.

[ ರತಿ ] ರಾಗ_ಮುಖಾರಿ—ಚಾಪು[ ಮಗುವೇ ನೀನೆಲ್ಲಿಗೆ ] ಯೆಂಬಂತೆ

ರಾಕೆಂದುಮುಖಿಪ್ರಿಯನೇಕೆಬಾರದೆಯಿಂತು । ಶೋಕವಗೊಳಿಸು

Digitized by ROJA MUTHIAH RESEARCH LIBRARY

ವನೆ । ಕಲಹಂಸಯಾನೆ ॥ ಪ ॥ ಲೋಕದೊಳಗಲಾತ । ಲೀಕಷ್ಟಪಡುವ
ದು । ಸಾಕಮ್ಮಶೇಷವೇಣೀ । ಕಲಕೀರವಾಣೀ ॥ ೧ ॥ ಕಳವಳಿಪುದುಕಾ
ಯ । ನೆಲೆಯನುತಿಳಿಯದೆ । ನಳಿನಬಾಣನನೀಗಲೂ ॥ ನಿಲದೆಪೊರುವದೆನ್ನ
ಬಲದನೇತ್ರವುಮುನ್ನ । ತಳುವಿದನೇಕವೀರ । ಗುಣಗಣಸುಹಾರ ॥ ೨ ॥
ಯತ್ತನೋಡಿದಡತ್ತ । ಕತ್ತಲೆಕಂಣಿಗೆ । ಮುತ್ತಿಕೊಂಡಿರುತಿಹುದೂ ॥
ಮತ್ತೇಭಗಾಮಿನಿಮುಂದೇನಮಾಡಲಿ । ಚಿತ್ತದೊಲ್ಲಭನಿಲ್ಲದೇ । ಬಳಲುವೆ
ನುಮುಗುದೇ ॥ ೩ ॥

[ಸಖಿ] ರಾಗ—ಕಮಾಚು—ಆದಿತಾಳ.

(ಪೋಪೋಮನೇಪೋಮನೆ) ಯೆಂಬಂತೆ.

ಯಾಕಿಂತುಚಿಂತಿಸುವೆ । ಕೋಕಿಲಾರವೆ ॥ ಪ ॥ ಮಾಕಾಂತನಲ್ಲಿಗೆ
ಜೋಕೆಯಿಂಪೋಗುತ । ನೇಕಾಶೀರ್ವಾದವ । ತಾಕೂಡಿಬರುವನು ॥ ೧ ॥
ಅನುಮಾನವೇಕಿದ । ಕನುಪಮರೂಪಿಣಿ ॥ ಯಿನಯನಗಲಿಕೆಗೆ । ಮನದೊ
ಳು ಯೋಚಿಸಿ ॥ ೨ ॥ ಯಂದಿಗುಯಗಲದ । ಸುಂದರಿಯಲ್ಲದ ॥ ರಿಂದಿಂತ
ದಂದುಗ । ಮುಂದುಗೆಡಿಸುವದ ॥ ಕೇಕಿಂತು ॥ ೩ ॥

ಸಕಲಕಲಾ ಪ್ರವೀಣೆಯಾದ ನಿನಗೆ ವಿಶೇಷ ವಿಜ್ಞಾಪಿಸುವದೇನಿಧೆ ಸಮಾಧಾನವನ್ನು ಹೊಂದು ನಿನ್ನ ಪ್ರಾಣಪ್ರಿಯಯಿಲ್ಲೇ ಬರುವನು.

[ರತಿ] [ಮನ್ಮಥ ಬರುವದನ್ನು ಕಂಡು]

ಪ್ರಾಣಪ್ರಿಯನೆ ನಿನಗೆ ವಂದಿಸುವೆನು.

(ಮನ್ಮಥ) ಶುಕವಾಣಿ ನಿನಗೆ ಜಯವಾಗಲಿ.

[ರತಿ] ಪ್ರಿಯನೆ ನೀನು ಬರುವದಕ್ಕೆ ಯಿಷ್ಟುತಾಮಸವೇಕಾಯಿತು

[ಮನ್ಮಥ] ರಾಗ—ಸಾವೇರಿ—ರೂಪಕತಾಳ.

ಪ್ರಾಣನಾಯಕಿಸುಮು । ಬಾಣನಾದುದಕಿಂದು । ಕಾಣಿಸಿತ್ತೈಯ್ಯೋ
ಫಲ ॥ ಪಲ್ಲ ॥ ಮಾನಾಯಕಕಂಜಸೂನುಸುರಾಧ್ಯರು । ಮಾನಿಸದೆನ್ನಮಾ
ತ । ನೇಮಿಸುತ ॥ ೧ ॥ ಕಳುಹಿರ್ದರುಹಾಹಾ । ವಿಲಯಭೈರವನನ್ನು । ಗೆ
ಲುವುದಿಂನೆಂತೆಕಾಂತೆ ॥ ಕಳವಳಿಸುತಕಂ । ಗಳನೀರಸುರಿಸುತ । ನಿಲದೆ
ನಾನೈದಿಹೆನು । ಯೋಗ್ಯವೆನು ॥ ೨ ॥ ಪರಮಯೋಗದೊಳಿಹ । ಹರನೊ
ಳುಜಯವುತಾ । ದೊರೆವುದಿಂನೆಂತೆಕಾಂತೆ ॥ ಹರಿಯಜಸುರರಿದ । ನರಿಯದೆ
ಪೋಗೆಂದು । ಜರಿದಟ್ಟಲ್ಲಿರದೆಬಂದೆ । ಗತಿಯೇಂಮುಂದೆ ॥ ೩ ॥
ಕಂದ ॥ ಮದಿರಾಕ್ಷಿಪೇಳಲೇನಂ । ನುದರದಸಂಕಟವನಭವಗೆಸೆಯುತ್ತಶರವ।



ಮುಚವಂನಾನುವಹದನವ । ಚದುರೆಯೆ ತಿಳಿಯದಲ
ದೆನ್ನಯಭಾವ ॥

(ರತಿ) ಎಲೈ ಪ್ರಾಣೇಶನೆ ಯಿದೇನು ನಿನ್ನ ಅದ್ಭುತವಾದ ಆಲೋಚನೆಯನ್ನು ಕೇಳಿದರೆ ದಿಗ್ಭ್ರಾಂತಿಯಾಗುವದಲ್ಲ ಪರಮೇಶನಿಗೆ ನೀನು ಬಾಣಪ್ರಯೋಗವಂ ಮಾಡುವಂತೆ ಯಾರು ನೇಮಿಸಿರುವರು ಅಲ್ಲದೆ ಯಿದರಿಂದ ಯಾರಿಗೆ ಫಲಪ್ರದವು ಹೇಳು ಹೇಳು.

(ಮನ್ಮಥ) ಕೋಮಲಾಂಗಿಯೆ ತಾರಕಾದಿ ದೈತ್ಯರು ದೇವೇಂದ್ರನಂ ಗೋಳುಗುಟ್ಟಿಸಿದ ಸಂಗತಿಯನ್ನು ಮತ್ತು ಅವರ ಸರ್ವಸ್ವವನ್ನು ಸೂರೆತೆಗದುಕೊಂಡರೆಂದು ಮೊರೆಯಿಡುವದನ್ನು ನಮ್ಮ ಜನಕನು ಕಮಲಾಸನನು ದೇವೇಂದ್ರಾದಿಗಳು ಪರಮೇಶನಿಗೆ ದೂರಿದಕ್ಕಾಗಿ ಗಿರಿಜಾತೆಯಂ ಕೂಡಿ ಕುಮಾರನಿಂದ ದೈತ್ಯರನ್ನು ಸಂಹರಿಸಿ ನಿಮಗೆ ಕ್ಷೇಮವಂನುಂಟುಮಾಡುತ್ತೇನೆಂದು ಹೇಳಿ

ಕಂದ ॥ ಯೋಗಾನಂದದಿಮಂಡಿಸಿ । ಯೋಗೀಜನಪೂಗಕಿರದೆಬೋಧೆಯ
ಗೈಯ್ಯು । ತ್ಯಾಗಮನುತನಿರುವದಱಂ । ರಾಗವುಗಿರಿಜೆಯೊಳಗೊ
ಗೆವುಚೆಂದಿಗೆನುತ್ತಂ ॥

ಯೋಚಿಸಿದ ಜನಕನು ವಿಧಿಯು ನಂನನ್ನು ಕರದು ಮಹೇಶನಿಗೆ ಶರವಂನೆಸೆದು ಗಿರಿಜಾತೆಯಲ್ಲಿ ಅನುರಾಗವು ಪುಟ್ಟುವಂತೆ ಮಾಡುವದೆಂದು ನೇಮಿಸಿರುವರು.

[ರತಿ] ಚನ್ನಾಯಿತು ಚನ್ನಾಯಿತು ಆಮೇಲೆ

[ಮನ್ಮಥ] ನಾನು ಬಹುವಿಧವಾಗಿ ಬೇಡಿಕೊಂಡಾಗ್ಯೂ ಅನುಮತಿಸಲಿಲ್ಲ ಯೇನುತಾನೆ ಮಾಡುವದು.

[ರತಿ] ಪ್ರಿಯನೆ ಬಡನರಿಯು ಗುಹೆಯೊಳಡಗಿರ್ದ ಮೃಗರಾಜನಕೆಣಕಿದಂತೆ ದೇವಾದಿದೇವನಾಗಿಪರಬ್ರಹ್ಮಧರಾಮೂಲಸ್ತಂಭನಾದಪರಮೇಶನಲ್ಲಿ ಜಯವನ್ನು ಕೋರುವದುಂಟೆ ಈ ಮಾತನ್ನು ಯಿಲ್ಲಿಯೆ ಮರೆತುಬಿಡು

[ಮನ್ಮಥ] ರಾಗ—ತೋಡಿ—ರೂಪಕತಾಳ.

[ಮುನಿವರ್ಯನೋಡೆಲೊಮನಸಿಂದಕೂಡೆಲೋ] ಯೆಂಬಂತೆ.

ಕಲವಾಣಿಶಪಿಪನು । ಮುಳಿದೆನ್ನಬ್ರಹ್ಮನು ॥ ನಿಲದದಕೆಪೋಪೆನು।
ಕಳವಳವನುಳಿದೆನು ॥ ೧ ॥ ಸ್ಥಿರವಿಲ್ಲದೇಹಕೆ ।ಸರಸೀರುಹಾಂಬಕೆ॥ ವರಕೀ
ರ್ತಿಘಳಿಸುತ । ಮೆರೆಯುವೆನುಸಂತತ ॥ ೨ ॥ ಹರಿಯಜಸುರೇಂದ್ರರು । ಪ

Digitized by ROJA MUTHIAH RESEARCH LIBRARY

...ಳೊರೆದರು ॥ ನೆರೆಕೇಳದಿರ್ದಾರೆ । ಅರಿದವರುನಗುವರೆ ॥ ೩ ॥

[ ರತಿ ] ಚೆನ್ನಾಯಿತಲ್ಲ ಯಿದೇನು ವಿಧಿಹೀಗಾಯಿತು

ರಾಗ—ದೇಶಿಕಾಪಿ—ಚಾಪುತಾಳ.

ಪ್ರಾಣೇಶಬೇಡಯಿನಾಯೋಚನೆಹಾಹಾ । ಸ್ಥಾಣುಸೋಲುವನೆಂಬು ದುಬರಿಮೋಹಾ ॥ ಪ ॥ ಭಾವಿಸದೀಗ । ಭಾವದಿಬೇಗ ॥ ಕಾವನೆನುಡಿಯ ಲಿಂ । ನೇವೆನಾನಾಹಾ ॥ ೧ ॥ ತಲೆಯುರೆಬಲಿದು । ಸಿಲೆಯಹಾಯುವರೆ॥ ಯಿಳೆಯೊಳಕೀರ್ತಿಯ । ಘಳಿಸುವೆಪ್ರಿಯಾ ॥ ೨ ॥ ಬೇಡುವೆಬೇಡ । ನೋಡೇನುಕೇಡ ॥ ಕಾಡುಪಾಲಾಗೆನ್ನ ।ಮಾಡುವೆಚೆನ್ನ ॥ ೩ ॥

ಕಂದ॥ ಕಾವನೆಸುರನರಭುಜಗರ । ಕಾವನೆಕೋಪಿಸಲುನಿನ್ನಗತಿಯದ

ಕೊನೆಗಂ । ಭಾವಿಸುಮದ್ವಚನವಸಂ । ಭಾವಿಸುಭಾವದೊಳು ಭಾ

ವಿಕಾರ್ಯವಿದಲ್ಲಂ ॥

[ ಮನ್ಮಥ ] ರಾಣಿಯೆ ನಿಂನಂತೆಯೆ ಅವರಿಗೆ ಬಹಳವಾಗಿಬೇಡಿಕೊಂಡೆನು ಅವರು ಸಮ್ಮತಿಸಲಿಲ್ಲ ಆದರೆ ಯಿದು ಪರೋಪಕಾರದ ನೀತಿಯು ಯಿನ್ನು ನಾವು ಚಿಂತಿಸಿದಲ್ಲಿ ಫಲವಿಲ್ಲ ಮತ್ತು ಲೋಕನಾಥರಾದ ಯಿವರುಗಳ ಆಜ್ಞೆಯನ್ನು ಮೀರಿ ಬಾಳಲಾರೆನು.

[ ರತಿ ] ಪ್ರಿಯನೆ ಅನ್ಯೋಪಕಾರಕ್ಕಾಗಿ ಯೇನು ಕೊಟ್ಟರು ಕೊಡಬಹುದು ಆದರೆ ಪ್ರಾಣವನ್ನೇ ಕೊಡುವವರುಂಟೆ,

[ ಮನ್ಮಥ ] ರಾಣಿಯೆ ದುರ್ವ್ಯಶದಲ್ಲಿ ಬಾಳುವದೆ ಮರಣವಲ್ಲದೆ ಬೇರಿಲ್ಲವೆಂದು ಚೆನ್ನಾಗಿ ಭಾವಿಸು.

[ ರತಿ ] ಹಾಗಾದರೆ ಮಹೇಶನು ನಿನಗೆ ಸೋಲುವನೆ ನಿಂನಿಂದ ಈ ದೇವತೆಗಳ ಕಷ್ಟವೆಲ್ಲ ನಾಶವಾಗುವದೆ ಹೇಳು

[ ಮನ್ಮಥ ] ಚೆನ್ನಾಗಿ ಹೇಳುವೆಯಲ್ಲ ಮುಂದೆ ಬರುವ ಸುಕೃತ ದುಷ್ಕೃತ ಫಲಾಫಲವು ಈಗಲೆ ತಿಳಿಯುವದಾದರೆ ಯಿದಕ್ಕಿಂತ ಯಿನ್ನು ಯಾವ ವಿಶೇಷವಿರುವದು

[ ರತಿ ] ಕಂದ ॥ ಕಂತುವೆಪಂಥವೆಯಂತಕ । ಗಂತಕನಾದವನ

ದಂತಚರ್ಮಾಂಬರನಂ । ಸ್ವಾಂತದಿತಿಚಿಂತಿಸದುರೆಗೆ । ಲ್ವಂತೀಗಾಂತಿರುವ

ಮಂತುನಿನಗೆಸಮಂತು ॥

[ ಮನ್ಮಥ ) ( ಆತ್ಮಗತ ) ಆಹಾ ಅವರಲ್ಲಿ ಹೋದ್ದದಕ್ಕೆ ಯಿಷ್ಟುಬೋಧಿಸಿದರೂ ಯಿಲ್ಲಿ ಹೋಗುವೆನೆಂದರೆ ಅದಕ್ಕೆಸರಿಯಾಗಿ ನನ್ನ



ಪ್ರಾಣಪ್ರಿಯಳು ಅಡ್ಡಿಮಾಡುವಳಲ್ಲ ಒಳ್ಳೇದು

ಕಂದ ॥ ಸುಂದರಿರೂಪವಿಜಿತಸುರ । ಸುಂದರಿಕುಂದಾಭರದನೆ ಸದ್ಗುಣಸದ

ದನೆ॥ ನೊಂದತಿಕುಂದುತಬೇರೊಂ।ದಂದಪನೇಕಿಂದುನೆನೆಸಿಬಳಲುವೆಯರಸಿ॥

( ರತಿ ) ವಲ್ಲಭನೇ ನಂನ ಹೃದಯವು ಯಂದಿಗೂ ಒಡಂಬಡುವದಿಲ್ಲ. ಯೇನೋ ಅಸಂಗತವು ಕೈಗೂಡುವಂತೆ ಕಾಣುವದು ಹೆಚ್ಚಾಗಿ ಬಳಲಿಸುವಳೆಂದು ಕೋಪಿಸಬೇಡ ಶರಗೊಡ್ಡಿ ಬೇಡುವೆನು.

( ಮನ್ಮಥ ) ಶ್ರೀರಾಗ—ಆದಿತಾಳ.

ಸೈರಿಸುಕಾಮಿನಿಮಾರಿಚಿಂತಿಪುದ।ನೀ ॥ ಪ ॥ ನೀರೆಮಹೇಶನ ।ಸಾರಿಗೆಲ್ಲುವೆನಾ ॥ ೧ ॥ ಲೋಕೋಪಕಾರಕೆ । ಭೀಕರವೇಕೆ ॥ ಕಾಕುಬಾಳಿಕೆಕೇಳು । ನಾಕೇಳದಿರಲು ॥ ೨ ॥ ಮಾಡುವದೇಂವಿಧಿ।ಮಾಡಿದಕೃತ್ಯಕೆ ಗಾಡಿಕಾತಿಯೆತಡ । ಮಾಡಲಿಂನೇಕೆ । ೩ ।

ಮೊದಲೆ ಈ ವಿಷಯದಲ್ಲಿ ಬಹಳವಾಗಿ ಬೇಡಿಕೊಂಡೆನೆಂದುತಿಳಿಸಿರುವೆನಲ್ಲದೆ ಅವರು ಒಪ್ಪಲಿಲ್ಲವೆಂದು ಹೇಳಿರುವೆನು ಆದ್ದರಿಂದ ಅವರಲ್ಲಿ

ಕಂದ । ಒಪ್ಪುತಲುಚಿತವಕೊಳ್ಳುತ ।ಸರ್ಪಾಭಸುವೇಣಿಬೇಗಬಂದಿರುತಿಹೆ

ನಾಂ।ತಪ್ಪಲ್ನುಡಿದುದದುರ್ಜನ । ನಪ್ಪೇಂಯದರಿಂದಮನದಿಯೋ

ಚಿಸದಿರುನೀಂ॥

[ ರತಿ ] ರಾಗ—ತೋಡಿ—ರೂಪಕತಾಳ.

( ಮೋಹಮುನೇತಾಳಲೇರ ] ಯೆಂಬಂತೆ.

ಪ್ರಾಣಪ್ರಿಯಮುಂಚಿಸಿದೆಯ । ಕಾಣೆನಿನ್ನುದಾರಿಯಾ ॥ ಪ ॥ಅಪರಾತ್ಯನಹರನ । ತಾಪಸಾರ್ಚಿತಾಂಘ್ರಿಯುಗನ ॥ ಕೋಪನೀನುಗೆಲ್ವುದೆಂತು । ಭಾವುವಿಧಿಯವಿಚಾರ್ವರೆ ॥ ೧ ॥ಮೋಹನಾಂಗಪರರಿಗಾಗಿ । ದೇಹವಳಿವರೇನಹಾ । ದ್ರೋಹಿಸಿಂದುಧರೆಯನಿಂದೆ । ಗೋಹೊನಿಂದೆನೀನಿಂದೆ ॥ ೨॥ ನಿಂನಜೀವವೆಂನಜೀವ । ವೆನ್ನುತಿರುವದೆನ್ನಭಾವ ॥ ಯಿಂನದಾರು ನಿಂನಕಾವ । ಕನ್ನುತೋರುಕಾವದೇವ ॥ ೩ ॥

ದೈವಾಜ್ಞೆಯಿದ್ದಂತಾಗಲಿ ನಂನಬಿಟ್ಟುಬಿಜಯಂಗೈಯಬೇಡ

[ ಮನ್ಮಥ ] ಮೋಹನಾಂಗಿಯೆ ಯಾಕೆಹೀಗೆಣಿಸುವೆ ಒಂದು ಕ್ಷಣವಾದರು ನಿಂನ ಬಿಟ್ಟು ಸೈರಿಸದ ನಾನು ಈಗ ಒಬ್ಬನೆ ಹೋಗುವೆನೆ

[ ರತಿ ) ಪ್ರಿಯನೆ ಭೋಜನ ತಾಂಬೂಲವಂ ಕೈಗೊಂಡು ಬರುವನಡೆ

( ಮನ್ಮಥ ) ನಿಂನ ಕೋರಿಕೆಯಂತಾಗಲಿ [ಯಂದುಹೋಗುವರು.)

Digitized by ROJA MUTHIAH RESEARCH LIBRARY

( ಚತುರ್ಥಾಂಕ ಪ್ರಾರಂಭಃ )

(ಮನ್ಮಥ) ವಸಂತಕನೆ ರಥವನ್ನು ಸಿದ್ಧಗೊಳಿಸು.

(ವಸಂತಕ) ಮಹಾರಾಜನೆ ಸಿದ್ಧಗೊಳಿಸಿರುವೆನು.

(ಮನ್ಮಥ) (ಒಳ್ಳೇದು ಯೆಂದು ರತಿ ಕಡೆಗೆ ತಿರುಗಿ) ಕೋಮಲಾಂಗಿಯೆ ನನ್ನ ಜಯಕ್ಕೆ ಕುಂದಕವಿಲ್ಲದಂತೆ ಜಗಜ್ಜನನಿಯಾದ ಅಂಬಿಕೆಯನ್ನು ನುತಿಸುವೆನು

(ರತಿ) ಪ್ರಿಯನೆ ಯಿದು ಪರಮೋತ್ಕೃಷ್ಟವಾಗಿ ತೋರುವದು.

(ಮನ್ಮಥ) ರಾಗ—ಹಿಂದುಸ್ತಾನಿಕಾಪಿ—ಆದಿತಾಳ.

( ಸೊಗಸಿಗೆನಾಂ ) ಯೆಂಬಂತೆ.

ಶೈಲಸುತೇ । ಶೂಲಿಹಿತೇ । ಪಾಲಿತಾನತೇ ॥ ಪಲ್ಲ ॥ ಕಾಮಿತದಾಯಿನಿ । ಕಾಮಸಂಜೀವಿನಿ ॥ ಶ್ಯಾಮಲೇ। ಕೋಮಲೇ।ಪಾಲಿಸೆಂನನೀ॥೧॥ ಹರನೊಳುಜಯುವನು । ಭರದಿಕೋರಿರುವೆನು ॥ ಪುಳಿವೆನೋ । ಅಳಿವೆನೋ । ಸಲಹುಯೆಂನನೂ ॥ ೨ ॥ ಪರರುಪಕಾರಕೆ । ಹರನೊಳಗಂಬಿಕೆ ॥ ವೈರಮಿದು । ಸೇರಿಹುದು । ಸಾರಿಕಾಯ್ವುದೂ ॥೩॥

ಕಂದ ॥ ಜನನಿಯೆಂಬಿಸಮಂಮೆಲ್ಲಾತ। ಲಸಿಕಂಮೂಲೋಕವಂನುಪಾಲಿಪನ
ಲ್ತೆ । ಜನಕಂಶಂಕರನದುನಿಂ । ನನುಪಮಮಾಂಗಲ್ಯಭಾಗ್ಯಮುಹಿ
ಮೆಯದೆಂತೋ ॥

ನಿಂನ ಶರಣಾಗತನಾದ ನಂನ ನಂಬಿದ ಈ ರತಿಯಳ ಮಾಂಗಲ್ಯಕ್ಕೆ ಕೊರತೆ ಬಾರದಂತೆ ಕಾಪಾಡು

[ರಾಣಿಯೆ ಈ ರಥವನ್ನು ಹತ್ತು (ಯೆಂದು ತಾನು ಕುಳಿತುಕೊಳ್ಳುವನು)

[ ರಜತಾದ್ರಿ ಬಳಿಗೆ ಬರುವರು.]

(ಮನ್ಮಥ) ರಾಣಿಯೆ ಇಗೋ ರಜತಾದ್ರಿ ಕಾಣುವದು ನೋಡು ಶೈತ್ಯಸೌರಭ್ಯವಾದ ಮಂದಮಾರುತನಿಂದ ತಂನ ನಿರ್ಮಲತ್ವವನ್ನು ಸೂಚಿಸುವದು.

[ರತಿ) ಪ್ರಿಯನೆ ಶರಣಾಗತಪಾಲನಾದ ಮಹೇಶನಿಗೆ ವಾಸವಾದ ಈ ಪರ್ವತವು ಬೆಳದಿಂಗಳ ಹೊದಿಕೆಯನ್ನು ಹೊದಿಸಿದಂತಿರುವದು.

[ಮನ್ಮಥ) ಪ್ರಿಯೆ ಈ ಗಿರಿಯನ್ನು ಆರೋಹಣಮಾಡುವ,

(ಯೆಂದು ಪರ್ವತವನ್ನು ಹತ್ತುವರು.]



ರಾಗ—ಘಜ್ಝ—ಆದಿತಾಳ.

[ ಪರಕಿಸಿನೋಡ್ಯೆ ನಿಜಸಖಿಯ ]ಯೆಂಬಂತೆ

ರತಿಯೇ । ಪರಿಕಿಸುಶೈಲವಂ । ಗುಣವತಿಯೇ ॥ ಪ ॥ ಮತಿಗತಿಹರುಷೋ । ನ್ನತಿಯಾಗಿರ್ಪುದ ॥ ಅ ॥ ಚಾರುಮೃಗಂಗಳ । ಸಾರಸುಮಂಗಳ॥ ಪಾರನದೀನದ । ವಾರವನಲಿದು ॥ ರತಿಯೇ ॥ ೧ ॥ ತಾಪಸಜನಗಳು । ಶ್ರೀಪರಮೇಶನ । ರೂಪಿನೊಳಿರ್ಪುದ । ನೀಪರಿಕಿಪುದು ॥ ರತಿಯೇ ॥ಪರಿಕಿಸು ॥ ೨ ॥ ವೈರವತೊರೆಯುತ । ಸೇರಿಮೃಗಂಗಳು । ವಿಾರಿವಿಹಾರದಿ ತೋರುತಲಿಹುದ । ರತಿಯೇ ಪರಿಕಿಸುಶೈಲವಂ ॥ ೩ ॥

[ರತಿ] ವಲ್ಲಭನೆ ಯಿಲ್ಲಿನ ಮನೋಹರತೆಯನ್ನು ನೋಡಿ ನಾನು ಸಂತೋಷವಂನೈದಿರುವೆನು ಆದರೆ ಕ್ಷಣವಾದರು ಸುಮ್ಮನಿರದೆ ಧ್ವನಿಯಂ ಮಾಡುತ್ತ ಪಾರುತ್ತಲಿರುವ ಈ ಮೃಗ ಪಕ್ಷಿ ತರುಲತಾದಿಗಳು ನಿಶ್ಚಲವಾಗಿ ಯಿರುವದಕ್ಕೆ ಕಾರಣವೇನು ನನಗೆ ಪರಮಾಶ್ಚರ್ಯವಾಗಿ ತೋರುವದಲ್ಲ ಪೇಳು

(ಮನ್ಮಥ) ಪ್ರಿಯೆ ಸರ್ವಲೋಕಶರಣ್ಯನಾದ ಮಹೇಶನು ಯೋಗದಿಂದ ಹ್ಯಾಗೆ ನಿಶ್ಚಲನಾಗಿರುವನೊ ಅದರಂತೆ ಅವನ ಚೈತಂನ್ಯಾತ್ಮಕವಾದ ಜಗವೆಲ್ಲ ನಿಶ್ಚಲವಾಗಿಯೇ ಯಿರುವದು.

[ರತಿ] ಪ್ರಿಯನೆ ಯಿದು ಪರಮಾಶ್ಚರ್ಯವಲ್ಲವೆ?

(ಮನ್ಮಥ) ನಂನ ಪ್ರತಾಪಕ್ಕೆ ಯೆಂದಿಗೂ ಕೊರತೆ ಬರಲಾರದು ಆದರೆ ಈ ಪಕ್ಷಿಗಳನ್ನು ನೋಡಿ ನನಗುಆಶ್ಚರ್ಯವಾಗಿರುವದು ಈ ಸಂದೇಹವಂ ಕಳಿಯಲು ಯಿವುಗಳಿಗೆ ಪ್ರಥಮದಲ್ಲಿ ನನ್ನ ಸುಮಬಾಣವಂ ಬಿಟ್ಟು ಪರೀಕ್ಷಿಸುವೆನು.

[ ಯೆಂದು ಬಾಣವಂ ಬಿಟ್ಟು ]

(ಆಶ್ಚರ್ಯದಿಂದ ನೋಡಿ) ಯಿದೇನು,

ಕಂದ ॥ ವ್ರಣಯುತಾನಿಲ್ಲೀಸುಮ । ಬಾಣಕೆಧಾರುಣಿಯೊಳರಿದುನೋಡಿ
ದೊಡಿಂದೀ । ಕಾಣುವಖಗಕುಲವೆಸೆಯಲ್ । ತ್ರಾಣವುನಸುಕದ
ಲದಂತೆಮೆರೆವವುಮುಂತೇಂ ॥

ಈ ಅನಾಹತವು ಸಂಭವಿಸಿ ಸಂದೇಹವನುಂಟುಮಾಡುವದಕ್ಕೆ ಕಾರಣಭೂತನಾದ ನಂದೀಶನು ಕಾವಲಾಗಿರುವನು ಆತನಿಗೆ ವಂದಿಸಿ ಅನುಗ್ರಹವಂ ಪಡೆಯುವೆನು (ನಂದೀಶನ ಬಳಿಗೆ ಬಂದು)

Digitized by ROJA MUTHIAH RESEARCH LIBRARY

ಎಲೈ ಮಹಾನುಭಾವನಾದ ನಂದೀಶನೆ ನಿನಗೆ ವಂದಿಸುವೆನು.

(ನಂದೀಶ) ಎಲೈ ಪಂಚಬಾಣನೆ ನಿನಗೆ ಕಲ್ಯಾಣಮಸ್ತು ಯಿಲ್ಲಿಗೆ ಬಂದಕಾರಣವೇನು,

[ಮನ್ಮಥ] ರಾಗ__ಕವಾಚ್__ರೂಪಕತಾಳ.

[ರಾಮಾಭಿರಾಮನೇರಾಜೀವನೇತ್ರನೆ] ಯೆಂಬಂತೆ.

ನಂದೀಶಲಾಲಿಸು । ಯೆಂದೆನ್ನಪಾಲಿಸು ॥ ಪ ॥ ತಾರಕಾಖ್ಯದೈತ್ಯ ಸೈನ್ಯ । ಕ್ರೂರಬಾಧೆಗೆ ॥ ಗಾರುಗೆಡುತ್ತಹರಿವಿರಿಂಚಿ । ಸುರರುಶಿವನಿಗೆ ॥೧॥ ದೂರಕರುಣದೋರಿವರಕು । ಮಾರನಿಂದಲೀ । ಕ್ರೂರರನ್ನುಕೊಲಿಸುವೆನೆಂ । ದಭಯಗೊಡುತಲೀ ೨ ॥ಮರೆಯಸೇರಲವರುಯೆಂನ । ಕರದುಗಿರಿಜೆಯಾ । ಹರನುಕೂಡುವಂತೆಮಾಳ್ಪ । ದೆನಲಿಕೆಸದಯ ॥ ೩ ॥

ಶೀಘ್ರದಿಂದ ಬಂದಿರುವೆನಲ್ಲದೆ ಯಿಲ್ಲಿನ ಖಗ ಮೃಗಾವಳಿಗಳ ಶಮಾಗುಣವಂ ಕಂಡು ಪರಮಾಶ್ಚರ್ಯವಂನು ಹೊಂದಿ ಪರೀಕ್ಷಿಸುವೆನೆಂದು ನಂನ ಸುಮಬಾಣವನ್ನು ಪ್ರಯೋಗಿಸಿದೆನು ಅವುಗಳು ನಿಷ್ಕಂಪನದಿಂದ ಯಿರುವದನ್ನು ನೋಡಿ ಭಯಭ್ರಾಂತನಾದೆನು ಮುಂದೆ ನೀನು ಉದ್ಧರಿಸುವದು

[ನಂದಿ) (ಆತ್ಮಗತ) ಆಹಾ ನೋಟದಿಂದಲೆ ಜಗತ್ತಿನ ಸೃಷ್ಟಿಲಯಂಗಳನ್ನು ಮಾಡುತ್ತಿರುವ ಧೂರ್ಜಟಿಯಲ್ಲಿ ಈ ಸುಮಬಾಣನಿಗೆ ಜಯವಾಗಬೇಕಂತೆ ಆದರೆ ಯಿವನ ಹಾನಿ ವೃದ್ಧಿಗಳನ್ನು ತಕ್ಕಮಟ್ಟಿಗೆ ತಿಳಿದ ಹರಿ ವಿಧಿಗಳು ಜಗದ್ವ್ಯಾಪಾರಕ್ಕಾಗಿ ಕಳುಹಿಸಿರುವರು ನಾನುಬೇರೆಯೋಚಿಸಕೂಡದು.

[ಪ್ರಕಾಶ] ಎಲೈ ಮನಸಿಜನೆ ಮಹೇಶನಿಗೆ ನೀನು ಅತ್ಯಂತ ಭಕ್ತನಲ್ಲವೆ ಹೋಗಿ ಜಯಪ್ರದವನ್ನು ಪಡಿಯಬಹುದಲ್ಲ.

[ಮನ್ಮಥ] ಕೃಪಾಕರನಾದ ನಂದೀಶನೆ ನಿನಗೆ ವಂದಿಸುವೆನು.

[ನಂದಿ] ನಿನಗೆ ಕಲ್ಯಾಣಮಸ್ತು

[ರತಿ] ಜನಕನೆ ನಿನಗೆ ವಂದಿಸುವೆನು.

[ನಂದಿ] ಬಾಲಕಿ ನೀನು ಸುಮಂಗಲೆಯಾಗು.

(ಮನ್ಮಥ ರತಿ ಸಹ ಶಿವನಲ್ಲಿಗೆ ಬರುವದು ದಕ್ಷಿಣಾಮೂರ್ತಿ ರುಷಿಗಳು ಕುಳಿತಿರುವರು)

(ಮನ್ಮಥ) ಅಹಾ ಈ ದೇವಾದಿದೇವನನ್ನು ಕಂಡು ಧನ್ಯನಾದೆನು ಪ್ರಿಯೆ ನೋಡು ಲೋಕದ ಪುಣ್ಯ ಪುಂಜವೆ ಮೂರ್ತಿಗೊಂಡು ಮಂಡಿಸಿರುವಂತೆ

Digitized by ROJA MUTHIAH RESEARCH LIBRARY



ಈ ಪರಮಾತ್ಮನು ಯೋಗಾನಂದದೊಳಿರುವನು ಸಾಕು ಸಾಕು ನಾನು ಧನ್ಯನಾದೆನು

[ರತಿ] ಪ್ರಿಯನೆ ನಾನು ಧನ್ಯಳಾದೆನು ಕಮಲದ ಮಧ್ಯದಲ್ಲಿ ಕಲಹಂಸನು ಮಂಡಿಸಿರುವಂತೆ ಈ ಸ್ಥಾಣುವು ಸ್ಫಟಿಕಾಕ್ಷ ಮಾಲಿಯಿಂದ ಮೆರೆಯುವನು ನನ್ನ ನೇತ್ರಗಳು ಸಾಫಲ್ಯವನ್ನು ಹೊಂದಿದವು.

(ಮನ್ಮಥ] ರಾಣಿಯೆ ಈ ಧರಾಮೂಲಸ್ತಂಭನಾದ ವೃಷಮಾತೀತನನ್ನು ದೃಷ್ಟಿಸಿನೋಡಲು ಭೀಕರವು ತೋರುವದು

ರಾಗ__ಶ್ರೀರಾಗ__ಆದಿತಾಳ

(ಜಯಜಗಧೀಶ ಜಯಕರುಣಾಶ) ಯೆಂಬಂತೆ.

ಜಯಜಯಶಂಕರ । ಜಯನತಶಂಕರ । ಜಯಕರುಣಾಕರ । ಜಯಗುಣಮಂದಿರ ॥ ೧ ॥ ಶೈಲಶರಾಸನ । ಪಾಲಿತಮುನಿಜನ । ಕಾಲವಿಭಂಜನ। ಶೂಲಿನಿರಂಜನ ॥೨॥ ಮಂದರಮಂದಿರ । ಸುಂದರಕಂಧರ।ಯಿಂದುಜಟಾಧರ । ಸಿಂಧುಗಭೀರ ॥೩॥ ಚರಣವನಂಬಿದ । ಸ್ಮರನನುಕೋವಿದ । ಪೊರೆಯೊವರಪ್ರದ । ಸುರನುತಪಾದ ॥೪॥ಮನ್ನಿಪನೀಗುತ । ಧನ್ಯನಮಾಡುತ। ಮಾನ್ಯಕಾಪಾಡುತ । ಮನ್ನಿಸುಸಂನುತ ॥ ೫ ।

ವೃತ್ತ । ಜಯಜಯದೇವದೇವನತಜೀವಸುಭಾವನೆಪಾವಕಾಕ್ಷನೆ । ಜಯಜಯಶೈಲಜೇಶಭವಪಾಶವಿನಾಶನೆಭೂಶತಾಂಗನೆ । ಜಯಜಯಕಾಲಕಾಲಧೃತಶೂಲನೆಲಾಲಿತಮೌನಿಬಾಲನೆ । ಜಯಜಯಶೇಷಭೂಷಣಸುಭೂಷಣಭಾಸನೆಪಾಲಿಸೈಭವ ।

ಆಹಾ ಪ್ರಿಯಳೆ ನಾನು ಮುಂದಕ್ಕೆ ನಾಲ್ಕಾರು ಹೆಜ್ಜೆಗಳಂನಿಟ್ಟು ಈ ಜಗದಾದಿ ದೇಶಿಕನನ್ನು ನಿರೀಕ್ಷಿಸುವೆನು

(ಚೆನ್ನಾಗಿದೃಷ್ಟಿಸಿ ನೋಡಿಮೂರ್ಛೆಯಂ ಬೀಳುವನು.)

(ರತಿ) ಹಾಹಾ ಪ್ರಾಣನಾಥನೆ ಸ್ಮರಣೆ ತಪ್ಪಿದೆಯ ಮುಂದೇನುಮಾಡಲಿ ಹರಹರಾ ಯಿದಕ್ಕಾಗಲ್ಲವೆ ನಂನ ಬುದ್ಧಿಯಂನೆಲ್ಲ ವ್ಯಯವಂ ಮಾಡಿ ಬೇಡಿಕೊಂಡದ್ದು ಐಯ್ಯೋ ವಿಧಿಯೆ

ರಾಗ__ತೋಡಿ__ರೂಪಕತಾಳ.

(ಮುರಾರಿಪಾಪಸರೋಜಂಗಳೇಂಗತಿ) ಯೆಂಬಂತೆ.

ಹಾಹಾಮನೋಜದಾರಿಯೇನುರಾಣಿಗೇ । ಹಾಹಾ । ಹಾಹಾ ॥ ಪ॥ ನಾರಿಸಾರಿಬೇಡಿಕೊಳಲುನೀನುಕೇಳದೇ । ಹಾಹಾ । ಹಾಹಾ ॥ ವಿನಾರಿಗೆ

ಯನೀಂ । ಹೊಟ್ಟೆಯಕೆಟ್ಟುರಿಸುಟ್ಟುರೆ । ಥಟ್ಟನೆಬಾಯ್ಬಿಟ್ಟು ಮುಟ್ಟುಗೆಟ್ಟಳಲಿಪ್ಪುದೈ ॥

ವಲ್ಲಭನೆ ಲೋಕದಲ್ಲಿ ಯಾರ ರೂಪನ್ನು ಶ್ಲಾಘನೆ ಮಾಡಬೇಕಾದರು ರತಿ ಮನ್ಮಥರಂತಿರುವರು ಎಂಬ ನುಡಿ ಈ ದಿನಕ್ಕೆ ಮುಗಿಯಿತೆ ಅಲ್ಲದೆ ನಿಂನ ಶುಕ ರಥವು ಪುಂಡ್ರಬಾಣವು ನಿಂನ ಸುಮಶರಗಳೆಲ್ಲ ಯಲ್ಲಿ ಹೋದವು ಈ ಅನಾಥಳಾದ ನಿಂನ ಪತ್ನಿಯನ್ನು ಸಂತೈಸಬಾರದೆ ಇಂಥಾ ದುರಾವಸ್ಥೆಗೆ ಯಂನನು ಗುರಿ ಮಾಡಿ ನೀನು ಸ್ಮರಣೀಯವಾಗಬಹುದೆ,

ಕಂದ ॥ ಮಾರನೆಮಮಜೀವಕ್ಕಾ । ಧಾರನೆನಾರೀಜನಾವನೈಕಸುರಮಂ। ದಾರನೆಶೂರನೆನವ್ಯಶ । ರೀರನೆಮಾತಾಡುದಯದೊಳೆಂನನ್ನುನೋಡು.॥

[ ಈಶ ] ಎಲೈ ನಂದಿಕೇಶನೆ ಹೊರಗೆ ಯಾರೊ ಸ್ತ್ರೀಯರು ಬಹಳವಾಗಿ ಮರುಗುವರು ತಿಳಿದು ಹೇಳು.

[ ನಂದಿ ] ಪತಿತಪಾವನನಾದ ಮಹೇಶನೆ ಮಹೇಂದ್ರನಕಷ್ಟಕ್ಕಾಗಿ ಹರಿ ವಿಧಿಗಳಿಂದ ಕಳುಹಿಸಲ್ಪಟ್ಟ ಮನ್ಮಥನು ನಿಂನಮೇಲೆ ಸುಮಬಾಣವನ್ನು ಪ್ರಯೋಗಿಸಿ ಫಾಲಾಕ್ಷಿಯಿಂದ ದಹಿಸಿದನು ಈ ಕಾರಣದಿಂದ ಅನಾಥಳಾದ ಆತನ ಪತ್ನಿಯು ಮೊರೆಯಿಡುತಿರುವಳು ಈಕೆಯನ್ನು ಉದ್ಧರಿಸು

[ ಈಶ ) ಆ ಬಾಲಕಿಯಳಂನು ಕರದುಕೊಂಡುಬಾ,

[ ನಂದಿ ] ಅಪ್ಪಣೆ ( ರತಿಯನ್ನು ಕರದುಕೊಂಡು ಬರುವನು )

[ರತಿ ] ಸಕಲಲೋಕಶರಣ್ಯನಾದ ಮಹೇಶ್ವರನೆ ವಂದಿಸುವೆನು ಈ ಅನಾಥಳಾದ ನಂನನ್ನು ರಕ್ಷಿಸು.

[ ಈಶ ] ಬಾಲಕಿಯೆ ನಿಂನ ಪತಿ ನನಗೆ ದ್ರೋಹಿಯಾದರೂ ನಿನ್ನ ಪತಿವ್ರತಾಚರಣೆಗೆ ಮೆಚ್ಚಿ ಅವನ ಪ್ರಾಣವಂನು ಕರುಣಿಸುವೆನು ಸ್ವಲ್ಪ ಕಾಲಸೈರಿಸಿಕೊಂಡು ಇರು.

[ ರತಿ ] ರಾಗ_ಕಾಂಭೋದಿ_ಆದಿತಾಳ.( ಜಯಜಗಧೀಶ)ಯೆಂಬಂತೆ.

ಜಯಜಯಸೋಮ । ಜಯಜಿತಕಾಮ । ಜಯನತಪ್ರೇಮ । ಜಯಗುಣಧಾಮ ॥೧॥ ಭವಭಯನಾಶ । ಭುವನಾಧೀಶ । ತವೆಕಾಯ್ದಯನ್ನಧವನಸುಮಂನ ॥ ೨ ॥ ಶರಣರಕ್ಷಾಯ್ವ । ಬಿರಿದಲೆದೇವ । ಕರುಣಿಯೆಲೋಕೋ । ದ್ಧರಣನೆನಿನಗೆ ॥ ೩ ॥

[ ಯಂದು ವಂದಿಸಿ ಹೋಗುವಳು ]

(ಈಸ)ಎಲೈ ಸನಕಾದಿ ಋಷಿಗಳೇ ನಾನು ಬೋಧಿಸಿರುವದನ್ನು ಮರೆಯದಂ



ತೆ ಆಚರಿಸುವದು ಈಗ ನಾನು ಗಿರಿಜೆಯು ತಪವಂ ಮಾಡುವ ಆಶ್ರಮಕ್ಕೆ ಹೋಗಿ ಆಕೆಯ ಮನೋ ಅಭಿಪ್ರಾಯವಂನು ನಿಂದಿಸಿ ನಿಜವನ್ನು ತಿಳಿದು ಬರುವೆನು.

[ಆತ್ಮಗತ]ಯಿದಕ್ಕೆಯಾವವೇಷವನ್ನು ಕೈಗೊಳ್ಳಬೇಕು (ಎಂದುಯೋಚಿಸಿ)

ಕಂದ ॥ ವರವೃದ್ಧವಿಪ್ರನಾಕೃತಿ । ವೆರಸೈದುತಲಾಕೆಯೊಡನೆ ಕೃತಕದನುಡಿಯಿಂ । ಜರಿಯುತಕೊರಗಿಸಿಬಳಿಕಾಂ। ನಿರದೀಯುತ್ತಭಯವಂನುಪರಿಣಯಗೊಳುವೇಂ ॥ [ ಯಂದು ಹೋಗುವನು ]

[ಗಿರಿಜೆ ತಪೋವನದಲ್ಲಿ ಕುಳಿತಿರುವಳುಸಖಿಯರು ಸಮೀಪದಲ್ಲಿನಿಂತಿರುವರು]

[ ಗಿರಿಜೆ ] ರಾಗ__ಆದಿತಾಳ.

( ಯೇನಮಾಡಲೀಗನಾನು ] ಯೆಂಬಂತೆ.

ಸಾರಿಬರ್ಪನಾವನೆ । ಸಾರಸಾರಸಾನನೇ ॥ ಪ ॥ ಸಾರಿನೋಡಲೀತನಂ । ಧಾರುಣೀಸುರೇಶ್ವರಂ ॥ ಮೀರಿಬಲುಬಳಲುತ । ನಾರಿವೃದ್ಧನೀಗಲೂ ॥ ೧ ॥ ಗಡಗಡನೀತನು । ನಡುಗುತಲಿರ್ಪನು ॥ ಯಡವಿಮುಗ್ಗರಿಸುತ । ಬಿಡದಿಲ್ಲಿಬಹನೀತ ॥ ೨ ॥ ಕಟ್ಟಗೇಯನೂರುತ । ಜುಟ್ಟನುಕುಣಿಸುತ ಹೊಟ್ಟೆಯನ್ನುಬೆಳಸುತ । ಥಟ್ಟನೇಬಹನೀತ ॥ ಸಾರಿಬರ್ಪನಾವನೆ ॥ ೩ ॥

( ಗಿರಿಜೆ ) ಸಖಿ ವಿಜಯೆ ಇದೇನು ನೋಡು ಯಾರೊಯಿಲ್ಲಿಗೆ ಪುರುಷರು ಬರುವಂತಿದೆ

[ ಸಖಿ ಬಾಗಿ ನೋಡಿ ] ಯಲೌ ತಾಯೆ ಅಹುದು ಯಾರೋ ವಬ್ಬ ವೃದ್ಧ ಶ್ರೇಷ್ಠನು ನಡಿಯಲಾರದೆ ಮುಗ್ಗರಿಸುತ್ತ ಕಟ್ಟಗೆಯಂನೂರಿಕೊಂಡು ಯಿಲ್ಲಿಗೆ ಬರುವನು

[ ವೃದ್ಧ ) ಆಹಾ ಈ ತಪೋವನವನ್ನು ನೋಡಿ ನನಗೆ ಬಹಳ ಸಂತೋಷವಾಯಿತು [ ಯಂದು ಸಮೀಪಕ್ಕೆ ಬರುವನು ]

[ ಜಯೆ ] ಎಲೈ ಪೂಜ್ಯರೆ ತಾವು ಯಾರು ಯಿಲ್ಲಿ ಬರುವದಕ್ಕೆ ಕಾರಣವೇನು ತಂಮ ಯಿಷ್ಟವನ್ನು ಅಪ್ಪಣೆಕೊಡಿರಿ.

( ವೃದ್ಧ ] ಯಲೌ ಬಾಲಕಿಯೆ ಮೊದಲು ನಾನು ವಿಶ್ರಮಿಸಿಕೊಂಡು ಯಲ್ಲಾ ವಿಷಯವನ್ನು ತಿಳಿಸುವೆನು.

( ಜಯೆ ) ಪೂಜ್ಯರೆ ಹಾಗೆ ಅಗಲಿ ದಯಗೈಯ್ಯಬೇಕು.

[ ಯಂದು ಗಿರಿಜೆ ಬಳಿಗೆ ಕರದುಕೊಂಡು ಬರಲು ]

( ಗಿರಿಜೆ ] ಎಲೈ ಪೂಜ್ಯರೆ ವಂದಿಸುವೆನು

Digitized by ROJA MUTHIAH RESEARCH LIBRARY

( ವೃದ್ಧ ) ನೀನು ಸುಮಂಗಲಿಯಾಗು‼ಕಲ್ಯಾಣಮಸ್ತು.

( ಗಿರಿಜೆ ) ( ನಮಸ್ಕಾರಪೂರ್ವಕವಾಗಿ ನಿಂದಿರುವಳು )

( ವೃದ್ಧ ) ಕೋಮಲಾಂಗಿಯೆ ನೀನು ಮಾಡುತ್ತಲಿರುವ ತಪವನ್ನು ನೋಡಿದರೆ ಯಾರೋ ಒಬ್ಬ ಪುತ್ತುಮ ಪುರುಷನನ್ನು ಕೋರಿರುವಂತೆ ತೋರುವದು ಧಿಟವಾಗಿ ಹೇಳು.

[ ಗಿರಿಜೆ ) ರಾಗ__ಮಾಂಜಿ__ಚಾಪುತಾಳ.

( ನೀರಜನಯನೆಗಜಗಮನೆಹಾ ] ಯೆಂಬಂತೆ.

ಕೇಳುಬಿಂನಪವಾ । ಭೂಮಿದೇವ ।ಪ ॥ ಜಾಲಮಾತಲ್ಲಕೊ ಪ್ರಾಳು ವೆನೀನೀಗ । ಅ ॥ ಶೂಲಪಾಣಿಯನು । ಸುಂದರಫಣಿ । ಪಾಲಮಾಲನನೂ । ನೀಲಗಳನನಿಜಪಾದವನೆನೆಯುವೆ । ೧ । ನಂದಿವಾಹನನಾ । ಸಜ್ಜನಕಾ ।ನಂ ಧದಾಯಕನ । ಯಿಂದುಜೂಟನಕೋರು । ತೆಂದುನಾತಪಗೈವೇ ।೨। ಮು ನಿಜನನುತನಾ । ಮೂಲೋಕಾ ! ವನಭವಹರನಾ । ಮನದಿಕೋರುತಪತಿ ಯನುಮಾಡಿಕೊಳುವೆನಾ । ಕೇಳುಬಿಂನಪವಾ । ಭೂಮಿದೇವ ।೩।

ಎಲೈ ಪೂಜ್ಯರೆ ಈಶನ ಕೃಪೆಯೇ ನನಗೆ ಸರ್ವಭಾಗ್ಯವು ಸುಗತಿಇ ಷ್ಟಪ್ರದವಾಗಿರುವದು ಮತ್ತೊಂದರಲ್ಲಿ ಆಶೆಯು ತಿಲಾಂಶವಾದರೂ ಇಲ್ಲ.

( ವೃದ್ಧ ] [ ಕಿವಿಗೊಟ್ಟುಕೇಳಿ ] ಸುಂದರಾಂಗಿಯೇ ಸ್ತ್ರೀಯರ ಬುದ್ಧಿಯೋ ಮಂಣು ಮುದ್ದೆಯೋ ನಾನು ಕಾಣೆನಲ್ಲ,

( ಗಿರಿಜೆ ) ಯಿದೇನು ಹೀಗೆಂನುವಿರಿ.

( ವೃದ್ಧ ) ಆದರೆ ನಿಂನ ತಪ್ಪಲ್ಲ ನಿಂನ ರೂಪಿಗೆ ತಕ್ಕ ಬುದ್ಧಿಯನ್ನಲ್ಲದೆ ಈ ಮುಗ್ಧ ಭಾವವಂನು ನಿರ್ಮಿಸಿದರಿಂದಲೆ ಬ್ರಹ್ಮನಿಗೆ ಜಡಜಭವನೆಂದು ಹೆಸರುಂಟಾಗಿರುವದು.

( ಗಿರಿಜೆ ) ಯಲೌ ಸಖಿಯೆ ಯಿದೇನು ನಂನ ಅಭಿಪ್ರಾಯಕ್ಕೆ ಈ ಪೂಜ್ಯರಾಡುವ ಮಾತುಗಳು ಬಹಳದೂರವಾಗಿರುವದಲ್ಲ.

[ ಸಖಿ ) ಜನನಿಯೆ ವಯೋವೃದ್ಧರ ವಿಷಯದಲ್ಲಿ ಹೀಗೆ ಯಾತಕ್ಕೆ ಯೋಚಿಸುವೆ ಸಹಜವಾಗೆ ಯಿರುವದಲ್ಲ.

(ವೃದ್ಧ)ರಾಗ_ಕಲ್ಯಾಣಿ_ಆದಿ.[ಪೊರೆಯುವದಗಜಾಮನೋಹರಾ]ಎಂಬಂತೆ

ಅಹಾಹಾಕೋರುವದೇನಿದು ।ಪ। ಪೂಹಿಸದಕ್ಕಟ । ಮೋಹಿಸಿತಿರು ಕನ । ಅ । ಯೆತ್ತನುಹತ್ತುತ । ಸುತ್ತುತಸರ್ಪವ । ಪುತ್ತುಮನಲ್ಲದೆ ।ಮೆ ರೆವನನುನಿತಿಳು ।೧ ॥ ಕೂಡಿಭೂತನಸುಡು। ಗಾಡೊಳುವಾಸವ । ಮಾ



ಡುವಬೇಡರ ।ವೇಷದವನನೀ । ೨ । ಬೂದಿಯದೇಹಕೆ।ಮೋದದಿಬಳಿಯು ತ । ಬೀದಿಬೀದಿಯೊಳು । ತಿರುಪೆಯುಗೈದನ । ೩ ॥ ಹಸುವನುಸೈಸದೆ।ಬಿಸವ ನುಕೂಡಿದನ । ವಸನವಿಲ್ಲದೆತಾ । ಪಸಿದೊಗಲಾಂತನ । ೪ ॥ ನೋಡಿದವರು ಕೈ । ಜೋಡಿಸಿಬಡಿಯುತ ॥ ಮಾಡದಿಹರೆಪರಿಹಾಸ್ಯವನಹಾ । ಆಹಾ।ಕೋ ರುವದೇನಿದು।೫।

ಕಂದ ॥ಸತಿನಿಂನರೂಪಿಗಾಭಾ । ರತಿರತಿರಂಭಾದಿಶಚಿಯುರೇಂಸರಿಬಹರೆ।ಮತಿ ವಂತೆಯುದರಿನಿನಗನು । ಪತಿಯುಂನಾರೈಯುದೇಕೆನೆನೆಸುವೆಶಿವನಂ ॥

[ ಗಿರಿಜೆ ] ಹರಹರಾ( ಎಂದು ಕಿವಿಗಳ ಮುಚ್ಚಿ )

ಎಲೈ ಶಿವದೂಷಕನಾದ ಬುಧನೆ ಹೀಗೆ ಹೇಳ ಬಹುದೆ ತ್ರಿಲೋಕಜ ನಕನಾಗಿ ಹರಿವಿರಿಂಚಿ ಸುರೇಂದ್ರಾರ್ಚಿತಚರಣನಾಗಿ ಸೃಷ್ಟಿ ಸ್ಥಿತಿಲಯ ಗಳಿಗೆ ಕಾರಣನಾದ ಧಾರುಣಿಗೆ ಮೂಲಸ್ತಂಭನಾದ ನಿರಂಜನ ನಿರಾಮ ಯನಾದ ಶಂಭುವನ್ನು ಜರಿಯಬಹುದೆ ವೇದಾಗಮ ಪುರಾಣಗಳರಸಿ ಕಾಣ ದಮಹಿಮನೆಂದು ನೀನು ಶ್ರೇಷ್ಟವಾದ ಬ್ರಾಹ್ಮಣ ಕುಲದಲ್ಲಿ ಹುಟ್ಟಿದವ ನಾದರು ತಿಳಿಯದಾಯಿತೆ.

( ವೃದ್ಧ ) ಯಲೌ ಬಾಲಕಿಯೆ ತಿಳಿದಿರುವದರಿಂದಲೆ ನಿಂನ ರೂಪಿಗೆ ತಕ್ಕವನಾದ ನಾನು ಬಂದಿರುವೆನು ನಂನನ್ನು ವರಿಸು.

[ ಗಿರಿಜೆ ] ಯಲೌ ಸಖಿಯರೆ ಈ ವೃದ್ಧವಿಪ್ರನನ್ನು ಅಚೆಗೆ ಕಳು ಹಿಸಿರಿ [ ಯಂದು ಪೀಠದಲ್ಲಿ ಕುಳಿತಿರುವಳು ]

( ಸಖಿ ) ರಾಗ__ಬ್ಯಾಹಾಗ್__ಆದಿತಾಳ.

॥ನಡೆನಡೆನಡೆವನಕೆ ಪೂತರುವದಕೆ ಯೆಂಬಂತೆ.॥

ನಡೆನಡೆನಡೇಭೂಸುರ । ಸನ್ಮಾರ್ಗವಿದೂರ । ಪ । ಪುರಹರನುರುತ ರ । ಚರಿತವಧರೆಯೊಳ । ಗರಿಯದೆಜರಿಯುವ । ಮರುಳನಲ್ತೆನೀ । ೧ ॥ ಹರಿಯಜರರಸಿದೊ । ಡರಿಯದಮಹಿಮಾ। ಕರನನುಗಿರಿಜಾ।ವರನಜರಿವೆನೀ॥ ನೆರೆವೃದ್ಧನುಸೀ । ನೊರೆಯಲುಘಲವಿ । ಲ್ಲರರೆನಾಕುಕ್ಷಣವಿರಬೇಡಿಲ್ಲೀ। ನಡೆನಡೆ । ೨ ।

ಶಿವಪೂಜಾ ಸಮಯದಲ್ಲಿ ಕರಡಿಯನ್ನು ಬಿಟ್ಟಂತಾಯಿತುನಡೆನಡೆ

।ಯಂದು ತಳ್ಳಿಬಿಡುವಳು।

( ಈಶ ) ॥ನಿಜರೂಪಿನಲ್ಲಿ ತೋರುವನು.।

( ಗಿರಿಜೆ ) ಜಗದೇಕನಾಥನೆ ಕರುಣಾಕರನೆ ಕ್ಷಮಿಸಿ ಉದ್ಧರಿಸು.

Digitized by ROJA MUTHIAH RESEARCH LIBRARY

ರಾಗ__ಕಮಾಚು__ಆದಿತಾಳ.

(ಬಾರೆನೀರೇದಯದೋರೇ । ಮಾರನ) ಯೆಂಬಂತೆ.

ಶಂಭೋವಿಭೋಪರಿಪಾಲಿಸುಬೇಡುವೆ । ನಂಬಿದೆನ್ನನುನೀನು ॥ ಶಂಬರರಿಪುಮದ ।ಡಂಬಹರಣಶಂಭೋ॥ಅ॥ಯಂನೀಭಾವಮಂನುಶೋಧಿಸಲು । ಸಂನುತಬುಧರೂ।ಮಂನು ತಾಳಿದಶಂಭೋ॥೧॥ನಂಬಿದೆನುಸಾಂಬನೆನಿಂನನು॥ ಬಿಂಬಿಡದಂಬುಜ । ಭವನುತಪೊರೆಶಂಭೋ ॥ ೨ ॥ ದೀನಾವನಸೂನಶರಾರಿಯೆ । ನೀನರಸದೆಗುಣ ॥ ದೋಷವಪೊರೆಶಂಭೋ ॥ ೩ ॥

ಸರ್ವಜ್ಞನಾದ ದೇವೇಶನೆ ನಿನಗೆ ವಿಜ್ಞಾಪನೆಯಂಮಾಡುವದೇನಿರುವದು

(ಈಶ) ಕೋಮಲಾಂಗಿಯೇ ನಿನಗೆ ಅಭಯಮಂ ಕೊಟ್ಟಿದ್ದಂತೆ ನಾನು ಪೋಗಿ ನಿಮ್ಮ ಜನಕನಿಗೆ ಸಂತೋಷವನ್ನುಂಟುಮಾಡಿ ನಿಂನ ಕಲ್ಯಾಣವಂ ಶೀಘ್ರದಿಂದ ಕೈಗೊಳ್ಳುವೆನು ಅನುಮಾನವಂ ಬಿಡು.

(ಗಿರಿಜೆ] ಕರುಣಾಳುವೆ ನಿಂನಪ್ಪಣೆಯಂತಿರುವೆನು.

(ಈಶ) ನಾನು ಪೋಗಿ ಬರುವೆನೆಂದು ಹೋಗುವನು,

(ಗಿರಿಜೆ) ಯಲೌ ಸಖಿಯರೆ ನಮ್ಮ ಕೋರಿಕೆಯಂತೆಯೇ ಮಹೇಶನು ವೈದೋರಿಪನು ಯಿನ್ನು ನಮ್ಮ ಅರಮನೆಗೆ ಹೋಗುವ ನಡೆಯಿರಿ.

(ಸಖಿ) ಯಲೌ ಜನನಿಯೆ ನಾವು ಧನ್ಯರಾದೆವು ಯಿಂನು ಯಾವ ಹಂಬಲವು ಯಿಲ್ಲ (ಯೆಂದು ಯಲ್ಲರು ಹೋಗುವರು)

(ಈಶ ಪೀಠದಲ್ಲಿ ಕುಳಿತಿರುವನು ನಂದಿ ಸಮೀಪದಲ್ಲಿ ನಿಂತಿರುವನು.]

॥ನಂದಿ॥ಪರಮೇಶನೆ ನಿಂನ ಪಾದವನ್ನು ನಂಬಿದ ರತಿದೇವಿಯ ಕೋರಿಕೆಯನ್ನು ನೆರವೇರಿಸುವದು. ಯೆಂದು ಕರದುಕೊಂಡು ಬರುವನು.

ಪರಮೇಶ॥ ಯೆಲೌ ಬಾಲಕಿಯೆ, ನಿಂನ ಪತಿಯು ನಿನಗೆ ಸಾಂಗನಾಗಿಯೂ ಉಳಿದ ಲೋಕಕ್ಕೆ ಅನಂಗನಾಗಿ ತೋರುವನು ಹೋಗು.

ರತಿ ॥ ಕೃಪಾಳುವೆ ನಾನು ಧನ್ಯಳಾದೆನು ॥ಯೆಂದು ವಂದಿಸಿ ಹೋಗುವಳು

(ಗಿರಿರಾಜ] ಜಗಜ್ಜನಕನೆ ವಂದಿಸುವೆನು ನಿಂನ ಅಪ್ಪಣೆಯಂತೆಯೆ ಕಲ್ಯಾಣ ಮಹೋತ್ಸವಕ್ಕೆ ಸಕಲ ಸಾಮಗ್ರಿಯು ಸಿದ್ಧವಾಗಿರುವದು ಹರಿವಿರಿಂಚಿ ಸುರ ಸಮೂಹವೆಲ್ಲ ಕಾದುಕೊಂಡಿರುವದು ಆದ್ದರಿಂದ,

ಕಂದ ॥ ಬಿಜಯಂಗೈಸುಜನಾವನ । ಭುಜಗೇಂದ್ರವಿಭೂಷದೇವಮೃದು
ತರಭಾಷಾ।ಅಜಹರಿಸುರನುತಯಂನಾ।ತ್ಮಜೆಯಂಕೈವಿಡಿದುಬೇಗಪಾ
ಲಿಸುಧರೆಯಂ ॥

Digitized by ROJA MUTHIAH RESEARCH LIBRARY



[ಈಶ] ಎಲೈ ಪರ್ವತೇಂದ್ರನೆ ನಾನು ಬೇಗದಿಂದಲೆ ಬರುವೆನು ನಡೆ

[ಗಿರಿರಾಜ] ಅಪ್ಪಣೆ [ಯೆಂದು ಹೋಗುವನು]

[ಈಶ] ಕಂದ ॥ ನಂದಿಯೆಹೃದಯಾನಂದಿಯೆ । ನಂದನೆಯಂನಿಖಿಲಲೋಕಕಾನಂದನೆಯಂ। ಯಿಂದೀವನಂತೆಗಿರಿಯದ್ವಾ। ರಿಂದಲ್ಲಿಗೆಪೋಪೆಬೇಗಪರಿಣಯಗೊಳಲಾಂ ॥

(ನಂದಿ) ಮಹೇಶನೆ ಜಗಜ್ಜನಕ ಜನನಿಯರಿಗೆ ಅನಾದಿ ದಂಪತಿಗಳಾದ ನಿಮಗೆ ಯಿದು ಒಂದು ಲೀಲೆಯಲ್ಲವೆ ಬಿಜಯಂಗೈವುದು

ದೇವತೆಗಳು ಮುನಿಗಳಾದಿಯಾಗಿ ಶಿವನ ಕಲ್ಯಾಣಮಂಗಳವಂ ಹಾಡುವರು.

ರಾಗ__ಸಾವೇರಿ__ರೂಪಕತಾಳ.

॥ಪೂಜ್ಯತಾಂ, ಪೂಜ್ಯತಾಂ,॥ ಯೆಂಬಂತೆ.

ವಿಜಯಿಸೈ । ವಿಜಯಿಸೈ । ವಿಜಯಿಸೈ । ದೇವ ॥ ಪ ॥ ಸ್ಮರಕೋಟಿಸುಂದರನಿಜರೂಪ । ಕರುಣಾವಾರಿನಿಧಿಗಿರಿಚಾಪ । ಪುರುಗಾಧಿಪನವ್ಯಕಲಾಪ ॥ ದೇವ॥೧॥ ನಿಗಮಾಗಮಸನ್ನುತಪಾದ। ಜಗದಾವನಸೀಲನೆಶ್ರಿದಾ। ನಗರಾಜಕೃದಾಶಯಮೋದಾ ॥ ೨ ॥ ಗಿರಿಧಾಮಮಂಗಳವರನಾಮಾ ।ಸುರರಾಜಾದಿಪಾಲಿತಸೋವ:।ಶರಣಾಶಯಕೈರವಸೋಮ । ದೇವ ॥ ೩ ॥

ಚತುರ್ಥಾಂಕ ಸಮಾಪ್ತ.

---

(ಪಂಚಮಾಂಕ ಪ್ರಾರಂಭ)

॥ ತಾರಕಾಸುರನ ಸಭೆ ॥

[ತಾರಕ] ಎಲೈ ಸಹೋದರನೆ ನಂಮ ವಿಪಕ್ಷರಾದ ದೇವತೆಗಳು ಇರುವ ಸ್ಥಳವನ್ನು ತಿಳಿದುಬರುವದಕ್ಕೆಹೋಗಿದ್ದ ಬೇಹುಚರನ ವರ್ತಮಾನವೇನು ?

[ಶೂರಪದ್ಮ] ಎಲೆ, ಅಗ್ರಭವನೆ ಅವರು ಯಾವ ಗಿರಿಗುಹೆ ಅರಣ್ಯವನ್ನು ಸೇರಿ ನಮ್ಮ ಭೀಕರದಿಂದ ಸಂಕಟಪಡುತ್ತಿರುವರೊ ತಿಳಿಯದು ಬೇಹುಚರನಿಗೂ ಅವರನ್ನು ಕಾಣುವದಕ್ಕೆ ಅಸಾಧ್ಯವಾಗಿರುವದರಿಂದ ಬರಲು ತಾಮಸವಾಗಿರಬಹುದು.

[ಸಿಂಹಾಸ್ಯ] ಎಲೈ ತಾರಕಾಖ್ಯನೆ ಹೀಗೆ ಯೋಚಿಸಬೇಡ ನೀಚರಾದದೇವತೆಗಳು ತಮಗೆ ಸಹಾಯಕರಾದ ಹರಿವಿಧಿಗಳಿಂದ ಯಾವದಾದರು ತಕ್ಕಉಪಾಯವನ್ನು ಮಾಡುವರಲ್ಲದೆ ಸುಮ್ಮನಿರಲಾರರು

( ತಾರಕ ) ಎಲೈ ಸಹೋದರನೆ ಮಹೇಶನು ಈ ವಿಷಯವಾಗಿ ಪ್ರವೇಶವಂಮಾಡಲಾರನು ಬ್ರಹ್ಮನಾದರೂ ನಮ್ಮ ತಪೋಲಭ್ಯವಾಗಿರುವ ಅಧಿಕಾರವಂ ತಿಳಿದೇ ಇರುವನು ಮತ್ತು ಲಕ್ಷ್ಮೀವರನು ಮೊದಲೇ ಕೈಲಾಗದೆ ಮೇ ಶಿಖರವನ್ನು ಸೇರಿರುವನೆಂದು ತಿಳಿಯದೊ ?

( ಶೂರಪದ್ಮ ]ಈ ಮಾತು ಧಿಟವೇಸರಿ ನಾನು ಚೆನ್ನಾಗಿ ಒಪ್ಪಿರುವೆನು.

( ಸೇವಕ ] ದನುಜೇಂದ್ರನೆ ನಿನಗೆ ವಿಜಯವಾಗಲಿ ದೇವಗುರುಗಳಾದ ಬೃಹಸ್ಪತಿಗಳು ದಯಮಾಡುವರು.

[ ತಾರಕಾದಿಗಳು ಪೀಠದಿಂದಿಳಿದು ಬಂದು ನಿಂತಿರುವರು )

( ಗುರು ಸಭೆಗೆ ಬರುವದು )

( ತಾರಕಾದಿಗಳು ) ಪೂಜ್ಯರೆ ನಿಮಗೆ ವಂದಿಸುವೆವು. [ಹಿಂದು ಯೆಲ್ಲರೂ ನಮಸ್ಕರಿಸುವರು ]

[ ಗುರು ) ಎಲೈ ದನುಜೇಂದ್ರರೇ ನಿಮಗೆ ಕುಶಲ ಉಂಟಾಗಲಿ.

( ತಾರಕ ) ಈ ಪೀಠವನ್ನು ಅಲಂಕರಿಸಬೇಕು.

[ ಗುರು ) ನಿಂನಿಚ್ಛೆಯಂತಾಗಲಿ (ಎಂದು ಕುಳಿತುಕೊಳ್ಳುವನು ]

[ ತಾರಕ ) ರಾಗ—ಬ್ಯಾಗಡೆ—ಚಾಪು

॥ಮಾರಸುಂದರಯನ್ನ ದೂರುವದುಚಿತವೆ ಯೆಂಬಂತೆ.।

ಗುರುವೆನೀನಿಲ್ಲಿಗೆ। ತೆರಳಿಬಂದಿರುವಂಥ । ಪರಿಯಾವುದದನುಪೇಳ್।
ಕರುಣವನುತಾಳಿ । ಪಲ್ಲ ।ನಿಮ್ಮ ಶಿಷ್ಯರುಗಳಾ । ದೆಮ್ಮವಿಪಕ್ಷರು ।ಸುಮ್ಮಾನದಿಂದಿಹರೆ। ಪೇಳುವದುಭಲರೆ । ೧ । ಸುರರಿಗೆಕ್ಷೇಮವ । ಭರದಿಕೋರುತಲಿಹ। ಕರುಣಾಳುನೀನಲ್ಲವೆ । ಪೇಳುವದುಗುರುವೆ । ೨ । ಯೋನಯೋಚಿಸುತಿಲ್ಲಿ। ಮಾನನಿಧಿಯೆಬಂದೆ।ಸಾನುರಾಗದಿಪೇಳ್ವುದು।ತಡವೇತಕೆಂದು।೩।

[ ಗುರು ) ಎಲೈ ತಾರಕಾದಿಗಳಿರ ಹೀಗೆ ದೇವತೆಗಳಲ್ಲಿ ದ್ವೇಷವು ಭರಿತವಾಗಿ ನುಡಿವುದ ಕೇಳಿ ನಾನು ಯಾವ ವಿಷಯವನ್ನು ಯೋಚಿಸಿರುವೆನೊ ಅದನ್ನು ವಿಸ್ತರಿಸುವದಕ್ಕೆ ಪ್ರತಿ ಬಂಧಕ ಮಾಡುವಂತಿರುವ ನಿಂಮೊಡನೆ ಯೇನುತಾನೆ ಹೇಳಲಿ.

( ತಾರಕ ] ಕಂದ। ಗುರುವರನಿನ್ನಾಶಯವಂ । ನೊರೆವುದು ಸಂದೇಹಬೇಡನಮಿಸುವೆಪದಕಂ । ಅರಿಯಲ್ಕೆಡರಿನಕಾಲಕೆ ।ಪರತರಸಂಜೀವನೌಷಧಿಯುನೀನಲ್ತೇಂ ।

(ಗುರು ]ದೇವತೆಗಳಲ್ಲಿ ನಿಮಗಿರುವ ದ್ವೇಷವುಸಾಕು ಯಿಲ್ಲಿಗೆಬಿಡಬೇಕು.

Digitized by ROJA MUTHIAH RESEARCH LIBRARY



[ ತಾರಕ ] ಯಿದೀಗ ನಡಿಯತಕ್ಕದ್ದಲ್ಲವೆಂದುಭಾವಿಸಿರಿ.

[ ಗುರು ] ತಾರಕಾಖ್ಯನೆ ಲೋಕದಲ್ಲಿ ಆಸೆಗೆ ಪಾರವಿಲ್ಲದಂತೆಕೋಪಕಕ್ಕೂ ಅವಧಿಯಿಲ್ಲದೆ ಮೃತ್ಯುಸ್ವರೂಪಿನಿಂದ ಬಾಧಿಸುವವೆಂದು ತಿಳಿ.

( ತಾರಕ ) ಪೂಜ್ಯರೆ ಈ ವಿಷಯ ಅಬಲರಾದವರಿಗೆ ಸಮನಲ್ಲದೆ ತ್ರಿಲೋಕಾಧ್ಯಕ್ಷರಾದ ನಮ್ಮಲ್ಲಿ ನಡಿಯಲಾರದು

( ಗುರು ) ಹಾಗೆಣಿಸಬೇಡಬಲಾಬಲವು ಸುಖಃದುಖವು ಒಂದೇ ಸಮವಾಗಿ ಯಾರಿಗೂ ನಡಿಯಲಾರದು ನನ್ನ ನುಡಿಯನ್ನು ಮನ್ನಿಸಿ.

[ತಾರಕ ] ಆತ್ಮಗತ॥ ವ್ಹೊಹೋ ಯಿವರು ಕೇಳುಬಲರಾದ ದೇವತೆಗಳಿಂಲೆ ಪ್ರೇರಕರಾಗಿ ಬಂದಿರುವರು ಓಳ್ಳೇದು ॥ ಪ್ರಕಾಶ ॥ ಪೂಜ್ಯರೆ ನಿಮ್ಮ ಮುಖ್ಯ ಅಭಿಪ್ರಾಯವೇನು ಹೇಳಿ.

( ಗುರು ] ರಾಗ— ತಾಳ.

॥ನಾಶಮಪ್ಪುದು ಪಂಚಪಾತಕವೆಲ್ಲ॥ ಯೆಂಬಂತೆ.

ನ್ಯಾಯವಲ್ಲವುಕೇಳು। ಸುರರೊಳುವೈರ । ಬಾಯಮಾತಲ್ಲಿದು। ಬರದಿಡುವೀರ ॥ ೧ ॥ ಕಾರ್ಯಬಲವುನಿಮ । ಗೆಂದಿಗುವುಂಟು । ದೈವಬಲವು ಸುರರಿಗೆಕ್ಕೈಗಂಟು । ೨ । ಅದರಿಂದಸುರರೊಳು । ವೈರವಮಾಡಿ । ಮದಮುಖರಾಗುತ।ಲುರಿಕೆಡಬೇಡಿ । ೩ ।

( ತಾರಕ ) ಕಂಡ। ಸುರರೆಲ್ಲರೆಮ್ಮಸೇವಾ ।ಚರರಾಗುತಸುರಪನ್ನೈದೆಬೆಸಸಿದತೆರದಿಂ । ಶಿರವಂಬಾಗುತಲಿರುವಿ ।ಪರಿಸಂಮತವಾಗೆಸಂಧಿಗೊಪ್ಪುತಲಿಹೆವೈ ॥

( ಗುರು ) (ಆತ್ಮಗತ ) ಆಹಾ ದರ್ಪಾರಸ ಬತ್ತಿದವರಲ್ಲಿ ಹಿತಾಹಿತದ ನುಡಿಯು ರುಚಿಸುವದಿಲ್ಲ ದೇವತೆಗಳೆಲ್ಲ ಇವರ ಚರಣ ಕಿಂಕರತ್ವದಲ್ಲಿ ಇರಬೇಕಾದರೆ ತ್ರಿಮೂರ್ತಿಗಳಿಂದ ಫಲವೇನು ಒಳ್ಳೇದು ( ಪ್ರಕಾಶ ]

ಎಲೈ ದೈತ್ಯೇಂದ್ರರೆ ಹಾಗಾದರೆ ಸುರಪಾಲನು ನೀವು ಅನ್ಯೋನ್ಯವಾಗಿದ್ದು ಅವರ ಐಶ್ವರ್ಯವು ಸತಿಯರನ್ನು ಸಹ ಅವರಿಗೆ ಕೊಡುವದಕ್ಕೆ ಮನಸು ಬಾರದೆ ಹೇಳಿ

ತಾರಕ ) ಯಂದಿಗೂ ನಾವು ಒಪ್ಪುವರಲ್ಲ ಈ ವಿಷಯವಾಗಿ ಚರ್ಚಿಸಲು ನಿಮ್ಮ ಗುರುತ್ವವು ಕಡಮೆಯಾಗುವದು.

[ ಗುರು ] [ ಆತ್ಮಗತ ] ಹೀಗೆಯೇ ಕೆಡುವ ಕಾಲಕ್ಕೆ ಹುಟ್ಟುವ ದುರ್ಬುದ್ಧಿ

[ ಪ್ರಕಾಶ ] ಹಾಗಾದರೆ ನಾನು ಹೋಗಿಬರುವೆನು.

[ ತಾರಕಾದಿಗಳು ] ನಿಮಗೆ ವಂದಿಸುವೆವು

( ಶೂರಪದ್ಮ ] ಎಲೈ ತಾರಕಾಖ್ಯನೆ ಗುರುಗಳು ಆಡಿದ ಮಾತಿನಿಂದ ದೇವತೆಗಳು ಯೇನೋ ಪ್ರಯತ್ನವಂ ಮಾಡಿರುವಂತೆ ತೋರುತ್ತೆ.

[ ಸಿಂಹಾಸ್ಯ ] ಸಂದೇಹವೇನು ಮಹೇಶನಿಂದಲೇನಾದರು ಸಹಾಯ ಪಡದಿರಬಹುದು.

[ ತಾರಕ ] ಬಿಡಿಬಿಡಿ ಮೃತ್ಯುವಿನ ನಾಲಿಗೆಯುಂ ಕಿತ್ತುಸಪ್ತಸಮುದ್ರ ಪಾನಮಾಡಿ ಕುಲಾಚಲಗಳಂ ಚಂಡನಾಡಿ ಭೂಮಿಯುಂ ಚಾಪೆಯಂತೆ ಸುತ್ತುವ ಬಲಶಾಲಿಗಳಾದ ನಮಗೆ ಯಾರಿಂದ,ಭಯ ದೊರೆಯುವದು ಹಾಗೆ ಯುದ್ಧಕ್ಕೆಬರುವ ಶೂರನಾರು ನಾವು ಸಿದ್ಧವಾಗಿರೋಣ ಬನ್ನಿರಿ.

(ಯಂದು ಎಲ್ಲರು ಹೋಗುವರು.]

( ಬ್ರಹ್ಮ ವಿಷ್ಣು ಸುರರು ಸಭೆಯಲ್ಲಿ ಕುಳಿತಿರುವರು )

[ ಗುರು ಬಂದು] ಎಲೈ ಲಕ್ಷ್ಮೀಶನೆ ದೈತ್ಯರಲ್ಲಿ ಹೋಗಿ ನಯ ಭಯಗಳಿಂದ ಯಷ್ಟು ಬೋಧಿಸಿದರೂ ಒಪ್ಪಲಿಲ್ಲ ಒಂದು ಆಲೋಚನೆ ಮಾತ್ರ ಹೇಳಿರುವರು.

[ ದೇವತೆಗಳು ] ಯಲ್ಲರೂ ಸೇರಿ ] ಅದೇನು ಹೇಳಿ ಹೇಳಿ

[ ಗುರು ] ದೇವತೆಗಳೆಲ್ಲ ಅವರಪಾದಚಾರಿಗಳಾಗಿರುವಂತೆಯೂ ಇಂದ್ರನು ನೇಮಿಸಿದ ಕಾರ್ಯವಂ ಮಾಡಿಕೊಂಡಿರುವಂತೆಯೂ ಒಪ್ಪಿದರೆ ನಾವು ಸಮ್ಮತಿಸುವೆವೆಂದು ಹೇಳಿದರು

( ವಿಷ್ಣು ) ಛೀ ಛೀ ನೀಚರಿಗೆ ರುಣಾನುಬಂಧ ತೀರಿರುವದು ಬಿಡಿ ಬಿಡಿ ಮಹೇಶನ ನಿಲಯವಾದ ಕೈಲಾಸಕ್ಕೆ ಹೋಗೋಣಬನ್ನಿ

( ಯಂದು ಯಲ್ಲರು ಹೋಗುವರು )

ಶಿವಗಣಗಳು ಹುವ್ವಿನಬುಟ್ಟಿಯನ್ನು ಹಿಡಿದುಕೊಂಡುಹುವ್ವು

।ಕೊಯ್ಯುತ್ತಲಿರುವರು॥

[ ಸಾನಂದ ( ಬುಟ್ಟಿ ಹಿಡಿದುಕೊಂಡು ಬಂದು ) ಎಲೈ ಗಣಶ್ರೇಷ್ಠರೇ ನಮಸ್ಕಾರ

[ ಗಣಗಳು ] ಸಾನಂದನೆ ನಿನಗೆ ಪ್ರತಿ ನಮಸ್ಕಾರ.

[ ಸಾನಂದ ] ಹುವ್ವುಕೊಯ್ದು ಮುಗಿಯಲಿಲ್ಲವೋ

[ ಗಣಗಳು ]ಹುವ್ವು ಕೊಯ್ದು ಮುಗಿದರೂ ಆಸೆ ಮಾತ್ರಮುಗಿಯಲಿಲ್ಲ.



( ಸಾನಂದ ] ಯಿದು ನಿಶ್ಚಯ ಲೋಕದಲ್ಲಿರುವ ಪುಷ್ಪವಂನೆಲ್ಲ ಕೊಯ್ದು ಮುಗಿದರು ಆಸೆ ಮುಗಿಯುವದಿಲ್ಲ ಆದ ಪ್ರಯುಕ್ತ ನಾನು ಕೊಯ್ದು ತೃಪ್ತಿಗೊಂಡಿರುವೆನು.

[ ಗಣಗಳು ] ನಿಂನಂತೆ ನಾವು ಪೂರೈಸಿರುವೆವು.

[ ಯಂದು ಯಲ್ಲರು ಕುಳಿತು ]

( ಸಾನಂದ ) ಗಿರಿಜಾ ಕಲ್ಯಾಣವನ್ನು ಹಾರೈಸಿಕೊಂಡು ಯಿದ್ದ ದೇವತೆಗಳ ಕಷ್ಟವು ನಾಶವಾಗಲೆ ಯಿಲ್ಲವಲ್ಲ

( ಗಣಗಳು ) ಯಿದಕ್ಕೆ ಒಂದು ಕಾರಣ ಉಂಟಾಯಿತು

( ಸಾನಂದ ] ಅದೇನು ಹೇಳು ಹೇಳು

[ ಗಣಗಳು ] ಮಹೇಶನು ಗಿರಿಜೆಯಲ್ಲಿ ಯೇಕಾಂತರದಿ ಕುಮಾರೊತ್ಪತ್ತಿಗೆ ದೃಷ್ಟಿಸಿ ನೋಡುವ ಸಮಯದಲ್ಲಿ ದೇವತೆಗಳೆಲ್ಲಮಾಡಿದ ಆರ್ತಕೋಲಾಹಲದಿಂದ ರೇತಸ್ಸು ಭೂಮಿಗೆ ಬೀಳಲ್ಪಟ್ಟು ಸರ್ವರು ಭಯಪಡುತಿದ್ಧರು;

( ಸಾನಂದ ) ಆಮೇಲೆ ಆಮೇಲೆ

( ಗಣಗಳು ] ಮಹೇಶನನುಮತಿಯಂತೆ ಅ ರೇತಸ್ಸನ್ನು ಗಂಗೆಯಲ್ಲಿರಿಸಲು ಅದರಿಂದ ಕುಮಾರನು ಬೆಳದು ಸಕಲಶಾಸ್ತ್ರಗಮ ಧನುರ್ವಿದ್ಯಾಪ್ರವೀಣನಾಗಿ ಮಾತಾಪಿತೃಗಳಿಗೆ ಆನಂದವನ್ನುಂಟುಮಾಡಿ ಈಗ ದೇವತೆಗಳ ಕಷ್ಟವಂ ಪರಿಹರಿಸಲು ಯುದ್ಧಾರಂಭಕ್ಕೆ, ಸೇನಾಸಮೇತನಾಗಿ ಹೊರಡುವನು.

(ಸಾನಂದ ] ನಡೆನಡೆ ನಾವು ಆ ಉತ್ಸವವನ್ನು ನೋಡಿ ಧನ್ಯರಾಗುವ

( ಯಂದು ಹೋಗುವರು )

( ಮಹೇಶ )(ಸಭೆಯಲ್ಲಿ ಕುಮಾರನಿಗೆಯುದ್ಧಾರಂಭಕ್ಕೆ ನೇಮಿಸುವದು)

ರಾಗ—ಕಾನಡ—ಚಾಪು.

।ಕರಿರೇಆತನನೀವುಯೆಂಬಂತೆ।

ಸಲಹೈಕರುಣದೊಳೀಗ। ಸಲಹೈ ॥ ಪ ॥ ಖಳರಿಂದಬಳಲುತ। ಳಳಲುವಸುರರನು । ಅ ॥ ಹರಿಯಜಸುರನಾಥ । ಶುರೆನೊಂದುಬಿಡದೆನ್ನ । ನೆರೆ ನಂಬಿಹರುಪೋಗಿ । ದುರುಳರನರಿಯುತ । ೧ ।ಮಾನಿತರನುಮಾನಹೀನಗೊಳಿಸಿದಂತ । ದಾನವಾಗ್ರಣಿಗಳ । ನೀನುಸಂಹರಿಸುತ । ೨ ॥ ಭೂಮಿಭಾರವನುಸು । ಪ್ರೇಮದಿತೊಲಗಿಸಿ । ಕಾಮಿತಗಳನುಸು ।ತ್ರಾಮಾದಿಗಳಿಗಿತ್ತು।

Digitized by ROJA MUTHIAH RESEARCH LIBRARY

[ ಕುಮಾರಸ್ವಾಮಿ ) ರಾಗ__ ತಾಳ.

।ಆರುನೀವೆಲ್ಲಿಂದ ಬಂದಿರಿ ಯೆಂಬಂತೆ.।

ಸೊಲ್ಲಿಪುದೇತಕೆತಾತನೆನೀ ॥ಪ॥ ಕೊಲ್ಲುವೆಖುಲ್ಲರಪ್ರೂತನೆನೀ ।ಅ। ನಿನ್ನಕೃಪೋನ್ನತಿ।ಯನ್ನೊಳಗಿರುತಿರೆ।ಕುಂನಿರಕ್ಕಸರನುಬಿಡುವೆನೆನೀ ॥೧॥ ತರಿಯುತದುರುಳರ । ಪೊರೆಯುತಲಮರರ । ಬರುವೆಕೃಪಾಕರ । ಶುಭಕರ। ನೀ ॥ ೨ ॥ [ ಗಿರಿಜೆ ಕಡೆತಿರುಗಿ ) ಮಾತೆವಿನತಪಾರಿ। ಜಾತೆಯೆಸದ್ಗುಣ। ಪ್ರೂತೆಯೆವಂದಿಪೆ । ಕಳುಹಿಸುನೀ । ೩।

( ಗಿರಿಜೆ ) ಬಾಲಕನೆ ಲೋಕರಕ್ಷಣಧುರೀಣತೆಯನ್ನು ಧರಿಸುವದಕ್ಕೆ ಯಿದುತಾನೆ ಸಹಜವಾಗಿರುವದು ನಿನಗೆ ಜಯವಾಗಲಿ ಹೋಗಿ ಶರಣಾಗತರನ್ನು ಉದ್ಧರಿಸು ॥

( ಈಶ ] ಎಲೈ ವೀರಬಾಹುವೆ ಸಕಲ ಭೂತಭೇತಾಳ ರುದ್ರಗಣಭೈರವ ಸಹ ಕುಮಾರನೊಡನೆ ಹೋಗುವದು.

( ವೀರಬಾಹು ] ಪರಮೇಶನೆ ಅಪ್ಪಣೆಗನುಸಾರವಾಗಿ ಸರ್ವರು ಸಿದ್ಧವಾಗಿರುವರು

( ಈಶ ) ಲಕ್ಷ್ಮೀವರನೆ ದೇವಗಣಸಮೇತ ಈ ಶಾರದಾವರನು ನೀವುಗಳೆಲ್ಲರು ಹೋಗುವದು.

( ವಿಷ್ಣು ) ಮಹೇಶನೆ ಚಿರಕಾಲದಿಂದ ಯೋಚಿಸಿದ್ದ ಮಹಾತ್ಕಾರ್ಯಕ್ಕೆ ಫಲವು ಈಗ ಬಂದಿತು ಅಪ್ಪಣೆಯಂತೆ ನಡೆಯುವೆವು.

[ ಕುಮಾರ ] ಜನಕನೆ ನಾನು ಪೋಗಿಬರುವೆನು.

( ಈಶ ] ಕಂದ । ಭಜಕಾರ್ತಿದಾತನಾಗುತ । ಕುಜನರನಿಜಶರದಿ ಕಡಿದುಕರವಂಪಿಡಿದು । ವಿಜಯಾಂಗನೆಯಳಬಹುದಾ। ತ್ಮಜಬೇಗದಿಶುಭವು ನಿರತಲಭಿಸಲಿನಿನಗಂ ॥

( ಯಂದು ಮಹೇಶನು ಗಿರಿಜೆಯು ಮರೆಯಾಗುವರು )

[ ಸೇನೆ ) ರಾಗ__ನೋಟು.

।ಬಂನಿರಂಣ ಬಂನ್ನಿರಿ ॥ ಯೆಂಬಂತೆ.

ಭಲರೆಬಂನಿಬಂನಿರಿ । ಖಳರತಲೆಯತರಿಯಿರಿ । ಚಳಕದಿಂದಮೆರೆಯಿರಿ ಛಲವತೋರಿರಿ ॥ ಪ । ಧೀರಕಂಠೀರವ । ಮಾರವೈರಿಸಂಭವ । ಗಾರುಸಮರುಸೆಣಸುವ । ರಾರುಶಿವಶಿವಾ ॥ ೧ । ಕೆಟ್ಟರೆಲ್ಲಕ್ರೂರರು । ಶಿಷ್ಟಗಧಿಕಭಾರರು । ಶಿಷ್ಟರೆಲ್ಲನಲಿವರು । ತುಷ್ಟಿಪಡುವರು ॥೨॥ ಹೊಂಚನರಿದು

Digitized by ROJA MUTHIAH RESEARCH LIBRARY



ಹೊಂಚನರಿದುಮುಂಚುವ । ಚಂಚಲವನುತೊರೆಯುವೆ । ಯುಕಾಣ್ಬುದು । ಕೊಂಚನಿಲ್ಬುದು । ೩ ।

( ಯಂದು ಸೇನೆ ನಿಂದಿರಲು )

( ನಾರದರು ) ರಾಗ__ದೇಶಿಕಾಪಿ__ಆದಿತಾಳ.

(ಶ್ರೀಲಕ್ಷ್ಮೀರಮಣ) ಯೆಂಬಂತೆ.

ಕ್ಷೀರಾಬ್ಧಿಶಯನ । ನಾರಾಯಣ ॥ ಪಲ್ಲ ॥ ನೀರಜಭವಸುರ ನಾರ ವಿನುತಚರ । ಣಾರವಿಂದಮಹೀ । ನಾರಿಮನೋಹರ । ೧ । ಅತುಲಿತಸುಚರಿತ । ಯತಿತತಿವಂದಿತ । ಪತಿತಜನಾವನ। ರತಿಪತಿತಾತನೆ ॥೨॥ ಪೀತಾಂಬರಧರ । ಖ್ಯಾತದಯಾಕರ । ಭೂತೇಶ್ವರಸಂ । ಪ್ರೀತನೆಪಾಲಿಸು । ೩ ॥

ಎಲೈ ಲೋಕದ ಪುಣ್ಯಪುಂಜ ರೂಪೆನಿಸುವ ಕುಮಾರಸ್ವಾಮಿಯೇ ಯಿಲ್ಲಿ ತೋರುವ ಕ್ರೌಂಚ ಪರ್ವತ ನಾಮಕನಾದ ದೈತ್ಯನು ಅಗಸ್ತ್ಯರಿಗೆ ಮಾಡಿದ ಅಪಮಾನದಿಂ ಹೀಗಿರುವನಾದ್ದರಿಂದ ಮೊದಲು ಯಿವನ ಸಂಹರಿಸಿ ತಾರಕನಂ ಕೊಲ್ಲುವದು ಹಾಗಲ್ಲದಿದ್ದರೆ ಅವನಿಗೆ ಸಹಾಯನಾದ ಯಿವನಿಂದ ರಕ್ಕಸರ ವಧೆಗೆ ತಾಮಸವು ಬಳಲಿಕೆಯು ಉಂಟಾಗುವದು.

( ಕುಮಾರಸ್ವಾಮಿ )ದೇವಮುನಿಯೆ ನಿಂನ ಮಾತಿನಂತೆ ಮಾಡುವೆನು.

( ನಾರದ ಹೋಗುವರು. )

(ಕುಮಾರ] ಎಲೈ ವೀರಬಾಹುವೆ ಸೇನಾ ಸಮೇತನಾಗಿ ಹೋಗಿತಾರಕನ ಪುರವಂ ಮುತ್ತಿಗೆಯಂ ಮಾಡುನಾನು ಬೆಂಬಳಿಯಲ್ಲಿಯೇ ಇರುವೆನು.

[ ವೀರಬಾಹು ] ಅಪ್ಪಣೆ (ಯಂದು ಸೇನೆಗೆ ಆಜ್ಞೆಮಾಡುವನು.)

[ಸೇನೆ ತಾರಕನ ಪುರದ ಬಳಿಗೆಬಂದುಕೋಲಾಹಲಧ್ವನಿಯಂಮಾಡುವರು]

( ತಾರಕಾದಿ ದೈತ್ಯರು ಸಭೆಯಲ್ಲಿ ಆ ಧ್ವನಿಯನ್ನು ಕೇಳಿ ]

ಕಂದ । ಘಡಘಡಬಂದಿಹಭಟನಾರ್ । ಪೊಡವಿಯೊಳೆಂಮಧಿಕವಾದಶೌರ್ಯವಕೇಳ್ದುಂ । ಜಡಜಭವಮೃಡಹರೀಂದ್ರರ್ । ನಡುಗುತ್ತಿಹರಲ್ತಿಚೋದ್ಯಮಪ್ಪುವದೀಗಳ್ ।

[ ಸಿಂಹಾಸ್ಯ ] ಎಲೈ ಸಹೋದರನೆ ನೀಚರಾದ ದೇವತೆಗಳಲ್ಲದೆ ಮತ್ತ್ಯಾರನ್ನು ಕಾಣಲಿಲ್ಲ.

[ ತಾರಕ ] ರಾಗ__ಸುರಟಿ__ಆದಿತಾಳ.

ಬಂದನೆಭಾಪುರೆಸುರಪ । ಸುರ । ವೃಂದಾರವಿಂದಸುದಿನಪ ॥ ಪಲ್ಲ॥ ಹಿಂದೆನಂಮಯಭಯ । ದಿಂದೋಡಿತಂನಯ । ಸುಂದರಿಯರತೊರೆಯಲತೆ

ುಕಾಂದಪೆ । ಮತಿಶ್ರೊಂದದೆ । ಭೀತಿ । ಯೊಂದದೆಧೈರ್ಯವಿ
। ಘಡಘಡದುರುಳಿನ । ಪಿಡಿಯುತಲೊಡಲನು । ಕಡಿದೀಡಾಡ
ುತಿಹೆನೆ।ಫಲಸೇರಿತು।ಛಲವಿಾರಿತು।ಖತಿಯೇರಿತು। ನಾಸ್ಯೆಸುವೆನೆ।೧।
ಹರನಸಹಾಯವು । ದೊರಕಿತುನಂಮೊಳು । ಭರದಿಂದಲಿಗೆಲ್ಲುವೆವೆಂದು ।
ಕೋರಿಖೂಳರು । ಯಿಂನುಬಾಳರು । ಭಯದಾಳದೆಪೋಗಿಹರಿಂದು । ೨ ।

ಒಳ್ಳೇದು ಎಲೈ ಸಹೋದರನೆ ಸೇನೆಯಂ ಸಿದ್ಧಗೊಳಿಸು

[ ಸಿಂಹಾಸ್ಯ ] ಎಲೈ ದನುಜಾಧಿಪನೆ ಅಪ್ಪಣೆಯಂತೆ ಸಿದ್ಧಗೊಳಿಸಿರುವೆನು.

( ಬಾರೊಬಾರೊ ಹೋಗುವ ) ಯೆಂಬಂತೆ.

[ ಸೇನೆ ) ರಾಗ__ನೋಟು__

ಬಂನಿರೆಲ್ಲಬಂನಿರಿ । ಸುರರಕೊಲ್ಲಿರಿ । ಯಿಂನುತಡವಮಾಡದೆ । ಬಂನಿ
ಮೋದದೆ । ೧ ।ಪಿಡಿದಖಡುಗದಿಂದಲಿ ।ಕಡಿದುಭರದಲಿ। ಕೆಡುಗಸುರರಶಿರಗ
ಳ । ಪಡೆವಜಯುಗಳ । ೨ । ಕಂಡರೆವ್ಮಭಂಡರು ।ತುಂಡವೆತ್ತರು। ದಿಂಡು
ದರಿವಕ್ಷಣದೊಳು । ದ್ದಂಡತನದೊಳು। ೩ ॥

[ ಸಿಂಹಾಸ್ಯ ] ಎಲೈ ತಾರಕಾಖ್ಯನೆ ಸೇನೆಯು ಸಿದ್ಧವಾಗಿರುವದು.

( ಚಾರಕ ) ದನುಜಾಧಿಪನೆ ನಿನಗೆ ಜಯವಾಗಲಿ ಮಹೇಶನ ಪುತ್ರನಾದ ಕುಮಾರನನ್ನು ಸಹಾಯಮಾಡಿಕ್ಕೊಂಡು ಬ್ರಹ್ಮ ವಿಷ್ಣು ಮಹೇಂದ್ರಾದಿಗಳು ಯುದ್ಧಕ್ಕೆ ಬಂದಿರುವರು.

( ತಾರಕ ಯುದ್ಧಕ್ಕೆ ಅಪ್ಪಣೆಯಂ ಕೊಡುವನು )

( ಸೇನೆ ) ನೋಟು । ಭಾಪುರೆಬಂದಿರೆಸುರರುಗಳೆ।ನಿಂ ।ವಿಕ್ರಮಪೌರು
ಷದೊಳುನಂಮುಗೆಲೆ । ರೂಪನುಮರಸುತಪೋಗಿಸಲೆ । ಗಿರಿ ।ಕೂಪದೊಳಗೆ
ಸೇರಿದ್ದಿರೆಲೆ ॥ ಸುರರು । ಆಪರಿಕಾಲವಿದಲ್ಲವೆಲೆ । ಬಹು । ಪಾಪಿಗಳಿರ
ನೋಡುವದುಸಲೆ । ೧ । ಸುರರು । ದುರುಳದೈತ್ಯನಾಳ್ಗಳಿಕೇಳಿ।ನಿಮ ।ಗರ
ರೆಬಂತುಮರಣವುತಾಳಿ । ಅರಚಿಕೊಂಪರೇನಿದೆಹೇಳಿ । ಬಲುಸ್ಮರಿಸಿನಿಂಮ
ದೈವವನೇಳಿ ॥ ದೈತ್ಯರು । ಮರುಳರೆನಿಂಮನುಕೊಲ್ಲುತಲಿ । ನಾವ್ಸ್ಮ
ರಿಪೆವುದೇವರಭಕುತಿಯುಲಿ ॥೨॥ ದೈತ್ಯರು । ಘಡಘಡಬಿಡುಗಂಟ್ಬಿಡಿಸು
ವೆವು । ನಿಂ।ಮೊದಲಂನೀಕ್ಷಣಬಗೆಯುವೆವು।ಅಡಿಯಂನಿಡದೊಲುಬಡಿಯುವೆ
ವು । ಬಿಡ । ದೊಡನೆಘಣೆಯುಲಿಪಿತೊಡಸುವೆವು ॥ ಸುರರು । ಕಿಡಿಯುಡವಿ
ಯೆಸುಡುಪ್ರೋಲ್ಲಾವು । ಕೆಡುಗರೆಕಡಿದೀಡಾಡುವೆವು ॥ ೩॥



( ಯಂದು ಯುದ್ಧಮಾಡಿ ರಕ್ಕಸರು ಪಲಾಯನ ಹೋ

[ ಸಿಂಹಾಸ್ಯ ] ಕಂಧ । ಎಲವೊಮಹೇಂದ್ರನೆಭೀಭೀ
ನೆತ್ತುತ್ತನಿಲ್ಲೆಭಟರೊಳುನೀನಾ । ಲಲನೆಯರಬಿಟ್ಟುಭಯದಿಂ।ದ
ಡಿದಪರಿಯಮರದುಬಂದೀಗೆಂವೆಸ್ಮೇಳ್ ।

[ಇಂದ್ರ ] ಪಾಪಿಯೇ ಸಜ್ಜನರಿಗೆ ದೈವವೇ ಸಹಾಯವಲ್ಲವೆ ? ಈಗ ನಿಂಮ ವಂಶನಾಶಕನಾದ ಈಶನ ಕುಮಾರ ಬಂದಿರುವದನರಿಯದೆ ಯಾಕೆ ಹೀಗೆ ಬೊಗಳುವೆ ನಿಲ್ಲು

( ಸಿಂಹಾಸ್ಯ ) ಎಲವೋ ಬಲಹೀನನಾದ ಯಿಂದ್ರನೆ ಮಹೇಶನಿಗೆ ಹೆದರದ ನಾವು ಕುಮಾರನಿಗೆ ಬೆದರುವರೆ ಮೊದಲುನಿನ್ನ ಸಂಹರಿಸುವೆನು ನಿಲ್ಲು [ಯಿಂದ್ರನು ಸಿಂಹಾಸ್ಯನು ಯುದ್ಧವಂ ಮಾಡಿಇಂದ್ರಸೋಲುವನು]

( ವೀರಬಾಹು ) ಯಲಾ ಪಾಪಿಯಾದ ದನುಜನೆ ಯಿಂದ್ರನಂ ಜೈಸಿದೆನೆಂಬ ನಿಂನ ಸಂತೋಷವಂ ಬಿಡು ನಿಂನ ಪ್ರಾಣವನ್ನು ಕ್ಷಣ ಮಾತ್ರದಲ್ಲೀ ನಾಶಗೊಳಿಸುವೆನು ನಿಲ್ಲು

[ ಸಿಂಹಾಸ್ಯ ] ಯಲವೋ ವೀರಬಾಹುವೆ ನರಿಯು ಮೃಗೇಂದ್ರನಲ್ಲಿ ಸರಸವಾಡಿದಂತೆ ನಿಂನ ಗಣಿಸದಿರುವ ನಂಮೊಡನೆಯುದ್ಧಕ್ಕೆ ಬಂದೆಯ ನಿಲ್ಲು ( ಯಂದು ಯುದ್ಧಮಾಡಿ ಸಿಂಹಾಸ್ಯ ಸಾಯುವನು ಇಂದ್ರಾದಿಗಳು ಹೊಗಳುವರು ) (ರಾಕ್ಷಸರ ಮಕ್ಕಳು ಮೂರು ಜನರೂ ಬಂದು)

ಎಲವೆಲವೋ ವೀರಬಾಹುವೆ ನಮ್ಮ ಜನಕನನ್ನುಗೆದ್ದುಮತ್ತೂಗೆಲ್ಲುವದಕ್ಕೆ ನಿಂದಿರುವ ನಿಂನ ಕ್ಷಣ ಮಾತ್ರದಲ್ಲಿ ನಾಶಗೊಳಿಸುವ ನಂಮೊಡನೆ ಯುದ್ಧಕ್ಕೆ ನಿಲ್ಲು

— ~~320~~ 295

( ವೀರಬಾಹು ) ಯಲವೋ ಖೂಳರಾದ ದನುಜರ ಬಾಲಕರೆ ಸರ್ಪದ ಮರಿಯು ಸಣ್ಣದೆಂದು ಭಾವಿಸಿದರೆ ಅವು ತಂಮ ವಿಷವನ್ನು ಬಿಡಲಾರವುನಿಮ್ಮನ್ನು ಈ ಕ್ಷಣವೆ ಸಂಹರಿಸುವೆನು ನಿಲ್ಲಿ ('ಎಂದು ೩ ಜನರನ್ನು ಸಂಹರಿಸುವನು)

( ತಾರಕ ) ಯಲವೋ ನೀಚನಾದ ವೀರಬಾಹುವೆ,

ರಾಗ__ಸುರಟಿ__ಆದಿತಾಳ.

ಅನುವಿಂದಯುದ್ಧಕೆಬಂದೆಯ । ಯಂ।ಮನುಜತನುಜರಕೊಂದೆಯ
ನಿನ।ಗಿನಿತುಸತ್ವವೆಬಾಲನೆ। ಬಲು।ನೆನೆಯೊದೈವವಖೂಳನೆ।೧। ವೀರಬಾಹು।
ಮತಿಹೀನಯೇತಕೆಬೊಗಳುವೆ । ಕ್ಷಿತಿಯೊಳಗೆನಿನಗಿದುನ್ಯಾಯುವೆ । ನುತ
ಸತ್ಯಸೀಲರಬಾಧಿಸಿ।ಗತಪುಣ್ಯಮಡಿಯುವೆಸಾಹಸಿ।೨।ತಾರಕ॥ನಿಕೆಣಕಿಬಾ

Digitized by ROJA MUTHIAH RESEARCH LIBRARY

0,33,2PUT G M93

...। ಯೆಲ। ತರಳೆಯುದರಂತೆಂಮುವ । ಬರಿದೇಕೆಕೆಣಕುತೆಸಾ
...ುದನರಿಯುದೆಂಮೊಳುಸೂನುವೆ। ೨।

[...ೀರಬಾಹು] ನೀಚನೆ ನಿನ್ನೊಡನೆ ವಿಶೇಷ ಸಂಭಾಷಣೆಯಿಂದ ಪ್ರಯೋಜನವಿಲ್ಲ ಯುದ್ಧಕ್ಕೆ ನಿಲ್ಲು ನಿಲ್ಲು [ಯೆಂದು ಇಬ್ಬರು ಯುದ್ಧವಂ ಮಾಡಿ ತಾರಕನು ಮರೆಯಾಗುವನು ]

( ವೀರಬಾಹು ತಾರಕನೊಂದಿಗೆ ಹೋಗಿ ) ಆಹಾ ಯಿದೇನು ಈ ವಿಚಿತ್ರವಾದ ಗೃಹದ ಮನೋಹರವನ್ನು ನೋಡಿ ನನಗೆ ಪರಮಾಶ್ಚರ್ಯವಾಗುವದಲ್ಲ [ಯೆಂದು ಸಂಚರಿಸುತ್ತಾ ತಾರಕನು ಮಾಡಿರುವ ಮಾಯದ ಮನೆಯಲ್ಲೀ ಯಿರುವನು )

( ತಾರಕ ಬಂದು ) ನೀಚನಾದ ವೀರಬಾಹುವನ್ನು ನಂನ ಮಾಯಾ ಪಾಶದಿಂದ ಕಟ್ಟಿರುವೆನು ಯಿಂನುಮೇಲೆ ದೇವತೆಗಳನ್ನು ಹೆಸರಿಲ್ಲದಂತೆ ಮಾಡುವೆನು (ಎಂದು ಗದೆಯನ್ನುಹಿಡಿದುಕೊಂಡು ಒಳಕ್ಕೆಹೋಗುವನು)

( ನಾರದ ಬಂದು ) ಆಹಾ ಯೆಂತ ಮೋಸವಾಯಿತು ಈ ತಾರಕನು ಮಾಡಿದ ಮಾಯದ ಗೃಹದಲ್ಲಿ ವೀರಬಾಹುವು ಸಿಕ್ಕಿ ನಿಂದಿರುವನು ದೈತ್ಯನಾದರೋ ದೇವತೆಗಳನ್ನೆಲ್ಲ ಕೊಲ್ಲುತ್ತಿರುವನು ಈ ಕ್ಷಣವೇ ಹೋಗಿ ಕುಮಾರನಿಗೆ ತಿಳಿಸಿ ಈ ತಾರಕನಂ ಸಂಹರಿಸಿ ವೀರಬಾಹುವಂ ಬಿಡಿಸುವಂತೆ ಮಾಡಿಸುವೆನು. ( ಯೆಂದು ಒಳಕ್ಕೆ ಹೋಗಿ ಕುಮಾರಸ್ವಾಮಿ ಸಮೇತ ಬಂದು ) ಕೃಪಾಕರನೆ ವೀರಬಾಹು ತಾರಕನ ಮಾಯಾಗೃಹವನ್ನು ಸೇರಿರುವನು ದನುಜನಾದರೋ ದೇವತೆಗಳನ್ನು ಸದೆ ಬಡಿಯುತ್ತಿಹನು ತಾವು ಸವಂ ಮಾಡದೆ ತಾರಕನಂ ಕೊಲ್ಲು.

( ಕುಮಾರ ) ದೇವಮುನಿಯೇ ಈ ಪ್ರಮಾದವು ತಪ್ಪುವಂತೆ ಈಗಲೇ ಶಕ್ತ್ಯಾಯುಧವಂ ಪ್ರಯೋಗಿಸುವೆನು ನೋಡು [ಯೆಂದುಮುಂದಿಯನ್ನೂರಿ ಬಾಣವಂ ಬಿಡುವನು.]

( ತಾರಕ ವೀರಬಾಹು ಸಮೇತ ಈಚೆಗೆ ಬರುವನು. )

( ವೀರಬಾಹು ) ಯಲೈ ಕುಮಾರಸ್ವಾಮಿಯೆ ಈ ದೈತ್ಯನು ಬಹು ಕಪಟವಂ ನನಗೆ ಮಾಡಿ ಬಳಲಿಸಿದನು

[ ಕುಮಾರಸ್ವಾಮಿ ] ಈ ದುರುಳನ ಈಗಲೆ ಕೊಲ್ಲುವೆನು ನೋಡು [ ಯೆಂದು ಬಾಣವಂ ತೊಡುವನು]

[ನಾರದ ] ಎಲೈ ಕುಮಾರಸ್ವಾಮಿಯೆ ನಾನು ಹೋಗಿಬರುವೆನು

Digitized by ROJA MUTHIAH RESEARCH LIBRARY



[ ತಾರಕ ] ರಾಗ—ನೋಟು—

(ದನುಜಾಥಮರೊಳು । ತಸ್ಕರನೀ) ಯೆಂಬಂತೆ.

ಘಡಸೂನುನೀನುನಿಲ್ಲುನಿಲ್ಲೊಯುದ್ಧಕೆಬೇಗ ।ಬಿಡದಿಲ್ಲಿನಿಂ...ಚೆಂಡ । ನಾಡುವೆನೀಗ ॥ ೧ ॥

(ಷಣ್ಮುಖ] ಛೀನೀಚಬೊಗುಳಬೇಡಬೇಡಸಾರೊದೂರವ । ಬಹುನಾಚಿಕಿಲ್ಲದೇಕೆಪೋಗಿಸೇರಿದೆಬಿಲವ ॥ ೨ ॥

[ ತಾರಕ ) ಸುರರಂನುಕಾಯ್ವೆನೆಂದುಬಂದು । ಹರಣಬಿಡುವೆಯಾಛೀ ।ತರಳಬಾಲಲೀಲೆಯಲ್ಲ । ನೋಡುಶೌರ್ಯವ ॥೩॥

[ ಷಣ್ಮುಖ ] ಛೀ ಛೀ ನೀಚನೆ ನಿಂನೊಡನೆ ಯುಕ್ತಾಯುಕ್ತದ ಮಾತನಾಡಲು ಫಲವೇನು ನೀನು ಸುರರನ್ನು ಗೋಳಾಡಿಸಿದ ಫಲವಂನು ಈಗಫಲಿಸುವಂತೆ ಮಾಡುವೆನುನೋಡು[ಯೆಂದು ತಾರಕನಂ ಕೊಲ್ಲುವನು)

( ದೇವತೆಗಳು ಜಯಜಯಧ್ವನಿಯಂ ಮಾಡುವರು.)

[ ತಾರಕನ ಹೆಂಡತಿ ಬಂದು ] [ತಾರಕನ ಶವವಂ ಆಲಿಂಗಿಸಿ ಮೂರ್ಛೆ ಬಿದ್ದು ಚೇತರಿಸಿಕೊಂಡು )

ರಾಗ—ತೋಡಿ—ಆದಿತಾಳಂ.

[ ಮಾಯಲಾಡಿ ಮುಂದುಬಿಟ್ಟೆವೊ ) ಯೆಂಬಂತೆ.

ಪ್ರಾಣನಾಥಮೋಸಹೋದೆಯಾ । ಆಹಕಾಣೆನುನಾದಾರಿಯಾ । ಪ॥ ಜಾಣಪ್ರವೀಣಧುರೀಣಮತ್ಪ್ರಾಣಯೆಂನಾಣೆಪ್ರೋ । ೧ । ಬೇಡಬೇಡವೆಂದುಪೇಳ್ದರುಮೆತಿ।ಗೇಡನೀನಿಂತಪ್ಪರೇ। ನೋಡು।ಮಾತಾಡು। ಮುದ್ದಾಡುಗುದ್ದಾಡು । ಯಿಪಾಡಿಹಾ ।೨। ಯಂನಕಾಯ। ಲಾರುಪೇಳುಹಾಯಂನಚಿಂನವೆಬೇಗನೀಬಾ।ಮುಂನಪೋಹಂನ।ಸಂಪನ್ನಯಿದಂನ್ನಾರೊಳೆಂನುವೆ॥

ಅಹಾ ಮುಂದೆ ಯೇನುತಾನೇ ಮಾಡಲಿ ಈ ದುರವಸ್ಥೆಯನ್ನು ನಂಮ ಭಾವನಾದ ಶೂರಪದ್ಮಾಸುರನಿಗೆ ತಿಳಿಸುವೆನು[ ಯೆಂದುಹೋಗುವಳು

[ ಶೂರಪದ್ಮ ಬಂದು ಕೋಪದಿಂದ ] ಶೂರನಾದ ನಂಮ ತಾರಕಾಖ್ಯನನ್ನು ಕೊಂದ ಪಾಪಿಯಾದ ಷಣ್ಮುಖನನ್ನು ನಾಲಿಗೆಯಂ ಸೀಳಿ ಭೂತ ಭೇತಾಳಂಗಳಿಗೆ ಆಹುತಿಯನ್ನು ಕೊಟ್ಟು ಯೀಗಲೇ ಬರುವೆನು,

[ ಯೆಂದು ಹೋಗುವನು ]

[ ಷಣ್ಮುಖನನ್ನು ಕಂಡು ] ಯೆಲವೆಲವೋ ಭ್ರಷ್ಟನಾದ ಷಣ್ಮುಖನೆ,

ರಾಗ__ಜಂಜೂಟಿ__ರೂಪಕತಾಳ.

ನಹೀನನಾಗಿನೀನ । ದೇನನಾಡಿದೆ ) ಯೆಂಬಂತೆ.

ಾದಬಾಲಕೇಳು।ಪ್ರಾಣಬಿಡುವರೆ। ಭಾಪುನೀನುಬಂದೆನೋಡು ।ಬಾಲೊಸುರಾಧಮನೆಛೀ।ಬಾರೊಕುಲಾಧಮನೆಥೂ।ಹೇಡಿಕುಲಾಧಿಪನೆಛೀ॥೧

( ಷಣ್ಮುಖ ) ತಾರಕಾಪ್ತನೇನೊಖೂಳ । ಸಾರಿಬಂದೆಯಾ । ಕ್ರೂರನೀನಕೊಲ್ವೆನೀಗ । ಬಾರೊಕುಲಾಧಮನೆ ಛೀ । ನೀಚಕುಲಾಧಮನೆಥೂ । ಪಾಪಿಕುಲಾಧಮನೆಛೀ ॥ ೨ ॥

[ ಶೂರಪದ್ಮ ] ಖೂಳರಾದಸುರರಮಾತ । ಕೇಳಿಬಂದೆಯಾ । ಬಾಲಲೀಲೆಯೇನೊಪೇಳು । ಬಾಲಕುಲಾಧಮನೆಥೂ । ನೀಚಕುಲಾಧಮನೆಛೀ।ಕೀಳಕುಲಾಧಮನೆಥೂ ॥ ೩ ॥

[ ಷಣ್ಮುಖ ] ಯಲವೆಲವೋ ಸುರವೈರಿಯೆ ಈ ಕ್ಷಣದಲ್ಲಿಯೇ ನಿಂನನು ತಾರಕನ ಬಳಿಗೆ ಕಳುಹಿಸುತ್ತೇನೆ ನಿಲ್ಲು,[ಯಂದು ಮಂತ್ರಾಸ್ತ್ರವನ್ನು ಬಿಡುವನು ]

[ ಶೂರಪದ್ಮ ] ಕಂದ ॥ ಭಾಪೆಲೊಪಾಪಿಯೆನಿಂನಾ । ಟೋಪವನ್ನಾಪರಿಕಿಸಲ್ಕೆಬಂದಿಹೆಜವದಿಂ । ಯೀಪರಿಯಿಂದೆಂಮನುಜರ । ರೂಪಂಗೆಡಿಸಿರುವೆಬಿಡದೆನಿಂನನುಕೊಲುವೆಂ ॥ ೧ ॥

( ಕುಮಾರ ) ರಾಗ__ಕಾನಡ__ಆದಿತಾಳ.

[ ತೆಗೆತೆಗೆನೀಚನೆಯೀನುಡಿಯನು ) ಯೆಂಬಂತೆ.

ತೆಗೆತೆಗೆಖೂಳನೆಯೀನುಡಿಯನು । ಮಿಗೆಬಗೆಯುವೆನಿಂನಯುಪ್ರೊಡೆಯನುತೆಗೇ ॥ ೧ ॥

( ಶೂರಪದ್ಮ ) ಬಾಲಕಲೀಲೆಯಂದ್ಯೆದೆಯೇನೊ।ಫಡಖೂಳನೆನೋಡುನಾನೇಗ್ಯೆವೆನು ॥ ೨ ॥

[ ಷಣ್ಮುಖ ] ಸುರರನುನೋಯಿಸಿಬಾಳುವೆಯ । ಯಮಪುರವನುಸೇರದೆಕೇಳ್ನುಡಿಯ ॥ ೩ ॥

ನೀಚನೆ ನಿಲ್ಲು ನಿಲ್ಲು ( ಯಂದು ಯುದ್ಧಮಾಡಿ ಶೂರಪದ್ಮನನ್ನು ಕೊಲ್ಲುವನು.

[ ದೇವತೆಗಳು ] ಕೃಪಾಕರನೆ ಈಗಲೀಗ ಭೂಭಾರವು ನಿವಾರಣೆಯಾಗಿರುವದು.

[ ವಿಷ್ಣು ] ಯಲೈ ಕುಮಾರಸ್ವಾಮಿಯೆ



ಕಂದ ॥ ಹಿಂದವರೆೊಳುಕಾಯುತನಾಂ । ಪೊಂದದೆಜಯವಕ

ತ್ತ್ರಲಿಮನದೊಳ್ । ಅಂದಾಮೇರುಶಿಖರವಂ । ಚಂದದಿ

ಲಲ್ಲಿವಾಸಿಸುತಿರ್ದೆಂ ॥

ಯೀಗಲೀಗ ನನಗೆ ದನುಜಾರಿಯಂಬ ಬಿರಿದು ನಿಂನಿಂದ ಕೈಸೇರಿತು.

[ಇಂದ್ರ] ಯಲೈ ಮಹೇಶನ ಕುಮಾರಕನೆ ಯೀಗ ನಾವು ಲೋಕದಲ್ಲಿ ಮಾಡುವ ಕೃತುಗಳ ಹವಿಸ್ಸಿಗೆ ಪಾತ್ರರಾದೆವು.

[ಗುರು) ಸಂದೇಹವೇನು ಬಹುಕಾಲದಿಂದ ಸಂಕಟಪಡುತ್ತಿದ್ದ ಯೀ ಜಗದೇಕವೀರನಿಂದಪುನರ್ಜೀವಿಸಿದಂತಾಗಿರುವದು.

(ಬ್ರಹ್ಮ] ಯಲೈ ಷಣ್ಮುಖಸ್ವಾಮಿಯೆ ಹಿಂದೆ ಯಾವಕಾಲದಲ್ಲಿಯೂ ಈ ದೈತ್ಯರಿಗೆ ಸಮಾನರಾದವರು ಜನಿಸಿಯು ಈ ಲೋಕಕ್ಕೆ ಇಷ್ಟುಬಾಧೆಯು ಸಹ ನಡದಿಲ್ಲ ಇವರೇ ಹೀಗೆ ವ್ಯಾಕುಲಗೊಳಿಸಿದವರು.

(ಕುಮಾರಸ್ವಾಮಿ) ಯಲೈ ಲಕ್ಷ್ಮೀವರನೆ ಕಾರಣರೂಪಿಗಳಾದ ತ್ರೈಮೂರ್ತಿಗಳಿಂದ ಲೋಕದ ಸೃಷ್ಟಿಸ್ಥಿತಿಲಯಗಳು ನಡೆಯುವದು ಸಹಜವಾಗಿರುವದಂ ಈ ದನುಜರು ತಿಳಿಯದೆ ಇರುವದಕ್ಕೆ ಯಿವರ ಕುಲವಿದ್ಯಾವಲ್ಲವೆ ಅದಂತಿರಲಿ ಈಗ ನಿಂಮ ಕಷ್ಟಗಳು ತೊಲಗಿ ಸುಖವಾಗಿ ನಿಂಮನಿಂಮ ಅಧಿಕಾರವನ್ನು ಹೊಂದಿ ಸಂತೋಷದಿಂದ ಬಾಳುವದು.

( ಸರ್ವರು ) ದಯಾಕರನೆ ನಾವೆಲ್ಲ ಸಂತೋಷ ಸಮುದ್ರದಲ್ಲಿ ಮುಳಿಗಿರುವೆವು. ಯಿಂನ್ಯಾವ ಹಂಬಲವು ಇಲ್ಲ ಧನ್ಯರಾದೆವು.

( ಕುಮಾರಸ್ವಾಮಿ ) ಯಲ್ಲರು ಜನಕನಾದ ಮಹೇಶನ ಬಳಿಗೆ ಹೋಗುವಬಂನಿರಿ

[ ಸರ್ವರು ಅಪ್ಪಣೆಯಂದು ಹೋಗುವರು )

(ಮಹೇಶ್ವರ ಗಿರಿಜೆ ಬ್ರಹ್ಮ ವಿಷ್ಣು ದೇವ ಸಮೂಹ ಮೊದಲಾಗಿಸಭೆಯಲ್ಲಿ ನಿಂತು ಕುಮಾರಸ್ವಾಮಿಗೆ ಮಂಗಳವಂ ಹಾಡುವರು )

ರಾಗ__ಶಂಕರಾಭರಣ__ನೋಟು.

ರಾಜಿಸ್ಲೆ । ರಾಜಿತಮತಿಶೂರ । ಧೀರಾ । ದಾತಾರ ।ಸುಕುಮಾರ॥ಪ॥

ನಿಖಿಸುರಾವನ । ಪಾಪಶಮನಸುಮನಾ । ಭವ್ಯಗುಣಾಧರಾ । ಚಣ ॥ ೧ ॥

ದನುಜಕುಲಾಪಹಾ ।ಸಾರಸಭವವಿನುತಾ ।ತಾಪಹೃತಾ।ನತಾಶ್ರಿತ॥

ಕಮಲನಿಭಾ।ನನ।ಕೋಟಿಮದನರೂಪ।ಭರಿತಕೃಪಾ।ಸುರಾಧಿಪಾ।

Digitized by ROJA MUTHIAH RESEARCH LIBRARY

## ...ಂಚಮಾಂಕಂ.

...ವೃತ್ತ) ಅವನೀಭಾಗದೊಳಾಗಲಿಂದುಮಳೆಯುಂ । ಸಸ್ಯಾ...ವೃದ್ಧಿಯುಂ ।ತವೆಪ್ಪೊಂದುತ್ತಿರಲಿಂದುನೋಡೆಬುಧರಾ । ಯಜ್ಞಾದಿಗಳ್ಪೆರ್ಚಲೀ ॥ ಶಿವಪಾದಾರ್ಚನೆಯೋತ್ಸವಂಬುಧಜನರ್ ಸದ್ಧರ್ಮಸಂತೋಷಗಳ್।ಭವಕಾರುಣ್ಯರಸಾಂಬುವಿಂದೆಸುಖಿಸಲ್ಕಾಚಂದ್ರಮಾತಾರಕಂ

ರಾಗ—ಸುರಟಿ—ರೂಪಕತಾಳ. ( ಮಂಗಳ )

ಮಂಗಳಂಮಾರಮಥನ । ಮಂಗಳಾಂಗನೆ ॥ ಸದಾ ।ಪಲ್ಲ॥ ಭಂಗರಹಿತಲಿಂಗರೂಪ । ಸಂಗಿಕೃಪಾ । ಪಾಂಗತುಂಗ ॥ ಅ ॥ ಕಾಲಹೃತಕೃ । ಪಾಲಪಾಲ । ಶೈಲಬಾಲಲೋಲಮೌನಿ । ಬಾಲಪಾಲನೀಲಗಳಸು । ಶೀಲಫಾಲನಯನಶಂಭೋ । ೧ । ಮಾರಮದವಿದಾರಶೂರ । ಘೋರಭವವಿದೂರಧೀರ ।ವಾರನುತಪದಾರವಿಂದ ತಾರಕಾರಿತಾತಪೂತ ॥ ೨ । ಭೀಮಸುಗುಣ । ಧಾಮವಿಧೃತ ಸೋಮಸೋಮನಾಮಸಂಗ್ರಾಮವಿಜಿತಸಾಮಜೇಂದ್ರ । ಚಾಮಭೂಮಿಪಾಲಪಾಲಮಂಗಳಂ ।೩ ।

ಛಂದ । ಸಾರಜ್ಞರಾದಕವಿಗಳ ।ನೋರಂತಾಂನೆನದುಶಿವೆಯಕಲ್ಯಾಣವನುಂ । ತೋರಿದೊಲುಮತಿಗೆಬರೆದೆನು । ದಾರರ್ತಪ್ಪುಗಳತಿದ್ದಿಮೆರೆಸುವದನಿಶಂ । ೧ ।

[ಗಿರಿಜಾಕಲ್ಯಾಣ ನಾಟಕವು ಸಂಪೂರ್ಣಂ]



ಲೇಖಕ: ಪಂಚಣ್ಣ (        ).


ಶಿರೋನಾಮೆ: ಗಿರಿಜಾ ಕಲ್ಯಾಣಂ ನಾಟಕ

ವ. ಸಂ: 0, 33, 2 PUT 9
M93

ಕ್ರ. ಸಂ ~~320.~~ 295

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY



## ಪ್ರಸಿದ್ಧ ಪತ್ರಿಕೆ

ಅಯ್ಯಾ!

ನಮ್ಮಲ್ಲಿ ಕನ್ನಡ, ಅರವ, ಸಂಸ್ಕೃತ, ಆಂಧ್ರ ಈ ಪುಸ್ತಕಗಳು ಕ್ರಯಕ್ಕೆ ಯಾವಾಗಲೂ ಸಿದ್ಧವಾಗಿರುವುದು, ಸುಲಭಕ್ರಯಕ್ಕೆ ದೊರೆಯುವವು. ಇಷ್ಟವುಳ್ಳವರು ಈ ಕೆಳಗಿನವಿಳಾಸದಾರರಿಗೆ ಬರದುತರಿಸಿಕೊಳ್ಳಬಹುದು.

ಇದಲ್ಲದೆ (ಪ್ರಿಂಟಿಂಗ್) ಕೆಲಸಗಳು ಬಹಳ ಜಾಗ್ರತೆಯಾಗಿಯೂ, ಅತಿ ರಮಣೀಯವಾಗಿಯೂ, ಸುಲಭಛಾರ್ಜ್‌ಗಳಿಗೆ ಮಾಡುವೆವು.

---

ಟ್ರಾವಿಲಿಂಗ್ ಬುಕ್ ಮರ್ಚೆಂಟ್ ರಂಗೈಯ್ಯಶೆಟ್ಟಿ, ಮೈಸೂರು.

ಮೈಸೂರು ಶ್ರೀಕೃಷ್ಣವಿಲಾಸ ಪ್ರೆಸ್ ಪ್ರೋಪ್ರೈಟರ್.

ಎಂ. ಆರ್. ವೆಂಕಟಾಚಲಂಶೆಟ್ಟಿ.

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY